ಮೇ 4, 2025 40ನೇ ವರ್ಷದಲ್ಲಿ www.facebook.com/firstcrimenewspaper/

ಸ್ಥಾಪಕ ಸಂಪಾದಕ : ದಿ||ಎಂ. ಮಲ್ಲಿಕಾರ್ಜುನಯ್ಯ

# ಪೋಲೀಸ್ ನ್ಯೂಸ್

1983

ಪರಿಶೋಧನೆ, ಪತ್ತೇದಾರಿಕೆ ಮತ್ತು ರೋಚಕ ಸುದ್ದಿಗಳ ಸಚಿತ್ರ ಕನ್ನಡ ವಾರಪತ್ರಿಕೆ ಬೆಲೆ : ₹20/-

## ಹಿತ ಶತ್ರುಗಳೇ ಇನ್ನಾದರೂ ಭಾರತೀಯರಾಗಿ!


# ಇಂಡೋ-ಪಾಕ್ ವಾರ್ ಸನ್ನಿಹಿತ?!






## ಕೋಟ್ಯಾಧೀಶೆ 'ಮಂಗಳಮುಖಿ' ಮರ್ಡರ್!

## ಬದುಕಿದ್ದ ಹೆಂಡ್ತೀನ ಸಾಯಿಸಿ ಗಂಡನ ತಲೆಗೆ ಕಟ್ಟಿದ್ದ ಖಾಕಿ!



## ಪ್ರೀತಿಸಿದವಳು ಮದುವೆಗೆ ನಿರಾಕರಣೆ ಲಿವಿಂಗ್ ಟುಗೆದರ್‌ನಲ್ಲಿದ್ದ ಪ್ರೇಮಿ ಆತ್ಮಹತ್ಯೆ!

## ಜಾತ್ರೇಲಿ ರಕ್ತದೋಕುಳಿ ಹರಿಸಿದರು!



ಬೆಂಗಳೂರು ಮಹಾನಗರ ಈವರೆವಿಗೂ ಅದೆಷ್ಟೋ ಪೊಲೀಸ್ ಕಮಿಷನರ್‌ಗಳನ್ನು ಕಂಡಿರಬಹುದು. ಆದರೆ, ಹಾಲಿ ಬೆಂಗಳೂರನ್ನು ಖಾಕಿ ಕಣ್ಗಾವಲಿನಲ್ಲಿ ಕಾಯುತ್ತಿರುವ ಶ್ರೀ ಬಿ. ದಯಾನಂದ ಈ ಸಾಲಿನಲ್ಲಿ ವಿಶೇಷವಾಗಿ ಕಂಡಿದ್ದರೆ ಅಚ್ಚರಿ ಏನಿಲ್ಲ. ಇವರ ಅಧಿಕಾರವಧಿಯಲ್ಲಿ ಅಪರೂಪದ ಕಾನೂನು ಮತ್ತು ಸುವ್ಯವಸ್ಥೆಯನ್ನು, ಕಟ್ಟುನಿಟ್ಟಿನ ಆಡಳಿತವನ್ನು ಕಾಣಬಹುದು. ಜಾಯಿಂಟ್ ಸಿಪಿ, ಡಿಸಿಪಿ, ಎಸಿಪಿಗಳಿಂದ ಹಿಡಿದು ಪಿಐ, ಪಿಎಸ್‌ಐ ಹಾಗೂ ಪಿಸಿಗಳ ತನಕ ಅಚ್ಚುಕಟ್ಟಾದ ಕರ್ತವ್ಯವನ್ನು ಹೊರತೆಗೆದ ಕೀರ್ತಿ ಶ್ರೀ ಬಿ. ದಯಾನಂದರಿಗೆ ಸಲ್ಲುತ್ತದೆ. ಇಂಥ ದಕ್ಷ ಪೊಲೀಸ್ ಅಧಿಕಾರಿ ರಾಜ್ಯ ಪೊಲೀಸ್ ಮಹಾ ನಿರ್ದೇಶಕರಾಗಿ ಇಡೀ ಕರ್ನಾಟಕ ರಾಜ್ಯಕ್ಕೆ ತಮ್ಮ ಸೇವೆ ಸಲ್ಲಿಸುವಂತಾದರೆ ಎಷ್ಟು ಚಂದ ಅಲ್ಲವೇ.....

# ದಕ್ಷ ಪೊಲೀಸ್ ಕಮಿಷನರ್ ಶ್ರೀ ಬಿ. ದಯಾನಂದ ರಾಜ್ಯ 'ಡಿಜಿಪಿ'ಯಾದರೆ ಅದೇ ಮಹದಾನಂದ!



ಡಿಯರ್ ರೀಡರ್ಸ್, ಮೇ 30, 2023 ರಂದು ಬೆಂಗಳೂರು ಮಹಾನಗರದ ಪೊಲೀಸ್ ಕಮಿಷನರ್ ಆಗಿ ನೇಮಕಗೊಂಡ ಶ್ರೀ ಬಿ. ದಯಾನಂದ ಸರ್, ಮೇ 31ರಂದು ನಡೆಸಿದ ಪ್ರಪ್ರಥಮ ಪತ್ರಿಕಾಗೋಷ್ಠಿಯಲ್ಲಿ ನುಡಿದ ಕೆಲವು ನುಡಿಮುತ್ತುಗಳನ್ನು ನೆನಪಿಟ್ಟುಕೊಂಡಿದ್ದೀರಾ? ಇಲ್ಲವಾದರೆ ಮತ್ತೊಮ್ಮೆ ಓದಿಕೊಳ್ಳಿ...

ಪೊಲೀಸ್ ಇಲಾಖೆ ಮೇಲೆ ಜನರಿಗೆ ನಂಬಿಕೆ ಇದೆ, ಆ ನಂಬಿಕೆ ಉಳಿಸಿಕೊಳ್ಳಲು ಶ್ರಮಿಸುತ್ತೇನೆ. ಪೊಲೀಸ್ ಆಯುಕ್ತರಾಗಿ ಬೆಂಗಳೂರಿಗೆ ಸಂಬಂಧಪಟ್ಟಂತೆ ಹಲವು ಸವಾಲುಗಳಿದ್ದು, ಅವುಗಳನ್ನು ಆದ್ಯತೆ ಮೇಲೆ ತೆಗೆದುಕೊಳ್ಳಲಾಗುವುದು. ನಗರದಲ್ಲಿ ಸಂಚಾರ ನಿರ್ವಹಣೆಗೆ ನಾಗರಿಕ ಸಂಸ್ಥೆಗಳಿಂದ ಸಮನ್ವಯತೆ ಅಗತ್ಯ. ಸಂಚಾರ ದಟ್ಟಣೆಯನ್ನು ಉತ್ತಮ ರೀತಿಯಲ್ಲಿ ನಿರ್ವಹಿಸಲು ಇಲಾಖೆಯು ಏಜೆನ್ಸಿಗಳೊಂದಿಗೆ ಕೆಲಸ ಮಾಡುತ್ತದೆ.



ಸೈಬರ್ ಕ್ರೈಂ ಬೆಂಗಳೂರಿನಲ್ಲಿ ಪೊಲೀಸರಿಗೆ ಮತ್ತೊಂದು ಸವಾಲಾಗಿದೆ. ಸೈಬರ್ ಕ್ರೈಂ ಠಾಣೆಗಳಲ್ಲಿ ಪ್ರಕರಣಗಳ ಮಿತಿಮೀರಿದ್ದು, ಸದರಿ ಪ್ರಕರಣಗಳನ್ನು ಪರಿಣಾಮಕಾರಿಯಾಗಿ ತನಿಖೆ ಮಾಡಲು ಪೊಲೀಸರಿಗೆ ತರಬೇತಿಯ ಅಗತ್ಯವಿದೆ. ಸೈಬರ್ ಅಪರಾಧ ಪ್ರಕರಣಗಳನ್ನು ಸಾಮಾನ್ಯ ಠಾಣೆಗಳಲ್ಲಿ ನಿರ್ವಹಿಸಲು ಅಗತ್ಯವಿರುವ ತರಬೇತಿಯನ್ನು ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ನೀಡಲಾಗುವುದು. ಸೈಬರ್ ಕ್ರೈಂ ಪೊಲೀಸ್ ಸಿಬ್ಬಂದಿ ಮೇಲಿನ ಹೊರೆಯನ್ನು ಕಡಿಮೆ ಮಾಡಬೇಕಿದೆ... ಇವೇ ಮುಂತಾದ ನುಡಿಮುತ್ತುಗಳು ದಯಾನಂದ ಸಾಹೇಬರ ಬಾಯಿಂದ ಥೇಟ್ ಮುತ್ತುಗಳಂತೆ ಬಂದಿದ್ದವು.

ಅವರು ಸಿಟಿ ಪೊಲೀಸ್ ಆಯುಕ್ತರಾಗಿ ಅಧಿಕಾರ ವಹಿಸಿಕೊಂಡು ಹೆಚ್ಚುಕಮ್ಮಿ ಎರಡು ವರ್ಷ ಸಮೀಪಸುತ್ತ ಬಂದಿದೆ. ಅಂದು ನುಡಿದಂತೆ ಇಂದಿಗೂ ಕೂಡ ಅತ್ಯುತ್ತಮ ಆಡಳಿತ ನೀಡುತ್ತಾ ಬಂದಿದ್ದಾರೆ. ಕರ್ನಾಟಕ ರಾಜ್ಯ ಕಂಡ ಅಪರೂಪದ ಪೊಲೀಸ್ ಅಧಿಕಾರಿಗಳಾದ ಶ್ರೀ ಬಿ. ದಯಾನಂದ ಅವರು 1994ರ ಬ್ಯಾಚ್‌ನ ಐಪಿಎಸ್ ಅಧಿಕಾರಿಯಾಗಿದ್ದಾರೆ.



ಇವರ ಕಾರ್ಯವೈಖರಿ ಅದೆಷ್ಟು ಜನ ಮೆಚ್ಚುಗೆ ಪಡೆದಿದೆ ಎಂದರೆ, ಸರ್ಕಾರ ಇವರನ್ನೇ ಮುಂದಿನ ಇನ್ನೆರಡು ವರ್ಷಗಳಿಗೆ ಪೊಲೀಸ್ ಕಮಿಷನರ್ ಆಗಿ ಮುಂದುವರೆಸಲು ಆಲೋಚಿಸುತ್ತಿದೆಯಂತೆ! ಅದು ಸಾಧ್ಯವಿಲ್ಲ ಅಂತಾದರೆ, ಆಡಳಿತ ಸರ್ಕಾರ ಅವರಿಗೆ ಬಡ್ತಿ ಕೊಟ್ಟು ರಾಜ್ಯ ಡಿಜಿಪಿಯನ್ನಾಗಿ ನೇಮಿಸಲಿ ಎಂಬಾಸೆ ಸಾರ್ವಜನಿಕ ರದ್ದು...

ಶ್ರೀ ಬಿ. ದಯಾನಂದರ ಆಡಳಿತ ವೈಖರಿ ಬಗ್ಗೆ ನೋಡುವುದಾದರೆ, ಪ್ರತಿ ತಿಂಗಳು ವಾರದ ಕವಾಯತು, ಪೊಲೀಸ್ ಸರ್ವಿಸ್ ಪೆರೇಡ್, ವಾರದ ಮೊದಲ ಶುಕ್ರವಾರ ಪೊಲೀಸ್ ಪೆರೇಡ್ ನಡೆಸುತ್ತಾರೆ. ಅದರಲ್ಲಿ ಬೆಂಗಳೂರು ಸಿಟಿಯ ಅಷ್ಟೂ ಡಿಸಿಪಿಗಳು ಭಾಗವಹಿಸುತ್ತಾರೆ. ಆ ಪೈಕಿ ಓರ್ವರು ಕಮ್ಯಾಂಡರ್ ಆಗಿ ಪೆರೇಡ್ ಯಶಸ್ವಿಯಾಗಿ ನಡೆಯುವಂತೆ ನೀಡಿಕೊಳ್ಳುತ್ತಾರೆ.

ಅಂದು ಆ ತಿಂಗಳಲ್ಲಿ ಒಳ್ಳೆ ಕರ್ತವ್ಯ ಮೆರೆದ ಪೊಲೀಸ್ ಅಧಿಕಾರಿ ಗಳನ್ನು ಗುರ್ತಿಸಿ (ಡಿಸಿಪಿ,ಎಸಿಪಿ, ಪಿಐ, ಪಿಎಸ್‌ಐ, ಎಎಸ್‌ಐ, ಹೆಚ್‌ಸಿ, ಕಾನ್ಸ್ಟೇಬಲ್‌ಗಳ ತನಕ) ಅವರಿಗೆ ಪ್ರಸಂಶನಾ ಪತ್ರ ಜೊತೆಗೆ ನಗದು ಬಹುಮಾನ ನೀಡಿ ಗೌರವಿಸುತ್ತಾರೆ.ಇದು ಪೊಲೀಸ್ ಇಲಾಖೆ ಇತಿಹಾಸದಲ್ಲೇ ಮೊದಲು



ಎನ್ನಬಹುದು. ಹೀಗೆ ಮಾಡುವುದರಿಂದ ಒಳ್ಳೆ ಕರ್ತವ್ಯ ಮೆರೆವ ಖಾಕಿದಾರಿಗೆ ಇನ್ನೂ ಚನ್ನಾಗಿ ಕೆಲಸ ಮಾಡಬೇಕು ಎನ್ನಿಸಿ ಉತ್ತೇಜನ ಸಿಗುತ್ತದೆ ಅಲ್ಲವೇ.

ಇದೇ ರೀತಿ ಜನ ಸಂಪರ್ಕ ಸಭೆ ನಡೆಯಿಸಿ ಏನೇ ಸಮಸ್ಯೆ ಇದ್ದರೂ ತಕ್ಷಣ 112ಗೆ ಕರೆ ಮಾಡಲು ಕೋರಿದ್ದು, ದಾಖಲೆ ಪ್ರಮಾಣದಲ್ಲಿ ದೂರುಗಳು ಬಂದಿದ್ದು, ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಗೆ ತಿಳಿಸಿ ಅವೆಲ್ಲವನ್ನೂ ಪರಿಹರಿಸುವ ವ್ಯವಸ್ಥೆ ಮಾಡಿ ಜನ ಮೆಚ್ಚುಗೆ ಗಳಿಸಿದ್ದಾರೆ.

ಮೊದಲಾದರೆ ಪೊಲೀಸ್ ಅಂದ್ರೆ, ಹೆದರುತ್ತಿದ್ದರು ಜನ. ಆದರೆ ಈಗ ಅಣ್ಣ, ತಮ್ಮ, ತಂದೆಯಂತೆ ನೋಡುತ್ತಾ ಧೈರ್ಯವಾಗಿ ಠಾಣೆಗೆ ಬಂದು ತಮ್ಮ ಸಮಸ್ಯೆ ಹೇಳಿಕೊಳ್ಳುತ್ತಾರೆ.

ಇದೆಲ್ಲಾ ಆಗಿದ್ದು ಮಾತ್ರ ಹೃದಯಿ ಕಮಿಷನರ್ ದಯಾನಂದರ ಸರಳ ಮಾರ್ಗದರ್ಶನದಿಂದಲೇ ಹೊರತು ಬೇರೇನಲ್ಲ. ಸಿಪಿ ಸಾಹೇಬರನ್ನು ದೇವರ ಸ್ಥಾನದಲ್ಲಿ ಕಲ್ಪಿಸಿಕೊಂಡು ನೋಡುತ್ತಿರುವ ಜನತೆ ಇದೀಗ ಭಗವಂತನಲ್ಲಿ ಬೇಡುತ್ತಿರುವುದೇನು ಗೊತ್ತೆ?

ಮುಂದಿನ ಕಮಿಷನರ್ ಆಗಿ ಇವರೇ ಮುಂದುವರೆಯಬೇಕು ಮತ್ತು ಅನಂತರ ಕರ್ನಾಟಕ ರಾಜ್ಯದ ಪೊಲೀಸ್ ಮಹಾ ನಿರ್ದೇಶಕರಾಗಿ ನೇಮಕಗೊಂಡು ಇಡೀ ರಾಜ್ಯಕ್ಕೆ ದಯಾನಂದರ ಸೇವೆ ಸಿಗುವಂತಾಗಲಿ.. ಎಂದು ಬೇಡುತ್ತಿದ್ದಾರೆ! ವಿಶ್ವ ಮಹಿಳಾ ದಿನಾಚರಣೆಯ ದಿವಸ ಮಹಿಳಾ ಡಿಸಿಪಿ ನೇತೃತ್ವದಲ್ಲಿ ಸಭೆ ನಡೆಸಿ, ಉತ್ತಮ ಕರ್ತವ್ಯ, ಸಮಾಜ ಸೇವೆ ಮೆರೆದ ಮಹಿಳೆಯರಿಗೆ ಸನ್ಮಾನ ಮಾಡಿಸುತ್ತಾರೆ.



ಇದು ಇಡೀ ರಾಜ್ಯವೇ ಹೆಮ್ಮೆ ಪಡುವ ಕೆಲಸ ಅಲ್ಲವೇ. ಇದೇ ರೀತಿ ಮಕ್ಕಳ ದಿನಾಚರಣೆ, ಅಂಧರ ದಿನಾಚರಣೆ, ಇತರೆ ವಿಶೇಷ ದಿನಗಳನ್ನು ಅತೀವ ಉತ್ಸಾಹದಿಂದ ಆಚರಿಸಿ ಎಲ್ಲರ ಹುರಿದುಂಬಿಸಿ ಗೌರವಿಸಿ ಪ್ರೀತಿಸಿ ಅಂದಿನ ವಿಶೇಷತೆಯ ಮೌಲ್ಯ ಹಾಗೂ ಘನತೆಯನ್ನು ಹೆಚ್ಚಿಸುತ್ತಾರೆ.

ಪ್ರತೀ ವಾರ ಪತ್ರಿಕಾಗೋಷ್ಠಿ ನಡೆಸಿ ಆ ವಾರ ಇಲಾಖೆಯಲ್ಲಿ ನಡೆದ ವಿದ್ಯಾಮಾನಗಳನ್ನು ಮಾಧ್ಯಮಗಳ ಮುಂದೆ ವಿವರಿಸುತ್ತಾರೆ. ಸಿಪಿ ಸಾಹೇಬರ ಈ ನಡೆ ಪತ್ರಕರ್ತರ ಪ್ರೀತಿಗೆ ಪಾತ್ರವಾಗಿ ಒಳ್ಳೆ ರೀತಿಯಲ್ಲಿ ಸುದ್ದಿ ಮಾಡುತ್ತಾರೆ. ಪೊಲೀಸ್ ಕಮಿಷನರ್ ಕಚೇರಿಯಲ್ಲಿ ಕರ್ತವ್ಯ ನಿಭಾಯಿಸುತ್ತಿರುವ ಪೊಲೀಸರು,ಸಾಮಾಜಿಕ ಜಾಲತಾಣ ವಿಭಾಗ ನಿರ್ವಹಿಸುತ್ತಿರುವ ಅಧಿಕಾರಿಗಳು ಈ ವಿಷಯದಲ್ಲಿ ಬಹಳಷ್ಟು ಮುತುವರ್ಜಿವಹಿಸಿ ಮಾಧ್ಯಮಗಳೊಂದಿಗೆ ಸಂಪರ್ಕ ಸೇತುವಾಗಿ ಕಾರ್ಯ ನಿರ್ವಹಿಸುತ್ತಿರುವುದು ಪ್ರಶಂಸನೀಯ ಸಂಗತಿಯಾಗಿದೆ.

ಈ ರೀತಿ ತಮ್ಮ ಸಿಬ್ಬಂದಿಗಳಿಂದ ಒಳ್ಳೆಯ ಕರ್ತವ್ಯ ಯಶಸ್ವಿಯಾಗಿದ್ದಾರೆ. ಇಲ್ಲಿ ನೆನಪಿಸಬೇಕಾದ ವಿಚಾರ, ಒಂದಿದೆ. ಪೊಲೀಸ್ ಕಮಿಷನರ್ ಆದವರಿಗೆ ತಮ್ಮ ಅಂಡರ್ ನಲ್ಲಿ ಎಷ್ಟು ಇಲಾಖೆಗಳಿವೆ,ಅವುಗಳ ಕೆಲಸವೇನು ಎಂಬುದನ್ನ ಮೊದಲು ಗ್ರಹಿಸಬೇಕು. ನಂತರ ಸಂಬಂಧಪಟ್ಟ ಅಧಿಕಾರಿ, ಸಿಬ್ಬಂದಿಯ ಜೊತೆ ಸಭೆ ನಡೆಸಿ ಅವರಿಂದ ಕೆಲಸ ತೆಗೆಸಬೇಕು. ಇದು ಶ್ರೀ ದಯಾನಂದರಿಗೆ ಚೆನ್ನಾಗಿ ಸಿದ್ದಿಸಿದೆ!



ಕೆಲಸ ಮಾಡಿಸುವುದರ ಜೊತೆಗೆ, ಆಯಾ ಇಲಾಖೆಯಲ್ಲಿರುವ ಕುಂದು ಕೊರತೆಗಳನ್ನು ತಿಳಿದು ಅದನ್ನು ಕೂಡಲೇ ಸರಿಪಡಿಸುತ್ತಾರೆ. ಇದರಿಂದ ಅಧಿಕಾರಿಗಳಿಗೆ ಸಿಬ್ಬಂದಿಗಳಿಗೆ ತಮ್ಮ ಕರ್ತವ್ಯ ನಿರ್ವಹಿಸಲು ಹುಮ್ಮಸ್ಸು

☞ 12

## ಹಾವೇರಿ ಮಹಾನುಭಾವರು!

1994ನೇ ಬ್ಯಾಚ್‌ನ ಐಪಿಎಸ್ ಆಫೀಸರ್ ಆಗಿರುವ ಶ್ರೀ ಬಿ. ದಯಾನಂದರವರು, ಮೂಲತಃ ಹಾವೇರಿ ಜಿಲ್ಲೆಯವರು. ರಾಣೆಬೆನ್ನೂರು ಇವರ ಜನ್ಮಸ್ಥಳ. ಪೊಲೀಸ್ ಇಲಾಖೆ ಸೇರಿದ ಮೊದಲಿಗೆ ಬಿಜಾಪುರದ ಎಸ್ಪಿಯಾಗಿ ಸೇವೆ ಸಲ್ಲಿಸಿದರು. ನಂತರ ಬೆಳಗಾವಿ, ಚಿತ್ರದುರ್ಗ, ದಕ್ಷಿಣ ಕನ್ನಡ, ಕೋಲಾರ ಜಿಲ್ಲೆಗಳಲ್ಲಿ ಎಸ್ಪಿಯಾಗಿ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ. ಇಸವಿ 2015ರಲ್ಲಿ ಮೈಸೂರಿನ ಪೊಲೀಸ್ ಕಮಿಷನರ್‌ಆಗಿ ಸೇವೆ ಸಲ್ಲಿಸಿದ್ದಾರೆ. ಬೆಂಗಳೂರು ಮಹಾನಗರಕ್ಕೆ ಪೊಲೀಸ್ ಕಮಿಷನರ್ ಆಗಿ ನೇಮಕಗೊಳ್ಳುವ ಮುನ್ನ, ಇಲ್ಲಿಯೇ ಗುಪ್ತಚರ ವಿಭಾಗದ ಎಡಿಜಿಪಿಯಾಗಿ ಕರ್ತವ್ಯ ನಿಭಾಯಿಸಿದ್ದರು. ಅಲ್ಲದೆ, ಜಾಯಿಂಟ್ ಕಮಿಷನರ್ ಆಗಿಯೂ ಸೇವೆ ಸಲ್ಲಿಸಿದ್ದಾರೆ. ಅಲ್ಲದೆ ಟ್ರಾಫಿಕ್ ವಿಭಾಗದ ಮುಖ್ಯಸ್ಥರಾಗಿ ಅದ್ಭುತ ಆಡಳಿತ ನಡೆಸಿದ್ದರು. ಒಟ್ಟಾರೆ ಹೇಳಬಹುದಾದರೆ, ಆಡು ಮುಟ್ಟದ ಸೊಪ್ಪಿಲ್ಲ, ದಯಾನಂದರು ಕರ್ತವ್ಯ ನಿರ್ವಹಿಸದ ವಿಭಾಗವಿಲ್ಲ ಎನ್ನಬಹುದು... ☯

# ಕೋಟಿ ಕೋಟಿ ಆಸ್ತಿ ಹೊಂದಿದ್ದ ಮಂಗಳಮುಖಿಯ ಬರ್ಬರ ಹತ್ಯೆ !


ಕೊಲೆಯಾದ ಮಂಗಳಮುಖಿ ತನುಶ್ರೀ

ಬೆಂಗಳೂರಿನ ಕೆ.ಆರ್. ಪುರಂನಲ್ಲಿ ಕೋಟ್ಯಾಧಿಪತಿ ಮಂಗಳಮುಖಿ ತನುಶ್ರೀ ಹತ್ಯೆ ಪ್ರಕರಣದಲ್ಲಿ ಆಕೆಯ ಗಂಡ ಜಗದೀಶನನ್ನು ಬಂಧಿಸಲಾಗಿದೆ. ತನುಶ್ರೀ ಬಲವಂತದ ಮದುವೆಗೆ ಒತ್ತಾಯಿಸಿದ್ದಕ್ಕೆ ಕೊಲೆ ಮಾಡಿದ್ದಾಗಿ ಆರೋಪಿ ಒಪ್ಪಿಕೊಂಡಿದ್ದಾನೆ.

ಬೆಂಗಳೂರಿನ ಕೆ.ಆರ್.ಪುರಂನಲ್ಲಿ ಕಳೆದ ಎಂಟು ದಿನಗಳ ಹಿಂದೆ ಕೋಟ್ಯಾಧಿಪತಿ ಮಂಗಳಮುಖಿ ತನುಶ್ರೀ ಹತ್ಯೆ ಪ್ರಕರಣ ಬೆಳಕಿಗೆ ಬಂದಿದ್ದು, ಆಕೆಯ ಗಂಡನೇ ಹಣಕ್ಕಾಗಿ ಕೊಲೆ ಮಾಡಿದ್ದಾನೆ ಎಂಬ ಆರೋಪ ಕೇಳಿಬಂದಿತ್ತು. ಆದರೆ, ಇದೀಗ ಪೊಲೀಸರು ಆರೋಪಿ ಗಂಡ ಜಗದೀಶನನ್ನು ಬಂಧನ ಮಾಡಿದ್ದು, ಈ ಕೊಲೆ ಪ್ರಕರಣಕ್ಕೆ ರೋಚಕ ತಿರುವು ಸಿಕ್ಕಿದೆ.

ಹೌದು, ಕೆ.ಆರ್.ಪುರಂನಲ್ಲಿ ಮಂಗಳಮುಖಿ ತನುಶ್ರೀ ಹತ್ಯೆ ಪ್ರಕರಣಕ್ಕೆ ಆರೋಪಿಗಳ ಬಂಧನದ ನಂತರ ರೋಚಕ ತಿರುವು ಸಿಕ್ಕಿದೆ. ಬೆಂಗಳೂರಿನಲ್ಲಿ ಸಾಮಾಜಿಕ ಕಾರ್ಯಗಳನ್ನು ಮಾಡುತ್ತಾ ಕೋಟ್ಯಂತರ ರೂ. ಹಣವನ್ನು ಗಳಿಸಿದ್ದ ತನುಶ್ರೀ ಸಮಾಜದಲ್ಲಿ ಒಂದು ಗೌರವವನ್ನು ಸಾಧಿಸಲು ಹಾಗೂ ತಾನೂ ಎಲ್ಲರಂತೆ ಮಹಿಳೆ, ತನಗೂ ಒಬ್ಬ ಗಂಡನಿದ್ದಾನೆ ಎಂದು ಬಿಂಬಿಸಿಕೊಳ್ಳಲು ಜಗದೀಶನನ್ನು ಬಲವಂತವಾಗಿ ಮದುವೆ ಮಾಡಿಕೊಳ್ಳುವಂತೆ ಒತ್ತಾಯಿಸಿದ್ದಕ್ಕೆ ಕೊಲೆ ಮಾಡಿದ್ದಾಗಿ ಆರೋಪಿ ಗಂಡ ಜಗದೀಶ್ ಹೇಳಿದ್ದಾನೆ. ಇನ್ನು ಇಷ್ಟವಿಲ್ಲದಿದ್ದರೂ ಜಗದೀಶ್‌ಗೆ ತನ್ನ ಜೊತೆಗೆ ಇರುವಂತೆ ತನುಶ್ರೀ ಒತ್ತಾಯಿಸುತ್ತಿದ್ದರಿಂದ ಕೊಲೆ ಮಾಡಿ ಬಳಿಕ ತಿರುಪತಿಗೆ ಹೋಗಿದ್ದಾಗಿ ಆರೋಪಿ ಒಪ್ಪಿಕೊಂಡಿದ್ದಾನೆ.

ಕೆ.ಆರ್. ಪುರಂ ಪೊಲೀಸರು ಮಂಗಳಮುಖಿ ತನುಶ್ರೀ ಕೊಲೆ ಸಂಬಂಧ ಮೂವರು ಆರೋಪಿಗಳನ್ನು ಬಂಧನ ಮಾಡಲಾಗಿದೆ. ಜಗದೀಶ್, ಪ್ರಭಾಕರ್, ಸುಶಾಂತ್ ಬಂಧಿತ ಆರೋಪಿಗಳು ಆಗಿದ್ದಾರೆ. ತನುಶ್ರೀ ಮೃತದೇಹ ಕೆ.ಆರ್. ಪುರದ ತಮ್ಮ ಮನೆಯಲ್ಲಿಯೇ ಅರ್ಧ ಕೊಳೆತ ಸ್ಥಿತಿಯಲ್ಲಿ ಏ.20ರಂದು ಪತ್ತೆಯಾಗಿತ್ತು. ಇನ್ನು ತನುಶ್ರೀ ಮೃತದೇಹ ಮೃತಪಟ್ಟ ಮೂರು ದಿನದ ಬಳಿಕ ಪತ್ತೆಯಾಗಿತ್ತು. ಕೊಲೆ ಪ್ರಕರಣ ದಾಖಲಿಸಿ ತನಿಖೆ ನಡೆಸಿದ್ದ ಪೊಲೀಸರು, ಸೋಷಿಯಲ್ ಸರ್ವೀಸ್ ಮಾಡುತ್ತಿದ್ದ ಜಗದೀಶ್ ತನುಶ್ರೀಗೆ ಪರಿಚಯ ಆಗಿದ್ದನ್ನು ಪತ್ತೆ ಮಾಡಿದ್ದರು.



ಹೀಗಾಗಿ ತನುಶ್ರೀ ಮತ್ತು ಜಗದೀಶ್ ಮಧ್ಯೆ ಸ್ನೇಹ ಇತ್ತು. ಇವರಿಬ್ಬರೂ ಒಂದೆರೆಡು ಬಾರಿ ಸೋಷಿಯಲ್ ಸರ್ವೀಸ್ ಉದ್ದೇಶದಿಂದ ಇಬ್ಬರು ಒಟ್ಟಿಗೆ ವಿವಿಧೆಡೆ ಪ್ರಯಾಣವನ್ನೂ ಮಾಡಿದ್ದರು. ಜೊತೆಗೆ, ಜಗದೀಶ್ ಕೂಡ ಆಗಾಗ ತನುಶ್ರೀ ಮನೆಗೆ ಬಂದು ಹೋಗುತ್ತಿದ್ದನು. ಇದೇ ಸಲುಗೆಯನ್ನು ಸ್ವಾರ್ಥಕ್ಕೆ ಬಳಸಿಕೊಂಡ ತನುಶ್ರೀ ತನ್ನನ್ನ ಮದುವೆಯಾಗುವಂತೆ ಜಗದೀಶನಿಗೆ ಬಲವಂತ ಮಾಡಿದ್ದಾಳೆ. ತನುಶ್ರೀ ಕಾಟಕ್ಕೆ ಬೇಸತ್ತು ಹೋಗಿದ್ದ ಜಗದೀಶ್ ಆಕೆಯನ್ನು ಕೊಲೆ ಮಾಡಲು ನಿರ್ಧಾರ ಮಾಡಿದ್ದಾನೆ. ಆದರೆ, ಒಬ್ಬನೇ ಕೊಲೆ ಮಾಡುವುದಕ್ಕೆ ಧೈರ್ಯ ಸಾಲದೇ ತನ್ನಿಬ್ಬರು ಸ್ನೇಹಿತರಾದ ಪ್ರಭಾಕರ್, ಸುಶಾಂತ್ ರನ್ನು ಜೊತೆಯಲ್ಲಿ ಇರೋದಕ್ಕೆ ಕರೆತಂದಿದ್ದನು.

ಜಗದೀಶ್ ಎಂದಿನಂತೆ ಏ.17ರ ರಾತ್ರಿ ತನುಶ್ರೀ ಮನೆಗೆ ಬಂದಿದ್ದಾನೆ. ಈ ವೇಳೆ ಮದುವೆ ಮಾಡಿಕೊಳ್ಳುವಂತೆ ಒತ್ತಾಯ ಮಾಡುತ್ತಿದ್ದ ತನುಶ್ರೀಗೆ ಮನಸೋ ಇಚ್ಛೆ ಚಾಕು ಇರಿದು ಹತ್ಯೆ ಮಾಡಿದ್ದಾನೆ. ತನುಶ್ರೀ ಬೇಡವೆಂದು ಕೂಗಿಕೊಂಡರೂ ಕೇಳದೇ ಆಕೆ ಸತ್ತಿದ್ದನ್ನು ಖಚಿತಪಡಿಸಿಕೊಂಡು ಅಲ್ಲಿಂದ ಪರಾರಿ ಆಗಿದ್ದಾನೆ. ಇನ್ನು ಯಾರಿಗೂ ಅನುಮಾನ ಬಾರದಂತೆ ಬಾಗಿಲು ಮುಚ್ಚಿಕೊಂಡು ಹೋಗಿದ್ದಾನೆ. ಮೂರು ದಿನಗಳಾದರೂ ತನುಶ್ರೀ ಮನೆಯಿಂದ ಹೊರಗೆ ಬಾರದ ಕಾರಣ ಹಾಗೂ ಮನೆಯಲ್ಲಿ ದುರ್ವಾಸನೆ ಬರುತ್ತಿದ್ದ ಹಿನ್ನಲೆಯಲ್ಲಿ ಅಕ್ಕಪಕ್ಕದವರು ಬಂದು ಕಿಟಕಿಯಲ್ಲಿ ನೋಡಿದಾಗ ಮನೆಯ ಹಾಲ್‌ನಲ್ಲಿ ರಕ್ತಸಿಕ್ತವಾಗಿ ಅರ್ಧ ಕೊಳೆತ ಸ್ಥಿತಿಯಲ್ಲಿ ತನುಶ್ರೀ ಸತ್ತು ಬಿದ್ದಿರುವುದು ಕಂಡುಬಂದಿದೆ. ಇದನ್ನು ಸ್ಥಳೀಯರು ಪೊಲೀಸರಿಗೆ ತಿಳಿಸಿದ ನಂತರ ಸ್ಥಳಕ್ಕೆ ಬಂದು ಪರಿಶೀಲನೆ ಮಾಡಿದ ಪೊಲೀಸರು ತನುಶ್ರೀ ಜೊತೆಗಿದ್ದ ಜಗದೀಶನ ಸಂಪರ್ಕಿಸಲು ಪ್ರಯತ್ನಿಸಿದ್ದಾರೆ.

ಆದರೆ, ತನುಶ್ರೀಯನ್ನು ಮದುವೆ ಮಾಡಿಕೊಂಡಿದ್ದಾನೆ ಎನ್ನಲಾಗಿದ್ದ ಜಗದೀಶ್ ಫೋನ್ ಸ್ವಿಚ್ಡ್ ಆಫ್ ಆಗಿತ್ತು. ಆತ ಎಲ್ಲಿದ್ದಾನೆ ಎಂಬುದನ್ನು ಹಂತ ಹಂತವಾಗಿ ಪತ್ತೆ ಮಾಡಿದ ಪೊಲೀಸರು, ಎಂಟು ದಿನಗಳಲ್ಲಿ ಆರೋಪಿ ಹಾಗೂ ಆತನಿಗೆ ಕುಮ್ಮಕ್ಕು ಕೊಟ್ಟ ಇನ್ನಿಬ್ಬರು ಸ್ನೇಹಿತರಾದ ಪ್ರಭಾಕರ್, ಸುಶಾಂತ್ ಸೇರಿ ಮೂವರನ್ನೂ ಬಂಧನ ಮಾಡಿದ್ದಾರೆ. ಹೀಗಾಗಿ ಕೆ.ಆರ್.ಪುರಂ ಪೊಲೀಸರು ಮೂವರನ್ನ ಬಂಧಿಸಿದ್ದು, ಕೋರ್ಟ್ ಮುಂದೆ ಹಾಜರುಪಡಿಸಿದ್ದಾರೆ. ☯



ಆರೋಪಿ ಜಗದೀಶ


ಆರೋಪಿಗಳಾದ ಪ್ರಭಾಕರ ಹಾಗೂ ಸುಶಾಂತ್

# ಪ್ರೀತಿ ಮಾಡಿದ್ದಕ್ಕೆ ಅಪ್ರಾಪ್ತ ಮಗಳನ್ನು ಕೊಂದು ನದಿಗೆ ಎಸೆದ ತಂದೆ!

ಪಕ್ಕದ ಮನೆಯ ಯುವಕನನ್ನು ಪ್ರೀತಿಸುತ್ತಿದ್ದ ಅಪ್ರಾಪ್ತ ಮಗಳಿಗೆ ಬುದ್ಧಿ ಹೇಳಿದರೂ ಕೇಳದ ಕಾರಣ ಕುಪಿತನಾದ ತಂದೆ ಮರ್ಯಾದೆಗೆ ಅಂಜಿ ಮಗಳನ್ನು ಹತ್ಯೆಗೈದು ಕೃಷ್ಣಾ ನದಿಗೆ ಎಸೆದ ಹೃದಯ ವಿದ್ರಾವಕ ಘಟನೆ ಬರೋಬ್ಬರಿ ಏಳು ತಿಂಗಳ ನಂತರ ಬೆಳಕಿಗೆ ಬಂದಿದೆ. ಪ್ರಿಯಕರನ ವಿರುದ್ಧ ದಾಖಲಿಸಿದ್ದ ಪೋಕ್ಸೋ ಪ್ರಕರಣದ ವಿಚಾರಣೆ ನ್ಯಾಯಾಲಯದಲ್ಲಿ ಬಂದಾಗ ನ್ಯಾಯಾಧೀಶರು ಬಾಲಕಿಯನ್ನು ಹಾಜರುಪಡಿಸಲು ಸೂಚಿಸಿದ್ದಾರೆ. ಇದರಿಂದಾಗಿ ಬಹುತೇಕ ಮುಚ್ಚಿ ಹೋಗಿದ್ದ ಪ್ರಕರಣ ಬಯಲಿಗೆ ಬಂದಿದೆ. ಪುತ್ರಿಯನ್ನೇ ಕೊಂದ ತಂದೆಯನ್ನು ಬಂಧಿಸಿ ಜೈಲಿಗೆ ಕಳುಹಿಸಲಾಗಿದೆ. ರಾಯಚೂರು ಜಿಲ್ಲೆ ಲಿಂಗಸುಗೂರು ತಾಲೂಕಿನ ಹಂಚಿನಾಳ ಗ್ರಾಮದ ಲಕ್ಕಪ್ಪ ಕಂಬಳಿ ಬಂಧಿತ.



**ಏನಿದು ಪ್ರಕರಣ?**

ಕುರುಬ ಸಮುದಾಯಕ್ಕೆ ಸೇರಿದ ಲಕ್ಕಪ್ಪ ಕಂಬಳಿ ಮಗಳು ರೇಣುಕಾ (17) ಅದೇ ಗ್ರಾಮದ ಪರಿಶಿಷ್ಟ ಪಂಗಡಕ್ಕೆ ಸೇರಿದ ಹನುಮಂತ ಎಂಬ ಯುವಕನನ್ನು ಪ್ರೀತಿಸುತ್ತಿದ್ದಳು. ರೇಣುಕಾಳನ್ನು ಹನುಮಂತ ಅಪಹರಣ ಮಾಡಿದ್ದಾನೆ ಎಂದು ಈ ಹಿಂದೆ ಲಿಂಗಸುಗೂರು ಪೊಲೀಸ್ ಠಾಣೆಗೆ ಲಕ್ಕಪ್ಪ ದೂರು ನೀಡಿದ್ದ. ಪೋಕ್ಸೋ ಕಾಯ್ದೆಯಡಿ ಪ್ರಕರಣವೂ ದಾಖಲಾಗಿತ್ತು. ಅನಂತರ ಪೊಲೀಸರು ಹನುಮಂತನನ್ನು ಬಂಧಿಸಿದ್ದರು. ಆಗ ಲಕ್ಕಪ್ಪ ತನ್ನ ಮಗಳು ರೇಣುಕಾಳನ್ನು ಮನೆಗೆ ಕರೆದುಕೊಂಡು ಬಂದಿದ್ದ. ಮೂರು ತಿಂಗಳ ಬಳಿಕ ಹನುಮಂತ ಜಾಮೀನು ಪಡೆದು ಜೈಲಿನಿಂದ ಹೊರ ಬಂದಿದ್ದ.



ಎಸ್ಪಿ ಪುಟ್ಟಮಾದಯ್ಯ

ಬಳಿಕ ಹನುಮಂತ-ರೇಣುಕಾ ಮತ್ತೆ ಪ್ರೀತಿ, ಪ್ರೇಮ ಮುಂದುವರಿಸಿದ್ದರು ಎನ್ನಲಾಗಿದೆ. ಇದು ಗೊತ್ತಾಗಿ '18 ವರ್ಷ ತುಂಬಿದ ಬಳಿಕ ಸೂಕ್ತ ವರನನ್ನು ನೋಡಿ ನಿನಗೆ ಮದುವೆ ಮಾಡುತ್ತೇವೆ. ಈಗಾಗಲೇ ನಮ್ಮ ಮರ್ಯಾದೆ ಕಳೆದಿದ್ದೀ. ಮತ್ತೆ ಕಳೆಯಬೇಡ' ಎಂದು ಲಕ್ಕಪ್ಪ ಬುದ್ಧಿ ಹೇಳಿದರೂ ಕೇಳದ ರೇಣುಕಾ 18 ವರ್ಷ ಆದ ಮೇಲೆ ಹನುಮಂತನ ಸಂಗಡ ಹೋಗುತ್ತೇನೆ ಪಟ್ಟು ಹಿಡಿದಿದ್ದಳು ಎನ್ನಲಾಗಿದೆ. ಕಳೆದ ವರ್ಷ ಮಹಾನವಮಿ ಅಮಾವಾಸ್ಯೆ 15 ದಿನ ಮುಂಚೆ ಅಂದರೆ ಸೆಪ್ಟೆಂಬರ್ 29ರಂದು ತಮ್ಮ ದಾಳಿಂಬೆ ತೋಟದಲ್ಲಿ ತಾಯಿ, ಮಗಳು ಹಾಗೂ ತಂದೆ ಲಕ್ಕಪ್ಪ ಕೆಲಸಕ್ಕೆ ಹೋಗಿದ್ದಾರೆ.


ಆರೋಪಿ ಲಕ್ಕಪ್ಪ

☞ 12

# ಪ್ರೀತಿಸಿದವಳು ಮದುವೆಗೆ ನಿರಾಕರಣೆ ಲಿವಿಂಗ್ ಟುಗೇದರ್‌ನಲ್ಲಿದ್ದ ಪ್ರೇಮಿ ಆತ್ಮಹತ್ಯೆ






**ಕೊಳ್ಳೇಗಾಲ**

**ಎಸ್. ಸ್ವಾಮಿ**

ಆತ ನಿಷ್ಪಾಪಿ ಹುಡುಗ, ಕಲ್ಲು ಕೋರೆಯೊಂದರಲ್ಲಿ ಕೆಲಸ ಮಾಡಿಕೊಂಡಿದ್ದ. ಕಳೆದೆರಡು ವರ್ಷಗಳಿಂದ ತನ್ನ ಪಕ್ಕದ ಊರಿನ ಹುಡುಗಿಯೊಬ್ಬಳನ್ನು ಪ್ರೀತಿಸುತ್ತಿದ್ದನು. ಆಕೆಯು ಆತನನ್ನು ಅಷ್ಟೇ ಪ್ರೀತಿಸುತ್ತಿದ್ದಳು. ಆದರೆ ಇವರಿಬ್ಬರ ಪ್ರೀತಿಗೆ ಆಕೆಯ ಪೋಷಕರಿಂದ ತೀವ್ರ ವಿರೋಧವಿತ್ತು. ಆಗಾಗಿ ಆಕೆ ಮನೆ ತೊರೆದು ಬಂದು ಅತನೊಟ್ಟಿಗೆ ವಾಸವಿದ್ದಳು. ಇಬ್ಬರು ಮದುವೆಯಾಗದಿದ್ದರೂ ಗಂಡ ಹೆಂಡಿರಂತೆ ಒಟ್ಟಿಗೆ ಬಾಳ್ವೆ ನಡೆಸುತ್ತಾ ಪ್ರಣಯದ ಪಕ್ಷಿಗಳಂತೆ ಸ್ವಚ್ಛಂದವಾಗಿ ಹಾರಾಡಿಕೊಂಡಿದ್ದರು. ಅವರಿಬ್ಬರ ಆ ಪ್ರೀತಿ ಹೆಚ್ಚು ದಿನ ಉಳಿಯಲಿಲ್ಲ, ದಿನ ಕಳೆದಂತೆ ಇಬ್ಬರ ನಡುವೆ ವೈಮನಸ್ಸು ಉಂಟಾಗಿ ಗಲಾಟೆ ಮಾಡಿಕೊಂಡಿದ್ದರು. ಈ ನಡುವೆ ಆತ ನನ್ನನ್ನು ಮದುವೆಯಾಗು ಇಲ್ಲದಿದ್ದರೆ ನನ್ನ ಬಳಿ ಇರುವ ನಮ್ಮಿಬ್ಬರ ಖಾಸಗಿ ಫೋಟೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತೇನೆ ಎಂದು ಧಮ್ಕಿ ಹಾಕುತ್ತಿದ್ದನು. ಇದರಿಂದ ಕುಪಿತಗೊಂಡ ಆಕೆಯು ಆತನ ವಿರುದ್ಧ ಪೊಲೀಸರಿಗೆ ದೂರು ನೀಡಿದ್ದಳು.

ಪೊಲೀಸರು ಗ್ರಾಮದ ಮುಖಂಡರುಗಳನ್ನು ಠಾಣೆಗೆ ಕರೆಯಿಸಿ ಅವರ ಸಮ್ಮುಖದಲ್ಲೇ ಇಬ್ಬರಿಗೂ ಬುದ್ಧಿವಾದ ಹೇಳಲು ಮುಂದಾಗಿದ್ದರು. ವಿಪರೀತ ಕುಡಿತದ ಚಟ ಮೈಗೂಡಿಸಿಕೊಂಡಿದ್ದ ಆತನನ್ನು ಗ್ರಾಮಸ್ಥರ ಮುಂದೆಯೇ ಆಕೆ ಮದುವೆಯಾಗಲು ಖಡಾ - ಖಂಡಿತವಾಗಿ ನಿರಾಕರಿಸಿ ಠಾಣೆಯಿಂದ ಹೊರ ನಡೆದಿದ್ದಳು. ಪ್ರೀತಿಸಿದವಳು ಮದುವೆಗೆ ನಿರಾಕರಿಸಿದಳು ಎಂಬ ಕಾರಣಕ್ಕೆ ಮನನೊಂದ ಆತ ಮರಕ್ಕೆ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡು ಪ್ರಾಣ ಬಿಟ್ಟಿದ್ದಾನೆ.


ಅಲ್ಲಿಗೆ ಕಳೆದ ಎರಡು ವರ್ಷಗಳಿಂದ ಪರಸ್ಪರ ಪ್ರೀತಿಸಿ ಒಂದೂವರೆ ವರ್ಷ ನನಗೆ ನೀನು ನಿನಗೆ ನಾನು ಎಂದು ಪರಸ್ಪರ ದೇಹಸುಖ ಹಂಚಿಕೊಂಡು ಗಂಡ ಹೆಂಡತಿಯಂತೆ ಒಟ್ಟಿಗೆ ಬಾಳ್ವೆ ನಡೆಸಿದ್ದ ಸಂಬಂಧವೊಂದು ಪ್ರೇಮಿಯ ಸಾವಿನಲ್ಲಿ ಅಂತ್ಯಗೊಂಡಿದೆ.


ಈ ದುರಂತ ಘಟನೆ ನಡೆದಿರುವುದು ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲೂಕಿನ ಜಾಗರಿಯ ಶಿಲ್ವೈಪುರ ಗ್ರಾಮದಲ್ಲಿ ಗ್ರಾಮದ ಶೇಷುರಾಜುವಿನ ಮಗ ಜಾನ್ಸನ್ ವಿಜಿ (29) ಪ್ರೀತಿಸಿದವಳು ಮದುವೆಗೆ ನಿರಾಕರಿಸಿದಳು ಎಂಬ ಕಾರಣಕ್ಕೆ ಮನನೊಂದು ಆತ್ಮಹತ್ಯೆ ಮಾಡಿಕೊಂಡ ಭಗ್ನ ಪ್ರೇಮಿ.


ಶಿಲ್ವೈಪುರ ಗ್ರಾಮದ ಲೇ, ಸಂದ್ಯಾಗೂ ರವರ ಮಗ ಶೇಷುರಾಜುಗೆ ಎರಡು ಹೆಣ್ಣು ಒಂದು ಗಂಡು ಮೂವರು ಮಕ್ಕಳು ಮೊದಲನೆಯವಳು ವಿನ್ಸಿಯಾ ಅಂಥೋಣಿ, ಎರಡನೆಯವಳು ನವೀನ, ಕೊನೆಯವನೇ ಮೃತ ಜಾನ್ಸನ್ ವಿಜಿ. ಈತ ಮಂಡ್ಯದ ಕಲ್ಲು ಕೋರೆಯೊಂದರಲ್ಲಿ ಕಾರ್ಮಿಕನಾಗಿ ಕೆಲಸ ಮಾಡಿಕೊಂಡು ಅಲ್ಲಿಯೇ ಉಳಿದುಕೊಂಡಿದ್ದ. ಆಗಾಗ ಊರಿಗೆ ಬಂದು ಹೋಗುತ್ತಿದ್ದ. ಜಾನ್ಸನ್ ವಿಜಿ ಶಿಲ್ವೈಪುರ ಗ್ರಾಮದಿಂದ ಬರುವಾಗ ಸಿ.ಆರ್. ನಗರದ ಮೂಲಕವೇ ಬರಬೇಕಾಗಿತ್ತು. ಈ ವೇಳೆ ಶಿಲ್ವೈಪುರ ಗ್ರಾಮದ ಪಕ್ಕದಲ್ಲಿರುವ ಸಿ.ಆರ್. ನಗರದ ಜಪಮಾಲೆ ಎಂಬುವರ ಮಗಳು 21 ವರ್ಷದ ಮೇರಿ ಅಂಜಲಿ ಎಂಬುವವಳು ಕಣ್ಣಿಗೆ ಬಿದ್ದಿದ್ದಾಳೆ. ಮೇರಿ ಅಂಜಲಿ ಮಂಗಳೂರಿನ ಕಾಲೇಜೊಂದರಲ್ಲಿ ವ್ಯಾಸಂಗ ಮಾಡಿಕೊಂಡು ಅಲ್ಲಿಯೇ ವಿದ್ಯಾರ್ಥಿ ನಿಲಯವೊಂದರಲ್ಲಿ ಉಳಿದುಕೊಂಡಿದ್ದಳು. ಆಗಾಗ ಊರಿಗೆ ಬರುತ್ತಿದ್ದಳು. ಈ ವೇಳೆ ಪರಸ್ಪರ ಇಬ್ಬರಲ್ಲೂ ಆಕರ್ಷಣೆಯಾಗಿ ಒಬ್ಬರಿಗೊಬ್ಬರು ಪರಿಚಯವಾಗಿ ಪರಿಚಯ ಪ್ರೇಮಕ್ಕೆ ತಿರುಗಿ ಕಳೆದ ಎರಡು ವರ್ಷಗಳಿಂದ ಪ್ರೀತಿಸುತ್ತಿದ್ದರು. ಆದರೆ ಈ ಇಬ್ಬರ ಪ್ರೀತಿಗೆ ಮೇರಿ ಅಂಜಲಿ ಪೋಷಕರ ತೀವ್ರ ವಿರೋಧವಿತ್ತು.



ಎಎಸ್ಐ ಮಲ್ಲಿಕಾರ್ಜುನಸ್ವಾಮಿ

ಮಗಳು ಮೇರಿ ಅಂಜಲಿ ಜಾನ್ಸನ್ ವಿಜಿಯನ್ನು ಪ್ರೀತಿಸುತ್ತಿರುವ ವಿಚಾರ ತಿಳಿದ ಪೋಷಕರು ಆಕೆಯನ್ನು ಮನೆಯಿಂದ ಹೊರ ಹಾಕಿದ್ದರು. ಈ ವೇಳೆ ಅಂಜಲಿ ಬೆಂಗಳೂರಿನಲ್ಲಿರುವ ತನ್ನ ಸೋದರ ಅತ್ತೆ ಮನೆಗೆ ಹೋಗುವುದಾಗಿ ಕಳೆದ ಒಂದೂವರೆ ವರ್ಷಗಳಿಂದ ಮೇರಿ ಅಂಜಲಿ ಮಂಗಳೂರು ತೊರೆದು ಜಾನ್ಸನ್ ವಿಜಿ ಕೆಲಸ ಮಾಡುತ್ತಿದ್ದ ಮಂಡ್ಯದಲ್ಲಿ ಬಂದು ಆತನೊಟ್ಟಿಗೆಟ್ಟಿಗೆ ಉಳಿದುಕೊಂಡಿದ್ದಳು.









ನಂತರ ಆರು ತಿಂಗಳಿಂದೀಚೆಗೆ ಇಬ್ಬರು ಮಂಡ್ಯ ತೊರೆದು ಸ್ವಗ್ರಾಮ ಶಿಲ್ವೈಪುರಕ್ಕೆ ಬಂದು ಬೇರೆ ಮನೆ ಮಾಡಿಕೊಂಡು ವಾಸವಿದ್ದರು. ಇಲ್ಲಿಗೆ ಬಂದ ನಂತರ ಇಬ್ಬರ ನಡುವೆ ವೈಮನಸ್ಸು ಉಂಟಾಗಿ ಗಲಾಟೆ ಮಾಡಿಕೊಂಡಿದ್ದರು. ಈ ವೇಳೆ ಗ್ರಾಮದ ಮುಖಂಡರು ಇಬ್ಬರಿಗೂ ಒಟ್ಟಿಗೆ ಜೀವನ ಮಾಡಿಕೊಂಡು ಹೋಗುವಂತೆ ಬುದ್ಧಿವಾದ ಹೇಳಿದ್ದರು. ಮತ್ತೆ ಇಬ್ಬರು ಜಗಳ ಮಾಡಿಕೊಂಡಿದ್ದಾರೆ ಈ ವೇಳೆ ಜಾನ್ಸನ್ ವಿಜಿ ನನ್ನನ್ನು ಮದುವೆಯಾಗು ಇಲ್ಲದಿದ್ದರೆ ನನ್ನ ಬಳಿ ಇರುವ ನಮ್ಮಿಬ್ಬರ ಖಾಸಗಿ ಪೋಟೋಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಹರಿಬಿಡುತ್ತೇನೆ ಎಂದು ಧಮ್ಕಿ ಹಾಕಿದ್ದಾನೆ. ಇದರಿಂದ ಕುಪಿತಗೊಂಡ ಮೇರಿ ಅಂಜಲಿ ಇದೇ ಏಪ್ರಿಲ್ 3ರಂದು ಇಲ್ಲಿನ ಗ್ರಾಮಾಂತರ ಠಾಣೆಗೆ ಬಂದು ಪ್ರೇಮಿ ಜಾನ್ಸನ್ ವಿಜಿ ವಿರುದ್ಧ ದೂರು ನೀಡಿದ್ದಳು.

ದೂರು ಸ್ವೀಕರಿಸಿದ ಗ್ರಾಮಾಂತರ ಠಾಣೆ ಎಎಸ್ಐ ಮಲ್ಲಿಕಾರ್ಜುನ ಸ್ವಾಮಿ ಠಾಣಾ ಪಿಎಸ್ಐ ಸುಪ್ರೀತ್ ಮಾರ್ಗದರ್ಶನದಲ್ಲಿ ಗ್ರಾಮದ ಮುಖಂಡರುಗಳಾದ ಅಂಥೋಣಿಸ್ವಾಮಿ, ಮಣಿ, ಮೊದಲೈಸ್ವಾಮಿರವರುಗಳನ್ನು ಠಾಣೆಗೆ ಕರೆಯಿಸಿ ಅವರ ಸಮ್ಮುಖದಲ್ಲೇ ಇಬ್ಬರಿಗೂ ಬುದ್ಧಿವಾದ ಹೇಳಲು ಮುಂದಾಗಿದ್ದಾರೆ. ಈ ವೇಳೆ ಮೇರಿ ಅಂಜಲಿ ಠಾಣೆಯಲ್ಲೇ ಗ್ರಾಮಸ್ಥರ ಮುಂದೆಯೇ ಈತ ತುಂಬಾ ಕುಡಿಯುತ್ತಾನೆ ಈತನನ್ನು ಮದುವೆಯಾದರೆ ನನ್ನ ಜೀವನ ಹಾಳಾಗುತ್ತದೆ ಎಂದು ಜಾನ್ಸನ್ ವಿಜಿಯನ್ನು ಮದುವೆಯಾಗಲು ಖಡಾ-ಖಂಡಿತವಾಗಿ ನಿರಾಕರಿಸಿದ್ದಾಳೆ. ಇದರಿಂದ ಮನನೊಂದು ನಿರಾಸೆಗೊಳಗಾದ ಜಾನ್ಸನ್ ವಿಜಿ ಮೇರಿ ಅಂಜಲಿಯನ್ನು ಕಾಲು ಹಿಡಿದು ಪರಿಪರಿಯಾಗಿ ಬೇಡಿಕೊಂಡರೂ ಜಾನ್ಸನ್ ವಿಜಿಯನ್ನು ಧಿಕ್ಕರಿಸಿ ಠಾಣೆಯಿಂದ ಹೊರ ನಡೆದಿದ್ದಳು. ಅಲ್ಲಿಗೆ ಕಳೆದ ಎರಡು ವರ್ಷಗಳಿಂದ ಪರಸ್ಪರ ಪ್ರೀತಿಸಿ ಒಂದೂವರೆ ವರ್ಷ ಗಂಡ ಹೆಂಡತಿಯಂತೆ ಒಟ್ಟಿಗೆ ಬಾಳ್ವೆ ನಡೆಸಿ ದೇಹಸುಖ ಹಂಚಿಕೊಂಡು ಬದುಕಿದ್ದ ಸಂಬಂಧವೊಂದು ಮುರಿದು ಬಿದ್ದಿದೆ.

ಅವಳು ಠಾಣೆಯಿಂದ ಹೊರ ಹೋದ ನಂತರ ಪೊಲೀಸರು ಜಾನ್ಸನ್ ವಿಜಿಯನ್ನು ಕೂರಿಸಿಕೊಂಡು ಅವಳು ಹೋದರೆ ಹೋಗಲಿ ಬಿಡು ನಿನಗಿನ್ನೂ ವಯಸ್ಸಿದೆ ನಿನ್ನ ತಂದೆ ತಾಯಿಗೆ ಹೇಳಿ ಬೇರೆ ಹುಡುಗಿಯನ್ನು ನೋಡಿ ಮದುವೆ ಮಾಡಿಕೋ ಎಂದು ಬುದ್ಧಿವಾದ ಹೇಳಿ ಕಳುಹಿಸಿದ್ದರು. ಆತನೂ ಸಹ ಬಹಳ ಖುಷಿಯಿಂದಲೇ ಊರಿಗೆ ಹಿಂತಿರುಗಿದ್ದ.

ಮಾರನೆಯ ದಿನ ಏ. 4ರಂದು ಮೇರಿ ಅಂಜಲಿ ಬೆಂಗಳೂರಿಗೆ ಹೊರಟು ಹೋದಳು. ಆಕೆ ಊರು ಬಿಟ್ಟು ಹೋದ ನಂತರ ಒಂದೊಂದು ಕ್ಷಣವನ್ನು ಕಳೆಯುವುದು ಜಾನ್ಸನ್ ವಿಜಿಗೆ ಒಂದೊಂದು ಯುಗ ಕಳೆದಷ್ಟು ಕಷ್ಟವಾಗಿದೆ. ಇದರಿಂದ ಜಿಗುಪ್ಸೆಗೊಳಗಾದ ಜಾನ್ಸನ್ ಆಕೆಯ ಜೊತೆ ಕಳೆದ ದಿನಗಳನ್ನು ಅರಗಿಸಿಕೊಳ್ಳಲಾಗದೆ ಮನನೊಂದು ತೊಳಲಾಡಿದ್ದಾನೆ. ಅವಳಿಲ್ಲದ ಬದುಕು ಕ್ಷಣ ಕ್ಷಣಕ್ಕೂ ಜೀವನ ಭಾರವೆನಿಸತೊಡಗಿದೆ. ಅಂದು ಸಂಜೆ ವೇಳೆಗೆಲ್ಲಾ ಮನಸ್ಸು ನಿಯಂತ್ರಣ ಕಳೆದುಕೊಂಡಿದೆ. ಯಾವಾಗ ಮನಸ್ಸು ನಿಂತ್ರಣಕ್ಕೆ ಬರಲಿಲ್ಲವೋ ಸಾಯುವ ನಿರ್ಧಾರಕ್ಕೆ ಬಂದಿದ್ದಾನೆ.

ಸಂಜೆ ಮನೆಗೆ ಹೋದವನೇ ಆಕೆಯ ಜೊತೆ ಪ್ರಣಯದ ವೇಳೆ ತೆಗೆಸಿಕೊಂಡಿದ್ದ ಫೋಟೋವೊಂದನ್ನು ತೆಗೆದುಕೊಂಡು ಸೀದಾ ತಮ್ಮ ಜಮೀನಿನಲ್ಲಿರುವ ಹುಣಸೆ ಮರದ ಬಳಿ ಬಂದಿದ್ದಾನೆ. ಅಲ್ಲಿ ತಮ್ಮಿಬ್ಬರ ಫೋಟೋವನ್ನು ಮರಕ್ಕೆ ನೇತುಹಾಕಿ ಅದೇ ಮರಕ್ಕೆ ಸೀರೆಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡು ಪ್ರಾಣ ಬಿಟ್ಟಿದ್ದಾನೆ.

ಈತ ಮನೆಯಲ್ಲಿ ಕಾಣದಿದ್ದಾಗ ಅನುಮಾನ ಬಂದು ಹುಡುಕಾಟ ನಡೆಸಿದಾಗ ಜಮೀನಿನಲ್ಲಿರುವ ಹುಣಸೆ ಮರಕ್ಕೆ ಸೀರೆಯಿಂದ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ತಿಳಿದಿದೆ.

ವಿಷಯ ತಿಳಿದ ಗ್ರಾಮಸ್ಥರು ಕೂಡಲೇ ಸ್ಥಳಕ್ಕಾಗಮಿಸಿ ಶವವನ್ನು ಕಳಗಿಳಿಸಿ ಕೊಳ್ಳೇಗಾಲ ಉಪವಿಭಾಗ ಆಸ್ಪತ್ರೆಗೆ ತಂದು ವೈದ್ಯರಿಂದ ಪಂಚನಾಮೆ ನಡೆಸಿ ವಾರಸುದಾರರಿಗೆ ನೀಡಿದ್ದಾರೆ.

ಬಳಿಕ ಮೃತನ ತಂದೆ ಶೇಷುರಾಜು ನೀಡಿರುವ ದೂರಿನ ಮೇರೆಗೆ ಕೊಳ್ಳೇಗಾಲ ಗ್ರಾಮಾಂತರ ಠಾಣೆ ಪೊಲೀಸರು ಠಾಣಾ ಮೊಕದ್ದಮೆ ಸಂಖ್ಯೆ 13/2025 ಕಲಂ 194 ಬಿಎನ್‌ಎಸ್ (ಯುಡಿಆರ್) ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ಮುಂದಿನ ಕ್ರಮ ಕೈಗೊಂಡಿದ್ದಾರೆ.



ಆರೋಪಿಗಳಾದ ಪ್ರದೀಪ್, ಪ್ರಜ್ವಲ್, ಅನಿಲ್, ಈಶ್ವರ್

# ಊರ ದೇವರ ಜಾತ್ರೆ ಓಕುಳಿಯಲ್ಲಿ ರಕ್ತದೋಕುಳಿ ಹರಿಸಿದ ಕಿರಾತಕರು!

**ಅದೊಂದು ಗ್ರಾಮದಲ್ಲಿ ಹುಡುಗಿಯೊಬ್ಬಳು ಒಬ್ಬ ಹುಡುಗನನ್ನು ಸುಮಾರು ಎರಡು ವರ್ಷಗಳ ಕಾಲ ಪ್ರೀತಿಸಿ ಅವನಿಗೆ ಟಾಟಾ ಹೇಳಿ ಬೇರೊಬ್ಬನ ಹುಡುಗನ ಜೊತೆ ಲವ್ ಮಾಡಲು ಶುರು ಮಾಡಿದಳು. ಆದರೆ ಈ ವಿಷಯ ಆ ಹುಡುಗಿಯ ಹಳೇಯ ಪ್ರೇಮಿಗೆ ಗೊತ್ತಾಗಿ ಬರೆ ಎಳೆದಂತಾಗಿತ್ತು. ತಾನು ಪ್ರೀತಿಸಿದ ಹುಡುಗಿ ತನ್ನ ಬಿಟ್ಟು ಬೇರೊಬ್ಬನ ಪ್ರೀತಿ ಮಾಡಿದರ ಪರಿಣಾಮವಾಗಿ ಹೊಸ ಪ್ರೇಮಿಯ ಜೊತೆ ಕಿರಿಕ್‌ಗಳಾಗುತ್ತಿದ್ದವು. ಹಳೆ ಪ್ರೇಮಿ ಇದ್ದವನು ಧಮ್ಕಿ ಹಾಕುವುದು, ಜಗಳ ಮಾಡುವುದು ಸರ್ವೇಸಾಮಾನ್ಯವಾಗಿತ್ತು. ಅದೊಂದು ದಿನ ಗ್ರಾಮದ ದೇವರ ಜಾತ್ರೆಯಲ್ಲಿ ಹೊಸ ಪ್ರೇಮಿ ತನ್ನ ಸ್ನೇಹಿತರೊಂದಿಗೆ ಮಾಡಿಸಿದ್ದ ಬ್ಯಾನರ್ ಕಟ್ಟಿ ಹಳೆ ಪ್ರೇಮಿಗೆ ಟಕ್ಕರ್ ಕೊಟ್ಟಿದ್ದ. ಇದೇ ಸಿಟ್ಟಿನಿಂದ ಹಳೆಯ ಪ್ರೇಮಿ ತನ್ನ ಸ್ನೇಹಿತರೊಂದಿಗೆ ಸೇರಿ ಮಧ್ಯರಾತ್ರಿ ಅಟಾಡಿಸಿ ಹತ್ಯೆ ಮಾಡಿದ ಘಟನೆ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮಾಲಾಪೂರ ಗ್ರಾಮದಲ್ಲಿ ಜರುಗಿದರ ಬಗ್ಗೆ ಮುಧೋಳ ಪೊಲೀಸ್ ಠಾಣೆಯಿಂದ ವರದಿಯಾಗಿದೆ.**

**ಬಾಗಲಕೋಟೆ**
✍ ಮಂಜುನಾಥ ಈಶ್ವರ ಕರೋಳಿ

**ಬಾ**ಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಸುಮಾರು 4 ಕಿ.ಮೀ ಅಂತರದಲ್ಲಿರುವ ಮಾಲಾಪೂರ ಗ್ರಾಮದ ನಿವಾಸಿ ಶಿವಪ್ಪ ಈರಪ್ಪ ಶೀಲವಂತ ಉದ್ಯೋಗ ಕೂಲಿ ಕೆಲಸ. ಈತನ ಧರ್ಮಪತ್ನಿ ಚಂದ್ರವ್ವ ಇವರಿಗೆ ಬಸವರಾಜ (22), ಮಂಜುನಾಥ (19), ಲಕ್ಷ್ಮಿ(16) ಹೀಗೆ ಒಟ್ಟು ಮೂರು ಜನ ಮಕ್ಕಳು. ದೊಡ್ಡ ಮಗನಾದ ಬಸವರಾಜ ತನ್ನ ವಿದ್ಯಾಭ್ಯಾಸ ಮುಗಿಸಿ ಮುಧೋಳದ ಅಂಗಡಿಯೊಂದರಲ್ಲಿ ಕೆಲಸ ಮಾಡುತ್ತಿದ್ದ. ಚಿಕ್ಕವರಾದ ಮಂಜುನಾಥ ಹಾಗೂ ತಂಗಿ ಲಕ್ಷ್ಮಿ ವಿದ್ಯಾಬ್ಯಾಸ ಮಾಡುತ್ತಿದ್ದಾರೆ. ತಂದೆ ಶಿವಪ್ಪ, ತಾಯಿ ಚಂದ್ರವ್ವ ಕೂಲಿನಾಲಿ ಮಾಡಿಕೊಂಡು ಮಕ್ಕಳನ್ನು ಬೆಳೆಸಿದ್ದರು.ಈಗ ಸುಮಾರು ವರ್ಷಗಳಿಂದ ಮುಧೋಳದ ಎಸ್‌ಎ ಪ್ಲಾಟ್ ಗಿರಗಾಂವ


ಕೊಲೆಯಾದ ಮಂಜುನಾಥ

ದಲ್ಲಿ ವಾಸವಾಗಿದ್ದರು. ದೊಡ್ಡ ಮಗ ಮುಧೋಳದ ಪೈಪ್ ಅಂಗಡಿಯಲ್ಲಿ ಕೆಲಸಕ್ಕೆ ಸೇರಿದ್ದ. ಚಿಕ್ಕ ಮಗನಾದ ತನ್ನ ತಾಯಿಯ ತವರೂರಾದ ಮಾಲಾಪೂರ ಗ್ರಾಮದಲ್ಲಿ ತನ್ನ ಸೋದರ ಮಾವನ ಮನೆಯಲ್ಲಿ ಇದ್ದು ಮಾಲಾಪೂರದಲ್ಲಿ ಶಿಕ್ಷಣ ಪಡೆಯುತ್ತಿದ್ದನು.

### ಪ್ರೀತಿಯ ಬಲೆಗೆ ಬಿದ್ದ ಮಂಜುನಾಥ!

ಶಿವಪ್ಪ ಶಿಲವಂತನ ಚಿಕ್ಕ ಮಗನಾದ ಮಂಜುನಾಥ ಮಾಲಾಪೂರದಲ್ಲಿಯೇ ಇದ್ದುದ್ದರಿಂದ ಆ ಗ್ರಾಮದ ಒಬ್ಬ ಹುಡುಗಿಯ ಹಿಂದೆ ಬಿದ್ದಿದ್ದ. ಆಕೆಯೂ ಇವನ ಪ್ರೀತಿಗೆ ಒಪ್ಪಿಗೆ ನೀಡಿದ್ದಳು. ಆಕೆಯೂ ಸಹ ಶಾಲೆಗೆ ಹೋಗುತ್ತಿದ್ದಳು. ಓದಿನ ಕಡೆಗೆ ಗಮನ ಕೊಡಬೇಕಾದ ವಯಸ್ಸಿನಲ್ಲಿ ಪ್ರೀತಿಯ ಬಲೆಯಲ್ಲಿ ತೇಲಾಡುತ್ತಿದ್ದರು. ಗ್ರಾಮದಲ್ಲಿ ತಿರುಗಾಡುವುದು, ಪರಸ್ಪರ ಮೊಬೈಲ್‌ನಲ್ಲಿ ಗಂಟೆಗಟ್ಟಲೇ ಮಾತಾಡುವುದು ಜೋರಾಗಿದ್ದು, ಈ ವಿಷಯ ಪಾಪ ಅವರ ಮನೆಯವರಿಗೆ ಗೊತ್ತೇ ಇರಲಿಲ್ಲವೇನೋ. ಒಟ್ಟಾರೆಯಲ್ಲಿ ಇಬ್ಬರೂ ಪರಸ್ಪರ ಪ್ರೀತಿಸುತ್ತಿದ್ದರು. ಬೆಕ್ಕಿಗೆ ಆಟ ಇಲಿಗೆ ಪ್ರಾಣ ಸಂಕಟ ಅನ್ನುವ ಹಾಗೆ ಇನ್ನೊಂದು ಕಡೆ ಇವರ ಪ್ರೀತಿಗೆ ಇನ್ನೊಬ್ಬ ಅದೇ ಗ್ರಾಮದ ಯುವಕ ಅನಿಲ ನಾಗಪ್ಪ ಮಾಂಗ ಎಂಬಾತನಿಗೆ ಸಹಿಸಿಕೊಳ್ಳಲಾಗುತ್ತಿರಲಿಲ್ಲ. ಅದು ಯಾಕೆ ಅಂತಿರಾ... ಆ ಯುವಕ ಯಾಕೆ ಇವರ ಪ್ರೀತಿ ನೋಡಿ ಉರಿದುಕೋಳ್ಳುತ್ತಿದ್ದ ಅಂತಿರಾ ಮುಂದೆ ಓದಿ...



ಕೊಲೆಯಾದ ಮಂಜುನಾಥನ ಸ್ನೇಹಿತ ಯಲ್ಲಾಲಿಂಗ

### ಆ ಹುಡುಗಿಯ ಹಳೇ ಪ್ರೇಮಿ!

ಮಂಜುನಾಥ ಹಾಗೂ ಆ ಗ್ರಾಮದ ಹುಡುಗಿ ಇಬ್ಬರು ಪ್ರೀತಿಸುತ್ತಿದ್ದು, ಈ ವಿಷಯ ಅನಿಲ ಮಾಂಗ ಎಂಬಾತನಿಗೆ ಗೊತ್ತಾಗಿದ್ದು, ಅವನಿಗೆ ಕಾಲು ಮೇಲೆ ಬರೆ ಎಳೆದಂತಾಗಿತ್ತು. ಯಾಕೆಂದರೆ ಆ ಹುಡುಗಿ ಮಂಜುನಾಥನನ್ನು ಪ್ರೀತಿ ಮಾಡುವುದಕ್ಕೆ ಮುಂಚೆ ಅಂದರೆ ಎರಡು ವರ್ಷಗಳ ಹಿಂದೆ ಈ ಅನಿಲ ಮಾಂಗ ಎಂಬಾತನನ್ನು ಪ್ರೀತಿಸುತ್ತಿದ್ದರು. ನಂತರ ಅವರಿಬ್ಬರ ನಡುವೆ ಏನು ನಡೆದಿತ್ತೋ ಗೊತ್ತಿಲ್ಲ. ನಂತರದಲ್ಲಿ ಮಂಜುನಾಥನನ್ನು ಪ್ರೀತಿ ಮಾಡುತ್ತಿದ್ದಳು. ಈ ವಿಷಯ ಗೊತ್ತಾಗಿ ಅನಿಲ ಮಾಂಗ ತನ್ನ ಹುಡುಗಿ ತನ್ನ ಬಿಟ್ಟು ಬೇರೊಬ್ಬನ ಜೊತೆ ಪ್ರೀತಿ ಮಾಡಿದರೆ ಹೇಗೆ ಆಗಬಾರದು. ನಂತರ ಅನಿಲ ಮಾಂಗ ಮಂಜುನಾಥ ಶೀಲವಂತನ ಮೇಲೆ ಸಿಟ್ಟಾಗಿದ್ದ. ಇದರಿಂದ ಈ ಪ್ರೀತಿಯ ವಿಷಯವಾಗಿ ಪದೇ ಪದೇ ಕಿರುಕುಳ ಪ್ರಾರಂಭವಾಗಿದ್ದವು.


ಎಸ್ಪಿ ಅಮರನಾಥ ರೆಡ್ಡಿ


ಡಿವೈಎಸ್ಪಿ ರೋಷನ್ ಜಮೀರ್


ಸಿಪಿಐ ಎಂ.ಎನ್. ಶಿರಹಟ್ಟಿ


ಪಿಎಸ್‌ಐ ಅಜಿತ್‌ಕುಮಾರ್ ಹೊಸಮನಿ

### ಗ್ರಾಮದ ಹಿರಿಯರಿಂದ ಬುದ್ಧಿವಾದ!

ಮಂಜುನಾಥ ಹಾಗೂ ಆ ಯುವತಿ ಪ್ರೀತಿ ಮಾಡುತ್ತಿದ್ದದ್ದು ಅನಿಲನಿಗೆ ಒಂಚೂರು ಇಷ್ಟವಾಗುತ್ತಿರಲ್ಲಿಲ್ಲ, ವಿಷಯ ಊರಿನ ಹಿರಿಯರ ತನಕ ವಿಷಯ ಹೋಗಿದ್ದು, ಆಗ ಗ್ರಾಮದ ಹಿರಿಯರು ಆ ಯುವತಿ, ಮಂಜುನಾಥ, ಅನಿಲನಿಗೆ ನೀವಿನ್ನು ಚಿಕ್ಕವರು, ಓದಿನ ಕಡೆ ಗಮನ ಕೊಡಬೇಕು. ಹೀಗೆ ಪ್ರೀತಿ ಪ್ರೇಮ ದ್ವೇಷ ಅಂತ ಬಡಿದಾಡಿಕೊಂಡಿದ್ದರೆ ನಮ್ಮ ಗ್ರಾಮದ ಮರ್ಯಾದೆ ಏನಾಗಬೇಡ ಅಂತ ಮೂರು ಜನರಿಗೆ ಬುದ್ಧಿವಾದ ಹೇಳಿದ್ದರು.

### ಗ್ರಾಮ ದೇವರ ಜಾತ್ರೆಯಲ್ಲಿ ಅಟ್ಟಾಡಿಸಿ ಕೊಂದರು

ದಿನಾಂಕ 12/4/2025ರಂದು ಮಾಲಾಪೂರ ಗ್ರಾಮದ ಲಕ್ಷ್ಮಿ ದೇವಿ ಜಾತ್ರೆ ಹಾಗೂ ಹನುಮಾನ ದೇವರ ಓಕಳಿ ಇದ್ದುದ್ದರಿಂದ ಮಂಜುನಾಥ ಶೀಲವಂತ ಇವನು ತನ್ನ ಮತ್ತು ಗೆಳೆಯನ ಬ್ಯಾನರ್‌ಗಳನ್ನು ಕಟ್ಟಿದ್ದರು. ಅವುಗಳನ್ನು ತನ್ನ ದುಷ್ಮನ್ ಗ್ಯಾಂಗ್ ಅನಿಲ್ ಮಾಂಗ ಹಾಗೂ ಅವರ ಸಹಚರರು ಹರಿದು ಹಾಕಿದ್ದರು. ಇದನ್ನು ಪ್ರಶ್ನೆ ಮಾಡಲು ಮಂಜುನಾಥ ಹಾಗೂ ಆತನ ಸ್ನೇಹಿತರು ಕೇಳಲು ಹೋದಾಗ, ಆಗ ಅನಿಲ ಹಾಗೂ ಆತನ ಗೆಳೆಯರು ಮಂಜುನಾಥ ಮತ್ತು ಆತನ ಸ್ನೇಹಿತ ಯಲ್ಲಾಲಿಂಗ ಗೊಂಪ್ಯಾಗೊಳ ಮತ್ತು ಇತರ ಸ್ನೇಹಿತರಿಗೆ ನೀವು ಬೇರೆ ಊರಿನವರು. ನಮ್ಮೂರಲ್ಲಿ ನೀವ್ಯಾಕೆ ಬ್ಯಾನರ್ ಹರಿದಿವಿ ನೀವೇನ್ ಮಾಡ್ಕೋತಿರಿ ಮಾಡ್ಕೊರಿ ಅಂತಾ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದಾರೆ. ಮೊದಲೇ ಸಿಟ್ಟಿನಿಂದ ಅನಿಲ್ ಹಾಗೂ ಅವನ ಸ್ನೇಹಿತರು ಮಂಜುನಾಥ ಹಾಗೂ ಅವನ ಗೆಳೆಯ ಯಲ್ಲಾಲಿಂಗ ಮೇಲೆ ಹೊಡಿ ಬಡಿ ಅಂತಾ ಮಾಡಿದಾಗ ಮಂಜುನಾಥ ಹಾಗೂ ಯಲ್ಲಾಲಿಂಗ ತಪ್ಪಿಸಿಕೊಳ್ಳಲು

☞ 12

# ಕ್ರೈಂ ಪ್ರಪಂಚ

ಸಾಯಲು ಸಿದ್ದನಾಗು!

ಹಾಗಂತ ಯಾರಾದರೂ ಹೇಳಿದರೆ ಸಾವು ಬರುವುದೇ? ಆ ರೀತಿ ಬರುವುದಾಗಿದ್ದರೆ ಕಾರಣ ಇಲ್ಲದೆ ತುಂಬಾ ಮಂದಿ ಸಾಯುತ್ತಿದ್ದರು.

ಇದು ಈ ಲೇಖನದ ಶೀರ್ಷಿಕೆ!

ಸಾವಿನ ಮುನ್ಸೂಚನೆ ಕೊಟ್ಟು ಬೇಟೆಯ ಆಟ ಆಡಲು ಪ್ರಾರಂಭ ಮಾಡಿರುವ ದುಷ್ಟ ಕೊಲೆಗಾರನ ಮರ್ಡರ್ ಪ್ಲಾನ್ ಆಗಿದೆ.

●●●

ಅವಳ ಹೆಸರು ಕಾವ್ಯ!

ಪ್ರಾಯ ಇಪ್ಪತ್ತೆರಡು.

ವಿವಾಹವಾಗಿ ಕೇವಲ ಎರಡು ತಿಂಗಳುಗಳಾಗಿವೆ. ಅವಳ ಗಂಡ ಪ್ರೈವೇಟ್ ಕಂಪನಿಯೊಂದರಲ್ಲಿ ಸೇಲ್ಸ್ ಎಕ್ಸಿಕ್ಯೂಟಿವ್ ಆಫೀಸರ್ ಆಗಿ ಕೆಲಸ ಮಾಡುತ್ತಿದ್ದಾನೆ. ಸೇಲ್ಸ್ ಪ್ರಮೋಷನ್ ಆಫೀಸರ್ ಆಗಿರೋದ್ರಿಂದ ವಾರದಲ್ಲಿ ಐದು ದಿವಸ ಬೇರೆ ಬೇರೆ ಊರುಗಳಲ್ಲಿರುವ ಬ್ರಾಂಚ್ ಆಫೀಸ್‌ಗಳಿಗೆ ಹೋಗಿ ಸೇಲ್ಸ್ ಕಂಡೀಷನ್ ಪರಿಶೀಲನೆ ಮಾಡಬೇಕು ಮತ್ತು ಸೇಲ್ಸ್ ಟಾರ್ಗೆಟ್ ರೀಚ್ ಮಾಡಲು, ಮಾರ್ಕೆಟ್ ಸರ್ವೇ ರಿಪೋರ್ಟ್ ತರಿಸಿಕೊಂಡು ಸಲಹೆ ನೀಡಬೇಕು. ಕೆಲವು ಸಲ ಐದು ದಿನಗಳಾದರೂ ಊರಿಗೆ ಬರಲು ಆಗೋಲ್ಲ. ಅವನಿಗೆ ಹೆಂಡತಿ ಕಾವ್ಯ ಬಂದರೆ ಬಲು ಪ್ರೀತಿ ಮತ್ತು ಕಾಳಜಿ ಇದೆ. ಪ್ರತಿರಾತ್ರಿ ಅವಳನ್ನು ತಬ್ಬಿಕೊಂಡು ಮುದ್ದಾಡುತ್ತಾ ಮಲಗಬೇಕು ಎಂಬ ಆಸೆ ಇದ್ದರೂ ಸಹ ಈ ಉದ್ಯೋಗದ ಕಾರಣದಿಂದ ಅವಕಾಶ ಆಗಿರಲಿಲ್ಲ.

ಕಾವ್ಯ ಸಹ ಪ್ರೈವೇಟ್ ಕಂಪನಿಯಲ್ಲಿ ಕೆಲಸ ಮಾಡುತ್ತಾಳೆ.

ಅವಳ ಸಂಬಳ ಮುವತ್ತು ಸಾವಿರ.

ಆರ್ಥಿಕವಾಗಿ ಅನುಕೂಲ ಆಗಿದ್ದಾರೆ.

> ಡೋರ್ ಓಪನ್ ಆಗಿದೆ! ಅವಳಿಗೆ ಚೆನ್ನಾಗಿ ನೆನಪಿದೆ. ಅವಳು ಡ್ಯೂಟಿಗೆ ಹೋಗುವಾಗ ರೂಮಿನ ಡೋರ್ ಎಳೆದು ಭದ್ರಪಡಿಸಿದ್ದಳು. ಡೋರ್‌ಲಾಕ್ ಮಾಡಿರಲಿಲ್ಲ. ಆದರೆ ಡೋರ್ ಯಾಕೆ ಓಪನ್ ಆಗಿದೆ? ಒಳಗೆ ಬಂದು ನೋಡಿದಳು. ಬೀರುವಿನ ಡೋರ್ ಲಾಕ್ ಓಪನ್ ಆಗಿದೆ. ಯಾರೋ ಒಳಗೆಲ್ಲಾ ಕೈ ತೂರಿಸಿ ಹುಡುಕಾಡಿದಂತೆ ಎಲ್ಲ ಅತ್ತಿತ್ತ ಹರಡಿಕೊಂಡಿದೆ. ಸೀಕ್ರೇಟ್ ಲಾಕರ್ ಓಪನ್ ಆಗಿರಲಿಲ್ಲ. ಯಾಕೆ ಅಂದರೆ ಅದರ ಕೀ ಯಾವಾಗಲು ಅವಳ ವ್ಯಾನಿಟಿ ಬ್ಯಾಗಲ್ಲಿ ಇರುತ್ತಿತ್ತು. ಹಣ, ಚಿನ್ನದ ಆಭರಣಗಳ ಜೊತೆಗೆ ಮುಖ್ಯವಾದ ಡಾಕ್ಯುಮೆಂಟ್ ಫೈಲ್ ಅನ್ನು ಆ ಸೀಕ್ರೇಟ್ ಲಾಕರ್‌ನಲ್ಲಿ ಇಡಲಾಗಿದೆ. ಅವಳು ಬೆಚ್ಚಿಬಿದ್ದಳು. ಯಾರೋ ಆ ಡಾಕ್ಯುಮೆಂಟ್ ಫೈಲ್‌ಗಾಗಿ ಎರಡು ಸಲ ಹುಡುಕಾಡಿದ್ದಾರೆ. ಎರಡು ದಿನಗಳ ಹಿಂದೆ ನನ್ನ ಪ್ರಜ್ಞೆತಪ್ಪಿಸಿದ್ದು ಇದೇ ಕಾರಣದಿಂದ. ನನ್ನ ಗಂಡ ದಿಢೀರ್ ಅಂತ ಬಂದಿದ್ದರಿಂದ ಬ್ಯಾಕ್‌ಡೋರ್ ಮೂಲಕ ಪರಾರಿಯಾಗಿದ್ದಾನೆ. ಆದರೂ ಸಹ ಅವನು ಒಳಗೆ ಹೇಗೆ ಬಂದಿದ್ದ?

ಆದರೆ ಇವರ ಸಂಸಾರದಲ್ಲಿ ಇನ್ನೂ ಮೂರು ಮಂದಿ ಇದ್ದಾರೆ.

ಗಂಡನ ತಮ್ಮ ಸೂರ್ಯ.

ಗಂಡನ ತಂಗಿ ಮಾನ್ಯತಾ.

ಸೋದರಮಾವ ರಾಜೇಂದ್ರ ಬಾಬು.

ಸೂರ್ಯ ಮತ್ತು ಮಾನ್ಯತ ಕಾಲೇಜಿನ ವಿದ್ಯಾರ್ಥಿಗಳು. ಮಾವ ರಾಜೇಂದ್ರಬಾಬು (ತಾಯಿಯ ಅಣ್ಣ) ಅವರು ಸಹ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಾರೆ.

ದೊಡ್ಡಮನೆ ಮಾಡಿದ್ದಾರೆ.

ಮೂರು ಬೆಡ್‌ರೂಮುಗಳಿಗೆ ಮತ್ತು ಫ್ರಂಟ್ ಹಾಲ್ ವಿಶಾಲವಾಗಿದೆ.

ಗಂಡ-ಹೆಂಡತಿಗೆ ಒಂದು ರೂಮ್, ಮತ್ತೊಂದು ರೂಮಲ್ಲಿ ಸೂರ್ಯ, ಮಾನ್ಯತಾ ಮಲಗುತ್ತಾರೆ. ಇನ್ನೊಂದು ರೂಮಲ್ಲಿ ತಾತ್ಕಾಲಿಕವಾಗಿ ಸೋದರಮಾವ ಇರುತ್ತಾರೆ. ಗೆಸ್ಟ್‌ಗಳು ಬಂದರೆ ಆ ದಿವಸ ಅವರು ಆ ರೂಮನ್ನು ಬಿಟ್ಟು ಕೊಡುತ್ತಾರೆ.

ಕಾವ್ಯ ಬೆಡ್‌ರೂಮಲ್ಲಿ ಮಲಗಿದ್ದಾಳೆ. ವಿಪರೀತ ಆಯಾಸ ಆಗಿರೋದ್ರಿಂದ ಅವಳಿಗೆ ಬೇಗ ನಿದ್ದೆ ಬಂದಿದೆ. ಅವಳು ಗಂಡ ಇದ್ದರೆ ಮಾತ್ರ ಬೆಡ್‌ರೂಮಿನ ಡೋರ್ ಲಾಕ್ ಮಾಡಿಕೊಳ್ಳುತ್ತಾಳೆ.

ಬಾಗಿಲು ಶಬ್ದ ಆಗದ ರೀತಿಯಲ್ಲಿ ತೆರೆದು ಕೊಂಡಿತು.

ಯಾರೋ ಒಳಗೆ ಹೋಗಿದ್ದಾರೆ. ಎಲ್ಲಾ ಕಡೆ ನೋಡುತ್ತಿದ್ದಾರೆ.

ಕೋಟ್ ಜೇಬಿನಿಂದ ಉದ್ದವಾದ ಕೊಳವೆ ತೆಗೆದರು. ಮೊದಲೆ ರೆಡಿ ಮಾಡಿಕೊಂಡು ತಂದಿದ್ದ ಹತ್ತಿ ಉಂಡೆಗೆ, ಆ ಕೊಳವೆಯಿಂದ ಸ್ಪ್ರೇ ಮಾಡಿದರು.

ಮಂಕಿ ಕ್ಯಾಪ್ ಮತ್ತು ಮಾಸ್ಕ್ ಧರಿಸಿದ್ದರಿಂದ ರಾಸಾಯನಿಕ ವಾಸನೆ ಇವರ ಮೇಲೆ ಪರಿಣಾಮ ಬೀರಲಿಲ್ಲ. ಸ್ವಲ್ಪ ಹೊತ್ತು ಅವಳು ಮುಖ ಸಿಂಡರಿಸುತ್ತಾ ಹೊರಳಾಡಿದಳು.

ಕಷ್ಟದಿಂದ ಕಣ್ಣುಗಳನ್ನು ಕ್ಷಣಗಳ ಕಾಲ ತೆರೆದಳು. ಎದುರಿಗೆ ಯಾರೋ ನಿಂತಿರುವುದು ಅಸ್ಪಷ್ಟವಾಗಿ ಕಂಡಿತು. ಕ್ಷಣಗಳಲ್ಲಿ ಅವಳು ಪ್ರಜ್ಞಾಶೂನ್ಯಳಾಗಿ ಮಲಗಿದಳು.

## ಮರ್ಡರ್ ಬ್ಯಾಕ್‌ಗ್ರೌಂಡ್

ಕಾವ್ಯ ಆಫೀಸ್ ಕೆಲಸ ಮುಗಿದ ಪ್ರೈವೇಟ್ ಡಿಟೆಕ್ಟೀವ್ ಏಜೆನ್ಸಿಯಲ್ಲಿ ಕಂಪ್ಯೂಟರ್ ಸೆಕ್ಷನ್‌ನಲ್ಲಿ ಕೆಲಸ ಮಾಡುತ್ತಾಳೆ. ಅಂದರೆ ಸಂಜೆ ಐದು ಗಂಟೆಯಿಂದ ಎಂಟು ಗಂಟೆ ತನಕ ಈ ಏಜೆನ್ಸಿ ಕೆಲಸ ಇರುತ್ತದೆ.

ಅಂತಿಮವಾಗಿ ಮೈದುನ ಸೂರ್ಯ ಬೈಕಲ್ಲಿ ಬಂದು ಇವಳನ್ನು ಮನೆಗೆ ಕರೆದುಕೊಂಡು ಹೋಗುತ್ತಾನೆ. ಅವನು ಊರಲ್ಲಿ ಇಲ್ಲದಿರುವಾಗ ಈ ಕೆಲಸವನ್ನು ಮಾನ್ಯತಾ ಮಾಡುತ್ತಾಳೆ.

ಮಾವ ರಾಜೇಂದ್ರಬಾಬು ಅವರು ಸಂಸಾರದ ಖರ್ಚಿಗೆ ಅಂತ ಹತ್ತು ಸಾವಿರ ರೂಪಾಯಿಯನ್ನು ಪ್ರತಿ ತಿಂಗಳೂ ಕೊಡುತ್ತಾರೆ.

ಆದರೆ ಸಮಸ್ಯೆ ಏನು?

ಮನೆ ಕೆಲಸ...!

ನಿಜ ಬೆಳಿಗ್ಗೆ ಬೇಗ ಎದ್ದು ನಾಲ್ಕು ಮಂದಿಗೆ ತಿಂಡಿ, ಊಟ ಎಲ್ಲಾ ರೆಡಿ ಮಾಡಬೇಕು. ಈ ಕೆಲಸದಲ್ಲಿ ನಾದಿನಿ ಮಾನ್ಯತಾ ಸಹಾಯ ಮಾಡೋಲ್ಲ. ಮಹಾ ಸೋಮಾರಿ ಅವಳು ಬೆಳಿಗ್ಗೆ ಏಳುವುದೇ ಏಳೂವರೆಗೆ. ಬೇಗ ಬೇಗ ಸ್ನಾನ ಮಾಡಿ ರೆಡಿಯಾಗಿ ತಿಂಡಿ ತಿಂದು ಊಟದ ಡಬ್ಬಿ ತಗೊಂಡು ಕಾಲೇಜಿಗೆ ಹೊರಡುತ್ತಾಳೆ. ಅವಳಿಗೆ ಮನೆ ಕೆಲಸದಲ್ಲಿ ಸಹಾಯ ಮಾಡುವುದು ಮೈದುನ ಸೂರ್ಯ...!

ರಾಜೇಂದ್ರಬಾಬು ಅವರು ಸಹ ಹೆಲ್ಪ್ ಮಾಡುತ್ತಾರೆ.

ಇದು ಸಂಸಾರದ ಚಿತ್ರಣ!

ಬೆಳಿಗ್ಗೆ ಒಂಭತ್ತೂವರೆಗೆ ಮನೆಯ ಡೋರ್‌ಲಾಕ್ ಮಾಡಿದರೆ ಸಂಜೆ ಆರು ಗಂಟೆಗೆ ತೆಗೆಯುತ್ತಾರೆ. ಎಲ್ಲರೂ ಬೇರೆ ಬೇರೆ ಟೈಂಗೆ ಬರೋದ್ರಿಂದ ಪ್ರತಿಯೊಬ್ಬರ ಹತ್ತಿರ ಡೋರ್‌ಲಾಕ್ ಕೀ ಇರುತ್ತದೆ.

ರಾತ್ರಿ ಒಂಭತ್ತೂವರೆ!

ಎಲ್ಲರೂ ಊಟ ಮಾಡಿದ ನಂತರ ಸ್ವಲ್ಪ ಹೊತ್ತು ಮನೆ ಮುಂಭಾಗದಲ್ಲಿರುವ ಗಾರ್ಡನ್‌ನಲ್ಲಿ ವಾಕ್ ಮಾಡುತ್ತಾರೆ.

ರಾತ್ರಿ ಹತ್ತೂವರೆ.

ಎಲ್ಲರೂ ಮಲಗಿದ್ದಾರೆ.

ಅವನಿಗೆ ಎರಡು ಕೆಲಸಗಳನ್ನು ಒಪ್ಪಿಸಲಾಗಿತ್ತು. ಅವಳನ್ನು ಕೊಲೆ ಮಾಡಬೇಕು. ಇದು ಮೊದಲ ಕೆಲಸ. ನಂತರ ಕ್ರೈಂ ಇನ್‌ವೆಸ್ಟಿಗೇಷನ್‌ಗೆ ಸಂಬಂಧ ಪಟ್ಟಿರುವ ದಾಖಲೆಗಳ ಫೈಲು ಮತ್ತು ವೀಡಿಯೋ ಕ್ಲಿಪ್ ಡಿಸ್ಕ್ ಅನ್ನು ತೆಗೆದುಕೊಂಡು ಬರಬೇಕು.

ಅವಳನ್ನು ಕೊಲೆ ಮಾಡುವುದು ನಂತರ. ಸಾಧ್ಯವಾದರೆ ಮೊದಲು ಈ ದಾಖಲೆಗಳನ್ನು ಹುಡುಕಿ ಪತ್ತೆ ಮಾಡಿ ಅವುಗಳನ್ನು ತೆಗೆದುಕೊಂಡ ನಂತರ ಕೊಲೆ ಮಾಡಬೇಕು.

ಈ ಕೆಲಸ ಆದಷ್ಟು ಬೇಗ ತುಂಬಾ ರಹಸ್ಯವಾಗಿ ಆಗಬೇಕು.

ಮೊದಲ ಕೆಲಸ ಮುಗಿದಿದೆ!

ಕಾವ್ಯ ಪ್ರಜ್ಞಾಶೂನ್ಯಳಾಗಿದ್ದಾಳೆ.

ಅವಳ ಕತ್ತನ್ನು ಹಿಸುಕಿ ಕೊಲೆ ಮಾಡುವುದು ತುಂಬಾ ಸುಲಭ. ಅದಕ್ಕಿಂತ ಮೊದಲು ಆ ರಹಸ್ಯ ದಾಖಲೆಗಳನ್ನು ವಶಪಡಿಸಿಕೊಳ್ಳಬೇಕು.

ಅನಾಮಿಕ ಕೊಲೆಗಾರ ಈಗ ಆ ರೂಮಿನ ಮುಖ್ಯವಾದ ಸ್ಥಳಗಳಲ್ಲಿ ತುಂಬಾ ಎಚ್ಚರಿಕೆಯಿಂದ ಹುಡುಕುತ್ತಿದ್ದಾನೆ.

ಆಗ ಕಂಡಿತು ಬೀರುವಿನ ಡೋರ್‌ಲಾಕ್ ಕೀ...!

ಅದನ್ನು ಎತ್ತಿಕೊಂಡು ಡೋರ್‌ಲಾಕ್ ಓಪನ್ ಮಾಡುವ ಪ್ರಯತ್ನದಲ್ಲಿರುವಾಗಲೇ ಎಡವಟ್ಟಾಗಿ ಹೋಯಿತು.

ಕಾಲಿಂಗ್ ಬೆಲ್ ಶಬ್ದ ಮಾಡಿತು!

ಅವನು ಬೆಚ್ಚಿ ಬಿದ್ದನು.

ಈಗ ಬಂದವರು ಯಾರು?

ಕಾವ್ಯ ಮಲಗಿರುವ ಮಂಚದ ಬಲಭಾಗದಲ್ಲಿ ಕಾವ್ಯ ಟೀಪಾಯಿಯ ಮೇಲೆ ಇದ್ದ ಮೊಬೈಲ್ ಫೋನ್ ಲೈಟ್ ಬ್ಲಿಂಕ್ ಆಯಿತು.

ಫೋನ್ ಕಾಲ್ ಬಂದಿದೆ.

ಗಂಡ ಮನೋಹರ ಫೋನ್ ಮಾಡಿದ್ದಾನೆ.

ಬೆಲ್ ಮತ್ತೊಮ್ಮೆ ಶಬ್ದ ಮಾಡಿತು.

ಕೊಲೆಗಾರ ಬೀರುವಿನ ಲಾಕರ್ ಕೀ ತೆಗೆದು ಮೊದಲಿನ ಜಾಗದಲ್ಲಿ ಬಿಟ್ಟು ಹೊರಗೆ ಬಂದನು.

ಫ್ಲಾಶ್ ಆಯಿತು.

ಬ್ಯಾಕ್ ಡೋರ್ ಓಪನ್ ಮಾಡಿದನು.

●●●

ನಾಲ್ಕಾರು ಸಲ ಕಾಲಿಂಗ್ ಬೆಲ್ ಶಬ್ದ ಮಾಡಿದ್ದರಿಂದ ಸೂರ್ಯ ಮತ್ತು ಮಾನ್ಯಳಿಗೆ ಎಚ್ಚರ ಉಂಟಾಯಿತು. ಅವರು ಎದ್ದು ಫ್ರಂಟ್ ಡೋರ್ ಓಪನ್ ಮಾಡಿದಾಗ ಅಣ್ಣ ನಿಂತಿರುವುದನ್ನು ಕಂಡು ಗಾಬರಿಯಾಯಿತು.

ಅಣ್ಣ ದಿಢೀರ್ ಅಂತ ಬಂದಿದ್ದಾನೆ.

ಈ ರೀತಿ ಹಿಂದೆ ಯಾವತ್ತೂ ಮಾಡಿರಲಿಲ್ಲ. ಬರುವ ಮೊದಲು ಫೋನ್ ಮಾಡುತ್ತಿದ್ದನು. ಅವನು ಒಳಗೆ ಬಂದು ತಂಗಿ, ತಮ್ಮನ ಕಡೆ ಕೋಪದಿಂದ ನೋಡುತ್ತಾ ''ಅದೇನು ಇವತ್ತು ಇಷ್ಟೊಂದು ಗಾಢವಾಗಿ ನಿದ್ದೆ ಮಾಡಿದ್ರಿ'' ಎಂದಾಗ ಅವನು ಏನೋ ಕಾರಣ ಹೇಳಿದರು.

''ನಿಮ್ಮ ಅತ್ತಿಗೆ ಎಲ್ಲಿ? ಅವಳಿಗೆ ನಾಲ್ಕು ಸಲ ಫೋನ್ ಮಾಡಿದ್ದೀನಿ ಅವಳೂ ಸಹ ಫೋನ್ ತಗೊಂಡಿಲ್ಲ.''

''ಅತ್ತಿಗೆ ಮಲಗುವಾಗ ಫೋನ್ ಸೈಲೆಂಟ್ ಮೂಡ್‌ಗೆ ಹಾಕಿರುತ್ತಾರೆ.''

''ಮಾವ ಎಲ್ಲಿ?''

''ಅವರು ರೂಮಲ್ಲಿ ಮಲಗಿದ್ದಾರೆ.''

ಮನೋಹರ (ಗಂಡ) ಈಗ ಹೆಂಡತಿ ಮಲಗಿರುವ ರೂಮಿನ ಹತ್ತಿರ ಬರುತ್ತಿರುವಾಗ ಆ ದೃಶ್ಯ ಕಂಡು ಗಾಬರಿಯಾದನು.

ಬ್ಯಾಕ್ ಡೋರ್ ಓಪನ್ ಆಗಿದೆ.

ಈ ಮನೇಲಿ ಯಾರಿಗೂ ಜವಾಬ್ದಾರಿ ಇಲ್ಲ. ರಾತ್ರಿ ಮಲಗುವ ಮೊದಲು ಎಲ್ಲಾ ಡೋರ್‌ಗಳನ್ನು ಚೆಕ್ ಮಾಡಬೇಕು ಅಂತ ಗೊತ್ತಿಲ್ವ ಎಂದು ಕೂಗಾಡಿದನು.

ಹೆಂಡತಿ ಕಾವ್ಯ ಎದ್ದು ಬರಲಿಲ್ಲ.

ಸೋದರಮಾವ ರಾಜೇಂದ್ರಬಾಬು ಆಕಳಿಸುತ್ತಾ ಬಂದರು. ಮನೋಹರನನ್ನು ಕಂಡು ''ಅರೆ... ಇದೇನಿದು ನೀನು ದಿಢೀರ್ ಅಂತ ಬಂದಿದ್ದೀಯ. ಯಾಕೆ ಕೂಗಾಡ್ತಿದ್ದೆ'' ಎಂದು ಕೇಳಿದರು.

ಮನೋಹರ ಕೋಪದಿಂದ ತಮ್ಮ, ತಂಗಿ, ಸೋದರಮಾವನನ್ನು ಕರೆದು ತೋರಿಸುತ್ತಾ ''ನೀವೆಲ್ಲರೂ ಇದ್ದೀರ. ಆದರೆ ರಾತ್ರಿ ಮಲಗುವ ಮೊದಲು ಬ್ಯಾಕ್ ಡೋರ್ ಲಾಕ್ ಮಾಡಿಲ್ಲ'' ಎಂದಾಗ ಎಲ್ಲರೂ ಗಾಬರಿಯಾದರು.

ಮಾನ್ಯತ ಗಾಬರಿಯಿಂದ ''ಅಣ್ಣ... ನಾನು ನೇಚರ್ ಕಾಲ್ ಮುಗಿಸಿಕೊಂಡು ಬರುವಾಗ ಡೋರ್ ಲಾಕ್ ಮಾಡಿದ್ದೀನಿ. ನನಗೆ ಚೆನ್ನಾಗಿ ನೆನಪಿದೆ.''

ಕೂಡಲೇ ಸೂರ್ಯ ''ಅಣ್ಣ... ನಾನು ಸಹ ನೋಡಿದ್ದೀನಿ ಡೋರ್ ಲಾಕ್ ಆಗಿತ್ತು. ಉಳಿದವರ ವಿಚಾರ ಇರಲಿ. ಅತ್ತಿಗೆ ಎಲ್ಲಾ ಚೆಕ್ ಮಾಡದೆ ನಿದ್ದೆ ಮಾಡೋಲ್ಲ'' ಎಂದನು.

ಮನೋಹರ ರೇಗುತ್ತಾ ''ಏ ಕಾವ್ಯ.. ಕಾವ್ಯ... ಮನೇಲಿ ಇಷ್ಟೆಲ್ಲಾ ಗಲಾಟೆ ಆಗುತ್ತಿದ್ದರೂ ನಿನಗೆ ಎಚ್ಚರ ಆಗಿಲ್ವ'' ಎಂದು ಬೆಡ್‌ರೂಮಿಗೆ ಹೋದವನೇ ತಟ್ಟನೆ ನಿಂತನು.

ಏನೋ ವಾಸನೆ ಬರುತ್ತಿದೆ.

ಕೆಟ್ಟ ಕಮಿಕಲ್ ವಾಸನೆ.


ಏನೋ ಅನುಮಾನ ಬಂದು ಮೂಗನ್ನು ಒತ್ತಿ ಹಿಡಿದುಕೊಂಡು ಒಳಗೆ ಬಂದು ಪರೀಕ್ಷೆ ಮಾಡಿದನು. ಕಾವ್ಯ ಪ್ರಜ್ಞಾಶೂನ್ಯಳಾಗಿ ಮಲಗಿದ್ದಾಳೆ. ಈಗ ಎಲ್ಲರೂ ಗಾಬರಿಯಿಂದ ಬಂದರು.

ಮನೋಹರ ''ನೀವೆಲ್ಲಾ ಸುಳ್ಳು ಹೇಳಿದ್ದೀರ ಬ್ಯಾಕ್ ಡೋರ್ ಲಾಕ್ ಮಾಡಿಲ್ಲ. ಯಾರೋ ರಾಬರ್ ಇದನ್ನು ಕಂಡು ಒಳಗೆ ಬಂದು ಕಳ್ಳತನ ಮಾಡಲು ಪ್ರಯತ್ನಿಸಿದ್ದಾನೆ. ಆದರೆ ಅಷ್ಟರಲ್ಲಿ ನಾನು ಬಂದು ಕಾಲಿಂಗ್ ಬಝರ್ ಒತ್ತಿದ್ದರಿಂದ ಬ್ಯಾಕ್ ಡೋರ್ ತೆಗೆದು ಎಸ್ಕೇಪ್ ಆಗಿದ್ದಾನೆ'' ಎಂದನು.

ರಾಜೇಂದ್ರಬಾಬು ''ಮನೋಹರ... ಹೊರಗಿನವರು ಅದು ಹೇಗೆ ಡೋರ್ ಓಪನ್ ಮಾಡಲು ಸಾಧ್ಯ?''

☞10


# ನಯವಂಚಕನ ಸೈಟ್‌ನ ಮೇಲಿನ ವ್ಯಾಮೋಹಕ್ಕೆ ಬಲಿಯಾದ ಗೃಹಿಣಿ!


ಆತ್ಮಹತ್ಯೆಗೆ ಶರಣಾದ ವನಿತಾ


**ಚಿಕ್ಕಬಳ್ಳಾಪುರ**
ಎನ್. ಬ್ರಹ್ಮಚಾರಿ

ಯುವಕನೊಬ್ಬನ ಮೋಸದ ಜಾಲಕ್ಕೆ ಗೃಹಿಣಿಯೊಬ್ಬಳು ಸಿಲುಕಿ, ಯುವಕ ಫೇಕ್ ಅಗ್ರಿಮೆಂಟ್ ತೋರಿಸಿ ಬರೋಬ್ಬರಿ 20 ಲಕ್ಷದವರೆಗೂ ಗೃಹಿಣಿಗೆ ಮೋಸ ಮಾಡಿದ್ದಾನೆ. ಈ ವಿಚಾರ ಗೃಹಿಣಿಯ ಗಂಡನಿಗೆ ತಿಳಿದು ಮನೆಯಲ್ಲಿ ಗಲಾಟೆಯಾಗಿದೆ. ಮನನೊಂದ ಗೃಹಿಣಿ ಹಣ ತರುತ್ತೇನೆಂದು ಹೇಳಿ ಹೋಗಿ ಕಲ್ಯಾಣಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ.

ಈಕೆಯ ಹೆಸರು ವನಿತಾ ಅಂತಾ. ವಯಸ್ಸು 36 ವರ್ಷ. ಚಿಕ್ಕಬಳ್ಳಾಪುರ ನಗರದ ಕೋಟೆ ಬಡಾವಣೆಯ ಜೆಟ್ಟಿಗರ ಬೀದಿಯ ನಿವಾಸಿ. ಗಂಡ ಕುಮಾರ್ ಅಡುಗೆ ಭಟ್ಟನಾಗಿದ್ದ. ಗಂಡನ ಜೊತೆ ವನಿತಾಳು ಸಹ ಕೆಲಸದಲ್ಲಿ ಭಾಗಿಯಾಗಿದ್ದಳು. ಆದರೆ ವನಿತಾ ಅದೇ ಏರಿಯಾದಲ್ಲಿ ಬೇರೊಬ್ಬರ ಬಳಿ ಚೀಟಿ ವ್ಯವಹಾರ ನಡೆಸುತ್ತಿದ್ದಳು. ಅದೇ ಸ್ಥಳದಲ್ಲಿ ವಿಕ್ಕಿ ಎಂಬ ಯುವಕನ ಪರಿಚಯವಾಗಿದೆ. ಚೀಟಿ ನೆಪದಲ್ಲಿ ವನಿತಾಳಿಗೆ ಹತ್ತಿರವಾಗಿದ್ದಾನೆ. ತನ್ನನ್ನು ನಂಬುವಷ್ಟರ ಮಟ್ಟಿಗೆ ವನಿತಾಳಿಗೆ ಹತ್ತಿರವಾಗುತ್ತಾನೆ. ಅದೇ ಸಲುಗೆಯನ್ನು ಕಂಡುಕೊಂಡ ವಿಕ್ಕಿ ವನಿತಾಳಿಂದ ಆಗಾಗ ಫೋನ್ ಪೇ ಮೂಲಕ ಹಣ ಹಾಕಿಸಿಕೊಂಡಿದ್ದಾನೆ. ಹೀಗೆ ಲಕ್ಷಾಂತರ ರೂ.ಗಳನ್ನು ತನ್ನ ಖಾತೆಗೆ ಹಾಕಿಸಿಕೊಂಡು ಸೈಟ್ ಒಂದನ್ನು ತೋರಿಸಿ ಫೇಕ್ ಅಗ್ರಿಮೆಂಟ್ ಸಹ ಹಾಕಿಸಿಕೊಟ್ಟಿದ್ದಾನಂತೆ. ಅಲ್ಲದೆ ಗಂಡನಿಗೆ ತಿಳಿಯದೆ ವನಿತಾ ಹಾಗೂ ಅವರ ಅಮ್ಮನ ಒಡವೆಗಳನ್ನೂ ಸಹ ಹಣಕ್ಕಾಗಿ ಗಿರವಿ ಇಟ್ಟಿದ್ದಾನೆಂದು ಕೇಳಿಬಂದಿದೆ.


ಮೃತಳ ಗಂಡ ಕುಮಾರ್

ಹೀಗೆ ಬರೋಬ್ಬರಿ 20 ಲಕ್ಷ ರೂ.ಗಳನ್ನು ವಂಚನೆ ಮಾಡಿದ್ದಾನಂತೆ. ಇನ್ನೂ ಈ ವಿಚಾರ ಗಂಡನಿಗೆ ತಿಳಿದಿದೆ. ಮನೆಯಲ್ಲಿದ್ದ ಹಣ ಕೇಳಿದಾಗ ಸಬೂಬು ಹೇಳಿ ಜಾರಿಕೊಂಡಿದ್ದಾಳೆ. ಗಟ್ಟಿಯಾಗಿ ಕೇಳಿದಾಗ ಮನೆಯಲ್ಲಿ ಗಲಾಟೆಯಾಗಿದೆ. ನಂತರ ಗಂಡ ಸಹ ವಿಕ್ಕಿಯವರ ಮನೆಗೆ ತೆರಳಿ ಹಣ ಕೇಳಿದ್ದಾರಂತೆ. ಆದರೆ ವಿಕ್ಕಿ ಮನೆಯಲ್ಲಿ ಇರಲಿಲ್ಲ, ಅವನ ಪೋಷಕರನ್ನು ಕೇಳಿದರೆ ಉಡಾಫೆ ಉತ್ತರ ಕೊಟ್ಟಿದ್ದಾರಂತೆ. ಮನೆಗೆ ಬಂದು ಅಲ್ಲಿ ಆದ ರಾದ್ಧಾಂತವನ್ನು ವನಿತಾಳಿಗೆ ತಿಳಿಸಿದಾಗ ವನಿತಾ ಸಹ ಫೋನ್ ಮಾಡಿದ್ದಾಳೆ. ಆದರೆ ಫೋನ್ ಸ್ವಿಚ್ ಆಫ್ ಆಗಿದೆ. ಇದರಿಂದ ಗಂಡನಿಂದ ಕೋಪದ ಮಾತುಗಳನ್ನು ಕೇಳಿ ಮನಸ್ಸನ್ನು ಘಾಸಿ ಮಾಡಿಕೊಳ್ಳುತ್ತಾಳೆ. 15ರಂದು ಹಣ ತರುತ್ತೇನೆಂದು ಮನೆಯಿಂದ ಹೊರಟವಳು 16ರಂದು ನಗರದ ಬಿ.ಬಿ. ರಸ್ತೆಯ ಕನ್ನಡ ಭವನದ ಪಕ್ಕದಲ್ಲೇ ಇರುವ ಕಲ್ಯಾಣಿಯಲ್ಲಿ ಶವವಾಗಿ ಪತ್ತೆಯಾಗಿದ್ದಾಳೆ.


ಎಸ್ಪಿ ಕುಶಾಲ್ ಚೌಕ್ಸೆ

ವನಿತಾಳಿಗೆ ಇಬ್ಬರು ಗಂಡು ಮಕ್ಕಳಿದ್ದು ಗಂಡ ಕುಮಾರ್‌ನ 5 ಲಕ್ಷ ರೂಪಾಯಿ ಹಣದಲ್ಲಿ ವಿಕ್ಕಿಗೆ ಎರಡೂವರೆ ಲಕ್ಷ ಹಣ ಕೊಟ್ಟಿದ್ದಳಂತೆ. ಇಷ್ಟೇ ಅಲ್ಲದೆ ಗಂಡನಿಗೆ ತಿಳಿಯದಂತೆ ಹಲವು ಕಡೆ ಫೈನಾನ್ಸ್‌ಗಳಲ್ಲೂ ಸಾಲ ಮಾಡಿಕೊಂಡಿದ್ದಳಂತೆ. ಇದೇ ವಿಚಾರವಾಗಿ ಮನೆಯಲ್ಲಿ ಗಲಾಟೆ ನಡೆದಿದ್ದು


ವಿಕ್ಕಿ

ಇದರಿಂದ ಮನನೊಂದ ವನಿತಾ ಏ.15 ರಂದು ಬೆಳಿಗ್ಗೆ ಮನೆಯಿಂದ ಹೊರಟು ಹೋಗಿದ್ದಳು. ಏ. 16ರಂದು ಬೆಳಿಗ್ಗೆ ಕಲ್ಯಾಣಿಯಲ್ಲಿ ಶವವಾಗಿ ಪತ್ತೆಯಾಗಿದ್ದಾಳೆ. 20 ಲಕ್ಷ ವಂಚನೆ ಮಾಡಿದ ವಿಕ್ಕಿಯ ವಿರುದ್ಧ ಚಿಕ್ಕಬಳ್ಳಾಪುರ ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಇನ್ನೂ ಸ್ಥಳಕ್ಕೆ ಎಸ್ಪಿ ಕುಶಾಲ್ ಚೌಕ್ಸೆ, ನಗರ ಠಾಣಾ ಪಿಎಸ್‌ಐ ಅಮರ್ ಮೋಗ್ಲೆ, ಗ್ರಾಮಾಂತರ ಠಾಣಾ ಪಿಎಸ್‌ಐ ಶರಣಪ್ಪ ಭೇಟಿ ಕೊಟ್ಟು ಪರಿಶಿಲನೆ ನಡೆಸಿ ಮುಂದಿನ ಕ್ರಮ ಕೈಗೊಂಡಿದ್ದಾರೆ.







# 9 ತಿಂಗಳ ಗರ್ಭಿಣಿ ಅನುಮಾನಾಸ್ಪದ ಸಾವು: ವರದಕ್ಷಿಣೆ ಕಿರುಕುಳದಿಂದ ಕೊಲೆ ಆರೋಪ

**ರಾಯಚೂರು**
ವೀರನಗೌಡ

ಇನ್‌ಸ್ಟಾಗ್ರಾಮ್‌ನಲ್ಲಿ ರಾಯಚೂರು ಯುವಕ ಹಾಗೂ ಚಾಮರಾಜನಗರದ ಯುವತಿ ನಂಟು ಬೆಳೆದಿದ್ದು, ಬಳಿಕ ಪ್ರೀತಿಸಿ ಮದುವೆಯಾಗಿದ್ದರು. ಆದರೆ, ಮದುವೆಯಾದ 11 ತಿಂಗಳಿಗೆ ಅನುಮಾನಾಸ್ಪದವಾಗಿ ಸಾವನ್ನಪ್ಪಿದ್ದಾಳೆ. ತುಂಬು ಗರ್ಭಿಣಿಯಾಗಿದ್ದ ಮಹಿಳೆ ಇನ್ನೇನು ಇನ್ನೊಂದು ಜೀವಕ್ಕೆ ಜನ್ಮ ನೀಡುವ ವೇಳೆಯಲ್ಲೇ ದುರಂತ ಸಾವು ಕಂಡಿದ್ದು, ಇನ್‌ಸ್ಟಾಗ್ರಾಮ್ ಮೂಲಕ ನಂಟು ಬೆಳೆಸಿ ಮೂರು ಮೂರು ಗಂಟು ಹಾಕಿದ್ದ ಪತಿ ಅರೆಸ್ಟ್ ಆಗಿದ್ದಾನೆ.


ಮೃತ ಅನುಪಮಾ



ನಾನೊಂದು ತೀರ ನೀನೊಂದು ತೀರ ಎನ್ನುವಂತೆ ಯುವಕ ಒಂದು ದಿಕ್ಕಿನ ಜಿಲ್ಲೆಯವನಾಗಿದ್ದರೆ, ಯುವತಿ ಮತ್ತೊಂದು ದಿಕ್ಕಿನವಳು. ಆದರೆ, ಇಬ್ಬರ ನಡುವೆ ಇನ್‌ಸ್ಟಾಗ್ರಾಮ್ ನಂಟು ಬೆಳೆಸಿತ್ತು. ಇದಾಗ ಸ್ವಲ್ಪ ದಿನಗಳಲ್ಲೇ ಯುವತಿ ಕೊರಳಿಗೆ ಮೂರು ಗಂಟು ಸಹ ಬಿದ್ದಿತ್ತು. ಆದರೆ, ಮದುವೆಯಾಗಿ ಆಕೆ ತುಂಬು ಗರ್ಭಿಣಿಯಾಗಿರುವ ಸಂದರ್ಭದಲ್ಲೇ ಅನುವಮಾಸ್ಪದ ಸಾವನ್ನಪ್ಪಿದ್ದಾಳೆ. ರಾಯಚೂರು ಜಿಲ್ಲೆಯ ಯುವಕನ್ನು ಪ್ರೀತಿಸಿ ಮದುವೆಯಾಗಿದ್ದ ಚಾಮರಾಜನಗರದ ಅನುಪಮ ಎನ್ನುವ 9 ತಿಂಗಳ ತುಂಬು ಗರ್ಭಿಣಿ ಮಹಿಳೆ ಮೃತದೇಹ ನೇಣು ಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಸಿಂಧನೂರು ತಾಲೂಕಿನ ಬೂದಿಹಾಳದ ಗಂಡನ ಮನೆಯಲ್ಲಿ ಮಹಿಳೆ ಸಾವನ್ನಪ್ಪಿದ್ದು, ಈ ಸಂಬಂಧ ಪೊಲೀಸರು ಪತಿಯನ್ನು ಬಂಧಿಸಿದ್ದಾರೆ.

ಚಾಮರಾಜನಗರ ಮೂಲದ ಅನುಪಮಾ (20) ಮೃತ ಗರ್ಭಿಣಿ. ಅನುಪಮಾ ಹಾಗೂ ರಾಯಚೂರಿನ ಬೂದಿಹಾಳದ ನಾಗರಾಜ್ ಇನ್‌ಸ್ಟಾಗ್ರಾಂನಲ್ಲಿ ಪರಿಚಯವಾಗಿದ್ದರು. ಇಬ್ಬರ ಪರಿಚಯ ಪ್ರೀತಿಗೆ ತಿರುಗಿ ಬಳಿಕ 11 ತಿಂಗಳ ಹಿಂದೆ ಮದುವೆಯಾಗಿದ್ದರು. ಮದುವೆಯಾದ ಹೊಸದರಲ್ಲಿ ಎಲ್ಲವೂ ಚೆನ್ನಾಗಿಯೇ ಇತ್ತು. ಆದರೆ, ಅದೇನಾಯ್ತೋ ಏನು ಅನುಪಮ

☞ 12


ಎಸ್ಪಿ ಪುಟ್ಟಮಾದಯ್ಯ


ಆರೋಪಿ ನಾಗರಾಜ

6 ☜

''ಹೇಗೆ ಏನು ಅಂತ ಗೊತ್ತಿಲ್ಲ. ಬ್ಯಾಕ್ ಡೋರ್ ಓಪನ್ ಆಗಿರೋದ್ರಿಂದ ಕಳ್ಳತನ ಬಗ್ಗೆ ಚಿಂತಿಸಬೇಕಾಗಿದೆ'' ಎಂದು ರೂಮಿನ ಎಲ್ಲಾ ಕಿಟಕಿಗಳನ್ನು ತೆರೆದನು.

ಕೆಮಿಕಲ್ ವಾಸನೆ ಗಾಳಿಯ ಕಾರಣದಿಂದ ಕಡಿಮೆ ಆಗುತ್ತಿದೆ. ಕಳ್ಳತನ ಮಾಡಿಲ್ಲ. ಯಾಕೆ ಅಂದರೆ, ಬೀರುವಿನ ಲಾಕರ್ ಕೀ ಗೋಡೆಗೆ ಮೊಳೆ ಹೊಡೆದು ಹ್ಯಾಂಗ್ ಮಾಡಲಾಗಿದೆ.

ಆ ರಾತ್ರಿ ಯಾರೂ ನಿದ್ದೆ ಮಾಡಲಿಲ್ಲ. ಒಳಗೆ ಯಾರು ಹೇಗೆ ಬಂದರು? ಬ್ಯಾಕ್ ಡೋರ್ ಓಪನ್ ಮಾಡಲು ಹೇಗೆ ಸಾಧ್ಯವಾಯಿತು? ಅವನು ಒಳಗೆ ಬಂದು ಕಾವ್ಯಳ ಪ್ರಜ್ಞೆ ತಪ್ಪಿಸಿದ್ದಾನೆ. ಆದರೂ ಸಹ ನಿಮ್ಗ್ಯಾರಿಗೂ ಎಚ್ಚರ ಆಗಲಿಲ್ಲ ಎಂದು ಆಕ್ಷೇಪಿಸಿದನು.

ರಾತ್ರಿ ಎರಡು ಗಂಟೆ!

ಕಾವ್ಯಳಿಗೆ ಎಚ್ಚರವಾಯಿತು. ಕೆಮಿಕಲ್ ವಾಸನೆ ಪ್ರಭಾವದಿಂದ ಹೊರಗೆ ಬರಲು ಕೆಲವು ನಿಮಿಷಗಳು ಬೇಕಾಯಿತು. ತನ್ನ ಸುತ್ತಲು ಗಂಡ ಮತ್ತು ಉಳಿದವರು ಕುಳಿತಿರೋದನ್ನ ಕಂಡು ಗಾಬರಿಯಾಯಿತು.

ಮನೋಹರ ಈಗ ಹೆಂಡತಿಯ ತಲೆ ಸವರುತ್ತಾ ''ಕಾವ್ಯ... ಏನು ನಡೆಯಿತು ಅಂತ ನೆನಪು ಮಾಡಿಕೊಂಡು ಹೇಳು'' ಎಂದನು.

''ನೀವು... ನೀವು... ಯಾವಾಗ ಬಂದ್ರಿ? ನಾಡಿದ್ದು ಬರ್ತೀನಿ ಅಂತ ಹೇಳಿದ್ರಿ.''

''ಬ್ರಾಂಚ್‌ಗಳ ಕೆಲಸ ಮುಗೀತು ಬೇಗ ಬಂದೆ. ಓಕೆ ಈಗ ಹೇಳು ಕಾವ್ಯ'' ಎಂದು ಕೈ ಹಿಡಿದು ಒತ್ತಿದನು.

ಅವಳು ನೆನಪು ಮಾಡಿಕೊಳ್ಳುತ್ತಾ ''ಯಾರೋ ದಢೂತಿ ತನ್ನ ಮುಖ ಕಾಣದ ರೀತಿ ಮರೆ ಮಾಡಿಕೊಂಡಿದ್ದ.''

''ಹೂಂ... ಆಮೇಲೆ...''

''ಒಳಗೆ ಬಂದ ಕೂಡಲೇ ನನಗೆ ಪ್ರಜ್ಞೆ ತಪ್ಪಿಸಿದ. ಆಮೇಲೆ ಏನಾಯಿತು ಅಂತ ಗೊತ್ತಿಲ್ಲ.''

''ಅವನ ಬಗ್ಗೆ ಸುಳಿವು ಕೊಡಲು ಸಾಧ್ಯವೇ ಅಂತ ನೆನಪು ಮಡಿಕೋ ಕಾವ್ಯ.''

''ಈಗಿನ ಪರಿಸ್ಥಿತಿಯಲ್ಲಿ ಆಗೋಲ್ಲ. ಸ್ವಲ್ಪ ರಿಲ್ಯಾಕ್ಸ್ ಆದ ಮೇಲೆ ಟ್ರೈ ಮಾಡ್ತೀನಿ'' ಎಂದು ಆಕಳಿಸುತ್ತಾ ಮಲಗಿದಳು.

●●●

ಆಫೀಸ್ ಕೆಲಸಕ್ಕೆ ಒಂದು ದಿವಸ ರಜಾ ಹಾಕಿ ಪೊಲೀಸ್ ಸ್ಟೇಷನ್‌ಗೆ ಹೆಂಡತಿಯ ಜೊತೆ ಹೋಗಿ ಕಂಪ್ಲೆಂಟ್ ಕೊಟ್ಟು ಬಂದನು. ''ಕಂಪ್ಲೆಂಟ್ ಲಾಡ್ಜ್ ಮಾಡಿಕೊಂಡ ನಂತರ ರಾತ್ರಿ ವೇಳೆ ನಿಮ್ಮ ಮನೆ ಇರುವ ಬಡಾವಣೆಯಲ್ಲಿ ಬೀಟ್ ಪೊಲೀಸರ ವ್ಯವಸ್ಥೆ ಮಾಡ್ತೀನಿ. ಪುನಃ ಏನಾದರೂ ಈ ರೀತಿ ಘಟನೆ ನಡೆದರೆ ಪೊಲೀಸರಿಗೆ ಫೋನ್ ಮಾಡಿ'' ಎಂದು ಹೇಳಿ ಧೈರ್ಯ ತುಂಬಿದರು.

ಆ ದಿವಸ ಅಂತಹ ಯಾವ ವಿಶೇಷ ಘಟನೆ ನಡೆಯಲಿಲ್ಲ.

ಮರುದಿವಸ ತಮ್ಮ, ತಂಗಿ, ಸೋದರಮಾವನಿಗೆ ಖಡಕ್ ಎಚ್ಚರಿಕೆ ನೀಡಿ ಡ್ಯೂಟಿಗೆ ಹೊರಟನು ಮನೋಹರ. ''ಇವತ್ತು ನಾನು ಮೈಸೂರ್ ಬ್ರಾಂಚ್‌ನಲ್ಲಿ ಇರ್ತೀನಿ. ಏನಾದರೂ ತೊಂದರೆ ಉಂಟಾದರೆ ಫೋನ್ ಮಾಡಿ ಕಂಪನಿ ವೆಹಿಕಲ್‌ನಲ್ಲಿ ಕೂಡಲೇ ಬರ್ತೀನಿ'' ಎಂದನು.

ಕಾವ್ಯ ಸಂಜೆ ಐದು ಗಂಟೆ ತನಕ ಪ್ರೈವೇಟ್ ಕಂಪನಿಯಲ್ಲಿ ಕೆಲಸ ಮಾಡಿದ ನಂತರ, ಅದೇ ಏರಿಯಾದಲ್ಲಿರುವ ಪ್ರೈವೇಟ್ ಡಿಟೆಕ್ಟೀವ್ ಕಂಪನಿಗೆ ಹೊರಟಳು.

ಪಾರ್ಟ್‌ಟೈಂ ಕೆಲಸ.

ಸಂಜೆ ಐದರಿಂದ ಎಂಟು ಗಂಟೆ ಈ ಕಂಪನಿಯ ಬಾಸ್ (ಡಿಟೆಕ್ಟೀವ್)ಗೆ ರಾತ್ರಿ ಘಟನೆಯ ಬಗ್ಗೆ ಹೇಳಬೇಕು ಎಂದು ಅಂದುಕೊಂಡಿದ್ದಳು. ಆದರೆ ಆಗಲಿಲ್ಲ. ಯಾಕೆ ಅಂದರೆ, ಶ್ರೀಮಂತ ಉದ್ಯಮಿಯೊಬ್ಬರು ಭರ್ಜರಿ ಕೇಸನ್ನು ಕೊಟ್ಟಿದ್ದರು ಮತ್ತು ಅದರ ಬಗ್ಗೆ ತುಂಬಾ ಹೊತ್ತು ಚರ್ಚೆ ನಡೆಯಿತು.

ರಾತ್ರಿ ಎಂಟು ಗಂಟೆ!

ಅವಳು ಮನೆಗೆ ಬಂದಳು. ಮೈದುನ, ನಾದಿನಿ ಬಂದಿರಲಿಲ್ಲ. ಕಾಲೇಜ್ ಡೇ ಫಂಕ್ಷನ್ ಇದೆ. ಬರೋದು ತಡವಾಗುತ್ತದೆ ಎಂದು ಹೇಳಿದ್ದರು.

ರಾಜೇಂದ್ರಬಾಬು ಅವರು ಇವಳು ಆಫೀಸ್ ನಲ್ಲಿರುವಾಗಲೇ ಫೋನ್ ಮಾಡಿ ''ನನ್ನ ಸಹದ್ಯೋಗಿ ಭಾಸ್ಕರನ್ ತುಂಬಾ ಒತ್ತಾಯ ಮಾಡಿ ಊಟಕ್ಕೆ ಕರೆದಿದ್ದಾನೆ. ನಾನು ಬರೋದು ಹತ್ತು ಗಂಟೆ ಆಗುತ್ತೆ'' ಎಂದು ಹೇಳಿದ್ದರು.

ಮನೇಲಿ ಯಾರೂ ಇರಲಿಲ್ಲ. ಈಗ ಅವಳು ಒಳಗೆ ಬಂದಳು. ತುಂಬಾ ಆಯಾಸ ಆಗಿದ್ದರಿಂದ ನೀರು ಕುಡಿದು ಸೋಫಾದಲ್ಲಿ ಕುಳಿತು ರಿಲ್ಯಾಕ್ಸ್ ಮಾಡಿಕೊಂಡಳು.

ಆಕಸ್ಮಿಕವಾಗಿ ಅವಳ ದೃಷ್ಟಿ ಬೆಡ್‌ರೂಂ ಕಡೆ ತಿರುಗಿತು.

ಡೋರ್ ಓಪನ್ ಆಗಿದೆ!

ಅವಳಿಗೆ ಚೆನ್ನಾಗಿ ನೆನಪಿದೆ.

ಅವಳು ಡ್ಯೂಟಿಗೆ ಹೋಗುವಾಗ ರೂಮಿನ ಡೋರ್ ಎಳೆದು ಭದ್ರಪಡಿಸಿದ್ದಳು. ಡೋರ್ ಲಾಕ್ ಮಾಡಿರಲಿಲ್ಲ.

ಆದರೆ ಡೋರ್ ಯಾಕೆ ಓಪನ್ ಆಗಿದೆ?

ಒಳಗೆ ಬಂದು ನೋಡಿದಳು. ಬೀರುವಿನ ಡೋರ್ ಲಾಕ್ ಓಪನ್ ಆಗಿದೆ. ಯಾರೋ ಒಳಗೆಲ್ಲಾ ಕೈ ತೂರಿಸಿ ಹುಡುಕಾಡಿದಂತೆ ಎಲ್ಲ ಅತ್ತಿತ್ತ ಹರಡಿಕೊಂಡಿದೆ.

ಸೀಕ್ರೇಟ್ ಲಾಕರ್ ಓಪನ್ ಆಗಿರಲಿಲ್ಲ. ಯಾಕೆ ಅಂದರೆ ಅದರ ಕೀ ಯಾವಾಗಲು ಅವಳ ವ್ಯಾನಿಟಿ ಬ್ಯಾಗಲ್ಲಿ ಇರುತ್ತಿತ್ತು.

ಹಣ, ಚಿನ್ನದ ಆಭರಣಗಳ ಜೊತೆಗೆ ಮುಖ್ಯವಾದ ಡಾಕ್ಯುಮೆಂಟ್ ಫೈಲ್ ಅನ್ನು ಆ ಸೀಕ್ರೇಟ್ ಲಾಕರ್‌ನಲ್ಲಿ ಇಡಲಾಗಿದೆ.

ಅವಳು ಬೆಚ್ಚಿಬಿದ್ದಳು. ಯಾರೋ ಆ ಡಾಕ್ಯುಮೆಂಟ್ ಫೈಲ್‌ಗಾಗಿ ಎರಡು ಸಲ ಹುಡುಕಾಡಿದ್ದಾರೆ. ಎರಡು ದಿನಗಳ ಹಿಂದೆ ನನ್ನ ಪ್ರಜ್ಞೆ ತಪ್ಪಿಸಿದ್ದು ಇದೇ ಕಾರಣದಿಂದ. ನನ್ನ ಗಂಡ ದಿಢೀರ್ ಅಂತ ಬಂದಿದ್ದರಿಂದ ಬ್ಯಾಕ್‌ಡೋರ್ ಮೂಲಕ ಪರಾರಿಯಾಗಿದ್ದಾನೆ. ಆದರೂ ಸಹ ಅವನು ಒಳಗೆ ಹೇಗೆ ಬಂದಿದ್ದ?

ಸಂಜೆ ಆಫೀಸ್‌ನಲ್ಲಿ ಉಪಹಾರದ ವ್ಯವಸ್ಥೆ ತುಂಬಾ ಅದ್ದೂರಿಯಾಗಿ ಮಾಡಿದ್ದರು. ಆದ್ದರಿಂದ ರಾತ್ರಿ ಊಟ ಮಾಡಬೇಕು ಎಂದು ಅನಿಸಲಿಲ್ಲ. ಅವಳು ಹಾಲನ್ನು ಕಾಯಿಸಿಕೊಂಡು ಕುಡಿಯಲು ರೆಡಿ ಮಾಡಿಕೊಂಡಳು.

ಲೋಟಕ್ಕೆ ಹಾಲನ್ನು ಹಾಕುತ್ತಿರುವಾಗ ಕಾಲಿಂಗ್ ಬೆಲ್ ಶಬ್ದ ಮಾಡಿದ್ದರಿಂದ ಅವಳು ಹಾಲಿನ ಲೋಟವನ್ನು ಟೇಬಲ್ ಮೇಲೆ ಇಟ್ಟು ಹೊರಗೆ ಬಂದು ಡೋರ್ ಲಾಕ್ ಓಪನ್ ಮಾಡಿದಳು.

ಪಕ್ಕದ ಮನೆ ಹೆಂಗಸು ಯಾವುದೋ ಅಗತ್ಯ ವಸ್ತು (ಅಡುಗೆ ಸಾಮಾನು) ಬೇಕು ಎಂದು ಕೇಳಲು ಬಂದವನು. ಅವರ ತಾಪತ್ರೆ ಬಗ್ಗೆ ಹೇಳುತ್ತಿರುವಾಗ ಡೈನಿಂಗ್ ಟೇಬಲ್ ಹತ್ತಿರ ಏನೋ ಶಬ್ದ ಆಯಿತು.

ಆಕೆ ಕೇಳಿದ್ದನ್ನು ಕೊಡಲು ಬಂದಾಗ ಆ ದೃಶ್ಯ ಕಂಡಿತು.

ಹಾಲಿನ ಲೋಟ ನೆಲದ ಮೇಲೆ ಬಿದ್ದಿದೆ. ಬೆಕ್ಕು ನೆಲದಲ್ಲಿ ಚೆಲ್ಲಿರುವ ಹಾಲನ್ನು ನೆಕ್ಕುತ್ತಿದೆ. ಹೇಗಿದ್ದರೂ ವೇಸ್ಟ್ ಆಗಿದೆ. ಆ ಬೇಕಾದರೂ ಕುಡಿಯಲಿ ಎಂದು ಶಬ್ದ ಆಗದಂತೆ ಬೇರೆ ಕಡೆಯಿಂದ ಕಿಚನ್‌ಗೆ ಹೋಗಿ ಆ ಹೆಂಗಸು ಕೇಳಿದ್ದ ಸಾಮಾನು ಕೊಟ್ಟು ಡೋರ್ ಲಾಕ್ ಮಾಡಿಕೊಂಡು ಬಂದಳು.

ಬೆಕ್ಕು ಅಲ್ಲಿರಲಿಲ್ಲ.

ನೆಲದ ಮೇಲೆ ಚೆಲ್ಲಿದ್ದ, ಬೆಕ್ಕು ನೆಕ್ಕಿ ಉಳಿದಿದ್ದ ಆ ಜಾಗವನ್ನೆಲ್ಲಾ ಒದ್ದೆ ಬಟ್ಟೆಯಿಂದ ಒರೆಸಿದಳು.

ಫೋನ್ ಕಾಲ್ ಬಂದಿತು.

ಗಂಡ ಮನೋಹರ ಮಾತಾಡುತ್ತಿದ್ದಾನೆ. ''ಕಾವ್ಯ... ಏನಾದರೂ ಪ್ರಾಬ್ಲಂ ಇದ್ದರೆ ಓಪನ್ ಆಗಿ ಹೇಳು.''

''ಇಲ್ಲ... ಏನೂ ಇಲ್ಲ.''

''ಸೂರ್ಯ, ಮಾನ್ಯತ, ಮಾವ ಇದ್ದಾರ?''

''ಮನೇಲಿ ಯಾರೂ ಇಲ್ಲ. ಅವರೆಲ್ಲಾ ಫಂಕ್ಷನ್‌ಗೆ ಹೋಗಿದ್ದಾರೆ.''

''ಬೀ ಕೇರ್‌ಫುಲ್. ಫ್ರಂಟ್, ಬ್ಯಾಕ್ ಡೋರ್ ಗಳನ್ನು ಕ್ಲೋಸ್ ಮಾಡು.''

''ಆಗಲಿ ಮಾಡ್ತೀನಿ.''

ಅವಳು ಸಂಸಾರದ ವಿಚಾರವಾಗಿ ಸ್ವಲ್ಪ ಹೊತ್ತು ಗಂಡನ ಜೊತೆ ಮಾತಾಡಿ, ನೇಚರ್ ಕಾಲ್‌ಗಾಗಿ ಟಾಯ್ಲೆಟ್ ಕಡೆ ಹೊರಟಳು.

ಆ ದೃಶ್ಯ ಕಂಡು ಬಂದಿತು.

ಬೆಕ್ಕು ಟಾಯ್ಲೆಟ್‌ಗೆ ಅಡ್ಡಲಾಗಿ ಮಲಗಿದೆ. ಅವಳು ಗಾಬರಿಯಾದಳು. ಚಪ್ಪಾಳೆ ತಟ್ಟಿ ಓಡಿಸಲು ಪ್ರಯತ್ನಿಸಿದಳು. ಆದರೆ ಆ ಬೆಕ್ಕು ಅಲ್ಲಿಂದ ಅಲ್ಲಾಡಲಿಲ್ಲ. ಏನೋ ಅನುಮಾನ ಬಂದು ಪರೀಕ್ಷೆ ಮಾಡಿದಳು.

ಬೆಕ್ಕು ಸತ್ತು ಹೋಗಿದೆ.

ನೀಲಿ ಛಾಯೆ ಆಡರಿಕೊಂಡಿದೆ.

ಅವಳು ಗಾಬರಿಯಾದಳು. ಏನೋ ಅನುಮಾನ ಬಂದು ಹಾಲಿನ ಪಾತ್ರೆ ತಂದು ತುಂಬಾ ಸೂಕ್ಷ್ಮವಾಗಿ ಗಮನಿಸಿದಳು. ಆದರೆ ಬಾಹ್ಯ ನೋಟಕ್ಕೆ ಏನೂ ಸಹ ಕಂಡು ಬರಲಿಲ್ಲ. ಅವಳೀಗ ಸೂರ್ಯ, ಮಾನ್ಯತ ಮತ್ತು ರಾಜೇಂದ್ರಬಾಬುಗೆ ಫೋನ್ ಮಾಡಿದಳು. ನಾಲ್ಕಾರು ಸಲ ಟ್ರೈ ಮಾಡಿದ ನಂತರ ಸೂರ್ಯ ಮಾತಾಡಿದನು.

ಅವಳು ಗಾಬರಿಯಿಂದ ಎಲ್ಲಾ ಹೇಳಿ ಬೇಗ ಬರಲು ತಿಳಿಸಿದಳು.

''ಅತ್ತಿಗೆ ಪಾತ್ರೆಯಲ್ಲಿರುವ ಹಾಲನ್ನು ಸೀಸೆಗೆ ಹಾಕಿಕೊಂಡು ಡೋರ್ ಲಾಕ್ ಮಾಡಿ ಸರ್ಕಲ್ ಹತ್ತಿರ ಬನ್ನಿ. ಇದೇ ಬೀದಿಯಲ್ಲಿ ನನ್ನ ಫ್ರೆಂಡ್ ನಡೆಸುತ್ತಿರುವ 'ಕ್ಲಿಯೋ ಫೊರೆನ್ಸಿಕ್' ಲ್ಯಾಬ್ ಇದೆ. ಹಾಲಿನಲ್ಲಿ ವಿಷ ಬೆರೆತಿರೋದು ಕನಫರ್ಮ್ ಆಗುತ್ತೆ.''

ಅವಳು ಅದೇ ರೀತಿ ಮಾಡಿದಳು. ಕೇವಲ ಒಂದು ಗಂಟೆ ಅವಧಿಯಲ್ಲಿ ವರದಿ ಬಂದಿತು.

ಹಾಲಿನಲ್ಲಿ 'ಪೆಂಥಾಲಿನ್' ಎಂಬ ವಿಷ ಬೆರೆತಿದೆ ಎಂಬುದು ಖಚಿತವಾಯಿತು.

ಪ್ರಶ್ನೆ ಎದುರಾಯಿತು.

ವಿಷ ಬೆರೆಸಿರೋದು ಯಾರು?

ಅವರ ಉದ್ದೇಶ ಏನು?

ಕಾವ್ಯಳನ್ನು ಕೊಲೆ ಮಾಡಲು ಎರಡನೆ ಸಲ ಪ್ರಯತ್ನ ಮಾಡಿದ್ದಾರೆ.

ಮಾನ್ಯತ, ರಾಜೇಂದ್ರಬಾಬು ಅವರು ಸಹ ಬಂದಿದ್ದಾರೆ.

ಮನೋಹರನಿಗೆ ಫೋನ್ ಮಾಡಿದ್ದಾರೆ.

ಅವಳು ಗಾಬರಿಯಾಗಿದ್ದಾಳೆ. ಆ ಕ್ಷಣ ಅವಳಿಗೆ ಏನೋ ನೆನಪಿಗೆ ಬಂದಿತು. ತನ್ನನ್ನು ಕೊಲೆ ಮಾಡಲು ಪ್ರಯತ್ನಿಸುತ್ತಿರುವುದಕ್ಕೆ ಮತ್ತು ಬೀರುವಿನಲ್ಲಿರುವ ಸೀಕ್ರೇಟ್ ಲಾಕರ್ ಅನ್ನು ಹುಡುಕಾಡಿರುವುದನ್ನು ಕಾರಣ ಏನು ಎಂಬುದು ನೆನಪಿಗೆ ಬಂದಿತು. ಇದು ವೃತ್ತಿಗೆ ಸಂಬಂಧಪಡುವ ಟಾಪ್ ಸೀಕ್ರೇಟ್.

ಮನೆಯವರಿಗೂ ಸಹ ಹೇಳಿರಲಿಲ್ಲ. ಈಗ ಬಂಗಲೆಯ ಟೆರೇಸ್‌ಗೆ ಬಂದು ಫೋನ್ ಮಾಡಿದಳು.

ಅವಳು ಫೋನ್ ಮಾಡುತ್ತಿರೋದು ಡಿಟೆಕ್ಟೀವ್ ಏಜೆನ್ಸಿಯ ಬಾಸ್‌ಗೆ! ಅವಳು ಪ್ರತಿನಿತ್ಯ, ಆಫೀಸ್ ಕೆಲಸ ಮುಗಿದ ಮೇಲೆ, ಸಂಜೆ ಐದು ಗಂಟೆಯಿಂದ ರಾತ್ರಿ ಎಂಟು ಗಂಟೆತನಕ ಡಿಟೆಕ್ಟೀವ್ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಾಳೆ.

ಡಿಟೆಕ್ಟೀವ್ ಏಜೆನ್ಸಿ ಬಾಸ್ ಮಾತಾಡುತ್ತಿದ್ದಾರೆ. ಅವರು ಧೈರ್ಯ ತುಂಬಿದರು ಮತ್ತು ಪೊಲೀಸ್ ಪ್ರೊಟೆಕ್ಷನ್‌ಗೆ ಅರೇಂಜ್‌ಗೆ ಮಾಡುವುದಾಗಿ ಭರವಸೆ ನೀಡಿದರು.

''ಕಾವ್ಯ ಮೇಡಂ... ನಾನು ಇನ್ನು ಅರ್ಧ ಗಂಟೆಯ ಒಳಗೆ ನಿಮ್ಮ ಮನೆ ಹತ್ತಿರ ಬರ್ತೀನಿ. ನಿಮಗೆ ಕೊಟ್ಟಿರುವ ಟಾಪ್ ಸೀಕ್ರೇಟ್ ಡಾಕ್ಯುಮೆಂಟರಿ ಫೈಲ್ ಮತ್ತು ವೀಡಿಯೋ ಕ್ಲಿಪ್ ಅನ್ನು ನನಗೆ ಕೊಡಿ.''

''ಆಗಲಿ ಸಾರ್.''

''ಡಾಕ್ಯುಮೆಂಟ್ ಪಡೆದ ಮೇಲೂ ಸಹ ನಿಮಗೆ ಪ್ರಾಣಾಪಾಯ ತಪ್ಪಿದ್ದಲ್ಲ. ಯಾಕೆ ಅಂದರೆ ಆ ಕ್ರೈಂ ಘಟನೆಗೆ ಪ್ರಮುಖ ಸಾಕ್ಷಿಯಾಗಿ ಕೋರ್ಟ್‌ಗೆ ಹಾಜರಾಗಲು ಒಪ್ಪಿಕೊಂಡಿದ್ದೀರ. ಆ ದೃಶ್ಯವನ್ನು ಪ್ರತ್ಯಕ್ಷವಾಗಿ ಕಂಡಿದಾಗ ಸಾಕ್ಷಿ ನೀವು. ನಿಮ್ಮ ಹೇಳಿಕೆ ಆರೋಪಿಯ ಅಪರಾಧವನ್ನು ನಿರೂಪಿಸಲು ಬ್ಯಾಕ್ ಬೋನ್ ಆಗಿ ನಿಲ್ಲುತ್ತದೆ. ನಿಮಗೆ ಪೊಲೀಸ್ ಪ್ರೊಟೆಕ್ಷನ್ ಬೇಕು.''

ಅವಳು ಟೆರೇಸ್‌ನಲ್ಲಿ ಮಾತಾಡುತ್ತಿರುವಾಗ ಆ ಮನೆಯಲ್ಲಿ ಒಬ್ಬರಾಗಿರುವ ಒಬ್ಬ ವ್ಯಕ್ತಿ ಮನೆಯಲ್ಲಿ ನಿಂತು ಸಂಭಾಷಣೆ ಕೇಳಿಸಿಕೊಂಡಿದ್ದನು...!

●●●

ಡಿಟೆಕ್ಟೀವ್ ಏಜೆನ್ಸಿ ಬಾಸ್ ಇವಳ ಮನೆಗೆ ಬಂದು ಡಾಕ್ಯುಮೆಂಟ್ಸ್ ಪಡೆದುಕೊಂಡು ನಡೆಯುತ್ತಿದ್ದಾರೆ. ಕಾರಲ್ಲಿ ಬಂದಿದ್ದರೂ ಸಹ ನಡೆದುಕೊಂಡು ಹೋಗುತ್ತಿರುವುದೇ ವಿಶೇಷ.

ರಾತ್ರಿ ಹತ್ತೂವರೆ ಆಗಿದೆ.

ಆಗ ತನ್ನ ಗುರುತು ಸಿಗದಂತೆ ಕವರ್ ಮಾಡಿಕೊಂಡಿದ್ದ ವ್ಯಕ್ತಿ ಬಾಸ್ ಮೇಲೆ ಅಟ್ಯಾಕ್ ಮಾಡಿದನು.

ಡಾಕ್ಯುಮೆಂಟರಿ ಫೈಲ್ ಕಿತ್ತುಕೊಳ್ಳಲು ಪ್ರಯತ್ನ ಮಾಡಿದನು. ಈ ರೀತಿ ಆಗುತ್ತದೆ ಎಂದು ಊಹೆ ಮಾಡಿ, ಎಲ್ಲಾ ರೆಡಿಯಾಗಿ ಬಂದಿದ್ದರು. ಇವರ ಸಹಾಯಕರು ಕೂಡಲೇ ಅಟ್ಯಾಕ್ ಮಾಡಿ ಅನಾಮಿಕನನ್ನು ಬಂಧಿಸಿದರು.

ಅವರು ರಾಜೇಂದ್ರಬಾಬು...!

ಮನೋಹರನ ಸೋದರಮಾವ.

●●●

ಮನೋಹರ ಊರಿಂದ ಬಂದಿದ್ದಾನೆ. ಎಲ್ಲರಿಗೂ ಶಾಕ್ ಉಂಟಾಗಿದೆ. ರಾಜೇಂದ್ರಬಾಬು ಪೊಲೀಸರ ವಶದಲ್ಲಿದ್ದಾರೆ.

ಕಾವ್ಯಳಿಗೆ ಪೂರ್ಣ ಪ್ರಮಾಣದಲ್ಲಿ ರಕ್ಷಣೆ ನೀಡಲಾಗಿದೆ. ರಾಜೇಂದ್ರಬಾಬುರನ್ನು ವಿಚಾರಣೆ ಮಾಡಿದಾಗ ಊಹೆ ಮಾಡಿರದಿದ್ದ ಸತ್ಯ ತಿಳಿಯಿತು.

ಪ್ರಭಾವಶಾಲಿ ರಾಜಕಾರಣಿ 'ರಾಮದಾಸ್' ಕಾಲೇಜಿನ ಯುವತಿಯೊಬ್ಬಳ ಮೇಲೆ ಅತ್ಯಾಚಾರ ಮಾಡಿ ಕೊಲೆ ಮಾಡಿದ್ದರು.

ಅದನ್ನು ಆಕಸ್ಮಿಕವಾಗಿ ಕಾವ್ಯ ನೋಡಿ ವೀಡಿಯೋ ರೆಕಾರ್ಡ್ ಮಾಡಿದ್ದಳು. ಡಿಟೆಕ್ಟೀವ್ ಏಜೆನ್ಸಿ ಬಾಸ್‌ಗೆ ಎಲ್ಲಾ ಹ್ಯಾಂಡ್ ಓವರ್ ಮಾಡಿದ್ದಳು. ಏಜೆನ್ಸಿಯವರು ರಹಸ್ಯವಾಗಿ ತನಿಖೆ ನಡೆಸಿ ಫೈನಲ್ ಡಾಕ್ಯುಮೆಂಟರಿ ಕ್ರೈಂ ಫೈಲ್ ರೆಡಿ ಮಾಡಿದ್ದರು. ಅದನ್ನು ರಹಸ್ಯವಾಗಿ ಇಡುವಂತೆ ಹೇಳಿ ಕಾವ್ಯಳಿಗೆ ಕೊಟ್ಟಿದ್ದರು. ಅವಳು ಅದನ್ನೆಲ್ಲಾ ಸೀಕ್ರೇಟ್ ಲಾಕರ್‌ನಲ್ಲಿ ಇಟ್ಟಿದ್ದಳು.

ರಾಜೇಂದ್ರಬಾಬು ಡ್ರಗ್ ಅಡಿಕ್ಟ್!

ಕಾನೂನಿನ ಪ್ರಕಾರ ಅಪರಾಧ.

ಡ್ರಗ್ಸ್ ಸೇವನೆ ಮತ್ತು ಸ್ಟಾಕ್ ಇಟ್ಟುಕೊಂಡಿರುವ ದೃಶ್ಯಗಳನ್ನು ವೀಡಿಯೋ ಕವರೇಜ್ ಮಾಡಿ ಬ್ಲಾಕ್ ಮೇಲ್ ಮಾಡಿದ್ದರು. ಆದ್ದರಿಂದ ಅವರು ಕಾವ್ಯಳನ್ನು ಕೊಲೆ ಮಾಡಿ, ಆ ಡಾಕ್ಯುಮೆಂಟ್ ಅಪಹರಿಸಲು ಪ್ರಯತ್ನ ಮಾಡಿದ್ದರು.

ಪೊಲೀಸರು ರಾಜಕಾರಣಿ 'ರಾಮದಾಸ್' ಅವರನ್ನು ಅರೆಸ್ಟ್ ಮಾಡಿ ನ್ಯಾಯಾಲಯದಲ್ಲಿ ಹಾಜರುಪಡಿಸಿದ್ದಾರೆ.

ರಾಜಕಾರಣಿ ಮತ್ತು ರಾಜೇಂದ್ರಬಾಬು ಅವರಿಗೆ ಅಪರಾಧಕ್ಕೆ ತಕ್ಕಂತೆ ಶಿಕ್ಷೆ ಆಗಿದೆ. ಕಾವ್ಯ ಅಪಾಯದಿಂದ ಪಾರಾಗಿದ್ದಾಳೆ.

☯

# ಮರ್ಯಾದೆಗೇಡು ಹತ್ಯೆಗಳು ವಿಷಮಾನತೆ ಸಮಾಜದ ಮನಸ್ಥಿತಿಯ ಭಾಷೆ - ಕೆ.ವಿ. ಪ್ರಭಾಕರ್

✍ ಕೋಲಾರ ಮಂಜು

ಹೆಣ್ಣಿನ ಬಗ್ಗೆ ಬಳಕೆ ಆಗುವ ಭಾಷೆ ಗಂಡಾಳಿಕೆಯ ಮನಸ್ಥಿತಿಯದ್ದೇ ಆಗಿದೆ. ಪ್ರೀತಿ ಮಾತಿನಿಂದ ತುಟಿ ಹೊಲಿಯುವ ಸಂಚು, ಮರ್ಯಾದೆಗೇಡು ಹತ್ಯೆಗಳಲ್ಲಿ ಕಾಣುವ ದ್ವೇಷ ಕೂಡ ಗಂಡಾಳಿಕೆಯ ಭಾಷೆಯೇ ಆಗಿದೆ


ಕೆ.ವಿ. ಪ್ರಭಾಕರ್‌ರವರಿಗೆ ನೆನಪಿನ ಕಾಣಿಕೆ ನೀಡುತ್ತಿರುವ ಅಧ್ಯಕ್ಷೆ ಹೆಚ್.ಎಲ್. ಪುಷ್ಪ

ಎಂದು ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರಾದ ಕೆ.ವಿ. ಪ್ರಭಾಕರ್ ಅಭಿಪ್ರಾಯಿಸಿದ್ದಾರೆ.

ಕರ್ನಾಟಕ ಲೇಖಕಿಯರ ಸಂಘದ ಆಶ್ರಯದಲ್ಲಿ ಬೆಂಗಳೂರಿನ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಭಾಂಗಣದಲ್ಲಿ ನಡೆದ 8ನೇ ಅಖಿಲ ಕರ್ನಾಟಕ ಲೇಖಕಿಯರ ಸಮ್ಮೇಳನದಲ್ಲಿ ಭಾಷೆ ಸಾಧ್ಯತೆ ಮತ್ತು ಸವಾಲುಗಳು ವಿಷಯ ಕುರಿತು ಮಾತನಾಡುತ್ತಾ ಅವರು, ನಾನು ಸಾಹಿತಿ ಅಲ್ಲ, ಸಾಹಿತ್ಯದ ಓದುಗ ಅಷ್ಟೇ. ನಾನು ಒಬ್ಬ ಪತ್ರಕರ್ತನಾಗಿ ತಿಳಿದಿದ್ದನ್ನು ಗ್ರಹಿಸಿದ್ದನ್ನು ಮಾತ್ರ ನಿಮ್ಮ ಜೊತೆ ಹಂಚಿಕೊಳ್ಳುತ್ತೇನೆ. ನನ್ನ ಗ್ರಹಿಕೆಯನ್ನು ವಿಸ್ತರಿಸಿಕೊಳ್ಳುವುದಕ್ಕೂ, ತಿದ್ದಿಕೊಳ್ಳುವುದಕ್ಕೂ ಈ ಒಂದು ಗೋಷ್ಠಿ ನನಗೆ ಉಪಯುಕ್ತ ಆಗುತ್ತದೆ ಎಂದು ನಂಬಿಕೊಂಡಿದ್ದೇನೆ. ಅಮ್ಮ, ಅಕ್ಕ, ಅಜ್ಜಿ ಪದಗಳಿಲ್ಲದ ಬೈಯ್ಗುಳಗಳೇ ಇಲ್ಲದ ದ್ವೇಷದ ಭಾಷೆ ಒಂದು ಕಡೆಗಿದೆ. ಹೆಣ್ಣನ್ನು ದೇವತೆ, ಗೋಮಾತೆ ಎಂದು ಕರೆಯುತ್ತಲೇ ಪ್ರೀತಿಯ ಮಾತಿನಿಂದಲೇ ಆಕೆಯ ತುಟಿಗಳನ್ನು ಹೊಲಿಯುವ ಭಾಷೆಯೂ ಮತ್ತೊಂದು ಕಡೆಗಿದೆ. ಈ ಎರಡು ಸಂಚನ್ನು ದಾಟುವ ಸವಾಲು ನಮ್ಮ ಮುಂದಿದೆ. ಈ ದಿಕ್ಕಿನಲ್ಲಿ ಗೋಷ್ಠಿಯು ಬೆಳಕು ಚೆಲ್ಲಬಹುದು ಎಂದು ನಿರೀಕ್ಷಿಸುತ್ತೇನೆ. ಒಂಬತ್ತು ತಿಂಗಳ ಬಾಹ್ಯಾಕಾಶ ಗರ್ಭದಿಂದ ಭೂಮಿಗೆ ಸೇಫ್ ಡೆಲಿವರಿ ಆಗಿರುವ ಸುನಿತಾ ವಿಲಿಯಮ್ಸ್ ಒಂದು ಮಾತು ಹೇಳಿದ್ದಾರೆ. ನಾವು ಮೇಲಕ್ಕೆ ಮೇಲಕ್ಕೆ ಹೋದಷ್ಟೂ ಮನುಷ್ಯ ನಿರ್ಮಿತ ದೇಶದ ಗಡಿಗಳು ಕಾಣೆ ಆಗುತ್ತವೆ. ಕೆಳಕ್ಕೆ ಇಳಿದಾಗಲಷ್ಟೆ ಈ ಗಡಿಗಳೆಲ್ಲಾ ಕಾಣುತ್ತವೆ ಎಂದಿದ್ದಾರೆ. ಒಂದು ಕಡೆ ಬಾಹ್ಯಾಕಾಶದಲ್ಲಿ


'ಸಮ್ಮೇಳನ ಅಧ್ಯಕ್ಷರ ಕಿರು ಹೊತ್ತಿಗೆ ಬಿಡುಗಡೆ ಮಾಡುತ್ತಿರುವುದು

ಬದುಕು ನಡೆಸಿ ಬಂದ ಸುನಿತಾ ವಿಲಿಯಮ್ಸ್ ಇದ್ದರೆ, ಮತ್ತೊಂದು ಕಡೆ ಕುಂಭಮೇಳದ ನದಿಯಲ್ಲಿ ಮುಳುಗೆದ್ದ ಸಮಾಜ ಇದೆ. ಇದು ಮಹಿಳಾ ಸಮಾಜದ ಮುಂದೆ ಇರುವ ಸಾಧ್ಯತೆ ಮತ್ತು ಸವಾಲು ಎಂದು ನಾನು ಅರ್ಥ ಮಾಡಿಕೊಂಡಿದ್ದೇನೆ. ನಮ್ಮದು ಕೇವಲ ಅಸಮಾನತೆ ಇರುವ ಸಮಾಜ ಮಾತ್ರವಲ್ಲ ಜಾತಿ ವಿಷಮಾನತೆ ಆಚರಿಸುವ ಸಮಾಜ ಕೂಡ ಆಗಿದೆ ಎಂದರು.


ಸಮ್ಮೇಳನ ಅಧ್ಯಕ್ಷೆ ಡಾ|| ಹೆಚ್.ಎಸ್. ಶ್ರೀಮತಿರವರನ್ನು ಸನ್ಮಾನಿಸುತ್ತಿರುವುದು


ಮರ್ಯಾದೆಗೇಡು ಹತ್ಯೆಗಳಲ್ಲಿ ದಲಿತ, ಅಲ್ಪಸಂಖ್ಯಾತ ಹಿಂದುಳಿದ ಜಾತಿ ಸಮುದಾಯಗಳ ಹೆಣ್ಣು ಮಕ್ಕಳೇ ಹೆಚ್ಚಾಗಿದ್ದಾರೆ. ಜಾತಿ ಧರ್ಮದ ಮಿತಿಯನ್ನು ದಾಟಿ ಲೀವಿಂಗ್ ರಿಲೇಷನ್‌ಶಿಪ್‌ನಲ್ಲಿದ್ದು ಆಗುತ್ತಿರುವ ಕೊಲೆಗಳಲ್ಲಿ ಎಲ್ಲಾ ಜಾತಿ ವರ್ಗದ ಹೆಣ್ಣು ಮಕ್ಕಳು ಇದ್ದಾರೆ ಎನ್ನುವುದನ್ನು ನಾನು ಗಮನಿಸಿದ್ದೇನೆ ಎಂದು ವಿಶ್ಲೇಷಿಸಿದರು. ಹಾಗೆಯೇ ಇತ್ತೀಚಿಗೆ ಅತ್ಯಾಚಾರಗಳಲ್ಲಿ





ಸಮ್ಮೇಳನ ಅಧ್ಯಕ್ಷೆ, ಡಾ|| ಹೆಚ್.ಎಸ್. ಶ್ರೀಮತಿರವರೊಂದಿಗೆ ಚರ್ಚಿಸುತ್ತಿರುವ ಪ್ರಭಾಕರ್

ಸಾಮೂಹಿಕ ಅತ್ಯಾಚಾರಗಳ ಸುದ್ದಿ ಹೆಚ್ಚೆಚ್ಚು ಮಾಧ್ಯಮಗಳಲ್ಲಿ ಕಾಣಿಸುತ್ತಿವೆ. ಇಲ್ಲಿ ಗಮನಿಸಬೇಕಾದ ಸಂಗತಿ ಎಂದರೆ ಜಾತಿ ಕಾರಣಕ್ಕೆ ಪೋಷಕರಿಂದಲೇ ನಡೆಯುತ್ತಿರುವ ಮರ್ಯಾದೆಗೇಡು ಹತ್ಯೆಗಳು, ಬಾಲಕಿಯರಿಂದ ವೃದ್ದೆಯರ ಮೇಲೂ ನಡೆಯುತ್ತಿರುವ ಸಾಮೂಹಿಕ ಅತ್ಯಾಚಾರಗಳ ಸುದ್ದಿ ಹೆಚ್ಚೆಚ್ಚು ಮಾಧ್ಯಮಗಳಲ್ಲಿ ಕಾಣಿಸುತ್ತಿವೆ ಎಂದರೆ ಇಂತಹ ಘಟನೆಗಳನ್ನು ವರದಿ ಮಾಡುವಾಗ ಬಳಕೆ ಆಗುವ ಭಾಷೆ ಎಷ್ಟು ಅಪಾಯಕಾರಿಯಾಗಿರುತ್ತದೆ ಎನ್ನುವುದು, ಒಂಟಿ ಮಹಿಳೆಯ ಮೇಲೆ ಸಾಮೂಹಿಕ ಅತ್ಯಾಚಾರ, ರಾತ್ರಿ ಹನ್ನೊಂದು ಗಂಟೆಗೆ ಒಬ್ಬಳೇ ಹೋಗುತ್ತಿದ್ದ ಯುವತಿ ಮೇಲೆ ಅತ್ಯಾಚಾರ, ಪಾರ್ಕ್‌ನಲ್ಲಿ ವೃದ್ದೆಯ ಮೇಲೆ ಸಾಮೂಹಿಕ ಅತ್ಯಾಚಾರ, ಅಂಗಡಿಗೆ ಚಾಕೋಲೇಟ್ ತರಲು ಹೋಗಿದ್ದ ಬಾಲಕಿಯ ಮೇಲೆ ಅತ್ಯಾಚಾರ. ದೇವಸ್ಥಾನಕ್ಕೆ ಹೂ ತೆಗೆದುಕೊಂಡು ಹೋಗಿದ್ದ ಬಾಲಕಿ ಮೇಲೆ ಅತ್ಯಾಚಾರ. ಹೀಗೆ ಒಂಟಿಯಾಗಿದ್ದ. ರಾತ್ರಿ ವೇಳೆ, ಪಾರ್ಕ್‌ನಲ್ಲಿ ಎನ್ನುವ ಪದಗಳೇ ಮೊದಲು ಬಳಕೆ ಆಗುತ್ತವೆ. ಆರೋಪಿಗಳ ಹೆಸರು ಸುದ್ದಿಯ ಕೊನೆಯಲ್ಲಿ ಇರುತ್ತದೆ.


ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್

ಅಂದರೆ ಇಲ್ಲಿ ಅತ್ಯಾಚಾರದ ಭೀಕರತೆಗಿಂತ ದೌರ್ಜನ್ಯಕ್ಕೆ ಒಳಗಾದವರು ಒಂಟಿಯಾಗಿದ್ದರು. ರಾತ್ರಿ ಹೊತ್ತು ಒಬ್ಬರೇ ಹೋಗುತ್ತಿದ್ದರು. ಪಾರ್ಕ್‌ನಲ್ಲಿ ಒಬ್ಬರೇ ವಾಕ್ ಮಾಡುತ್ತಿದ್ದರು. ಅವರ ಉಡುಪು ಪ್ರಚೋದನಾಕಾರಿಯಾಗಿತ್ತು ಎನ್ನುವ ಭಾಷೆಯ ಮೊದಲಿಗೆ ಬಳಕೆ ಆಗುತ್ತದೆ. ಈ ಮೂಲಕ ಮಹಿಳೆ ಒಬ್ಬೊಬ್ಬರೇ ಓಡಾಡಬಾರದು ಎನ್ನುವ ಗಂಡಾಳಿಕೆಯ ನಿರ್ಬಂಧ ಮತ್ತು ಮನಸ್ಥಿತಿ ಇಲ್ಲಿ ವ್ಯಕ್ತ ಆಗುತ್ತದೆ. ಹಾಗೆಯೇ ಸದನಗಳಲ್ಲಿ ಮಹಿಳಾ ಸದಸ್ಯರ ಬಗ್ಗೆ ಬಳಕೆ ಆಗುವ ಭಾಷೆ, ಈ ಬಗ್ಗೆ ಮಾಧ್ಯಮಗಳಲ್ಲಿ ನಡೆಯುವ ಚರ್ಚೆಯಲ್ಲಿ ಬಳಕೆ ಆಗುವ ಭಾಷೆ, ನ್ಯಾಯಾಲಯಗಳಲ್ಲಿ ಅತ್ಯಾಚಾರ ಪ್ರಕರಣಗಳ ವಿಚಾರಣೆ ವೇಳೆ ಬಳಕೆ ಆಗುವ ಅಸೂಕ್ಷ್ಮ ಮಾತುಗಳನ್ನೆಲ್ಲಾ ನಾನು ಪತ್ರಕರ್ತ ಆಗಿ ಗಮನಿಸಿದ್ದೇನೆ. ನೀವೆಲ್ಲರೂ ಈ ಗಂಡಾಳಿಕೆಯ ಭಾಷೆಗೆ ಪ್ರತೀ ಕ್ಷಣ ಸಾಕ್ಷಿ ಆಗುತ್ತಲೇ ಇರುತ್ತೀರಿ. ಭೂಮಿಯ ಅರ್ಧ ಭಾಗದಷ್ಟಿರುವ ಮಹಿಳೆಯರ ಹೋರಾಟ, ಚಳುವಳಿ, ಪ್ರತಿರೋಧಗಳು ಆಕಾಶದ ಅರ್ಧ ಭಾಗವನ್ನು ದಕ್ಕಿಸಿಕೊಳ್ಳುವ ದಿಕ್ಕಿನಲ್ಲಿ ರಭಸವಾಗಿ ನಡೆಯುತ್ತಲೇ ಇದೆ. ಈ ಚಳುವಳಿಗಳ ಜೊತೆಗೆ ಪುರುಷ ಜಗತ್ತು ಸಹೃದಯತೆಯಿಂದ ಸೇರಿಕೊಂಡಾಗ ''ಆನಂದಮಯ ಈ ಜಗಹೃದಯ'' ಎನ್ನುವ ರಾಷ್ಟ್ರಕವಿ ಕುವೆಂಪು ಅವರ ಸಾಲಿನ ಬದಲಾವಣೆಗಳಿಗೆ ಕಾರಣ ಆಗಬಹುದು. ಮನುಷ್ಯ ಕುಲಕ್ಕೆ ಸಂಕಟ ಬಂದಾಗ ಸಂಕಟದಿಂದ ಪಾರು ಮಾಡುವ ಶಕ್ತಿ ಇರುವುದು ಮಹಿಳಾ ಕುಲಕ್ಕೆ ಮಾತ್ರ ಏಕೆಂದರೆ ಮಹಿಳೆ ಅಧ್ಯಕ್ಷೆ, ಪ್ರಧಾನಿ ಆಗಿರುವ ದೇಶಗಳು ಯುದ್ಧಗಳಿಗಾಗಿ ಹಾತೊರೆಯುವುದಿಲ್ಲ, ಕೋವಿಡ್‌ನಂತಹ ಭೀಕರ ಪರಿಸ್ಥಿತಿಯನ್ನು ಅತ್ಯಂತ ಆರೋಗ್ಯಕರವಾಗಿ, ಯಶಸ್ವಿಯಾಗಿ, ಪರಿಣಾಮಕಾರಿಯಾಗಿ ನಿರ್ವಹಿಸಿದ್ದು ಮಹಿಳೆಯರೇ, ಅಧ್ಯಕ್ಷೆಯರಾಗಿದ್ದ ದೇಶಗಳು ಮಾತ್ರ, ನಮ್ಮ ದೇಶದ ಪ್ರಥಮ ಮಹಿಳೆ ದ್ರೌಪದಿ ಮುರ್ಮು ಅವರನ್ನು ರಾಷ್ಟ್ರಪತಿ ಅಂತಲೇ ಕರೆಯಬೇಕು. ಇದಕ್ಕೆ ಪರ್ಯಾಯ ಪದ ಇಲ್ಲ. ರೈತ ಎನ್ನುವ ಪದ ಇದೆ. ರೈತಿ ಎನ್ನುವ ಪದ ಇಲ್ಲ. ಹೆಣ್ಣಿನ ಕುರಿತಾದ ಸಮಾಜದ ಭಾಷೆಯನ್ನು ಮತ್ತು ಇದನ್ನು ಮೀರಲು ನಡೆಯುತ್ತಿರುವ ಪ್ರಯತ್ನಗಳನ್ನು ಕೇವಲ ಒಬ್ಬ ಪತ್ರಕರ್ತನಾಗಿ ಇಲ್ಲಿ ನಾನು ಉಲ್ಲೇಖಿಸಿದ್ದೇನೆ.

ಗೋಷ್ಠಿಯ ಅಧ್ಯಕ್ಷತೆ ವಹಿಸಿದ ಡಾ|| ಆಶಾದೇವಿ ಅವರು ಮಾತನಾಡುತ್ತಾ ನನ್ನ ನಲವತ್ತು ವರ್ಷಗಳ ಸಾಹಿತ್ಯ ಕೃಷಿಯ ಆತ್ಮವೇ ಹೆಣ್ಣು-ದೇಹ ಆಗಿದೆ ಎಂದರು. ಗೋಷ್ಠಿಯಲ್ಲಿ ಡಾ|| ಸುರೇಶ್ ನಾಗಲಮಡಿಕೆ, ಪ್ರೀತಿ ನಾಗರಾಜ್, ವಸುಧೇಂದ್ರ ಅವರು ವಿಷಯ ಮಂಡನೆ


ಸಮ್ಮೇಳನದ ಗೋಷ್ಠಿಯಲ್ಲಿ ಮಾತನಾಡುತ್ತಿರುವ ಕೆ.ವಿ. ಪ್ರಭಾಕರ್

ಮಾಡಿದರು. ಕರ್ನಾಟಕ ಗಡಿ ಪ್ರದೇಶ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸೋಮಣ್ಣ ಬೇವಿನಮರ ಮಾತನಾಡಿ ಇಂತಹ ಸಮ್ಮೇಳನಗಳು ಮತ್ತು ಕನ್ನಡ ಪರ ಕಾರ್ಯಕ್ರಮಗಳು ಗಡಿಭಾಗಗಳಲ್ಲಿ ನಡೆಯಬೇಕು ಎಂದರು. ಇದೇ ಸಂದರ್ಭದಲ್ಲಿ ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದ ನಾಗಮಣಿ ಎಸ್. ರಾವ್, ಶಶಿಕಲಾ ವೀರಸ್ವಾಮಿ, ಹೇಮಲತಾ ಮಹಿಷಿ, ಡಾ|| ಕೆ.ಆರ್. ಸಂಧ್ಯಾ ರೆಡ್ಡಿ, ಡಾ|| ವಸುಂಧರಾ ಭೂಪತಿ ಮತ್ತು ವನಮಾಲಾ ಸಂಪನ್ನಕುಮಾರ್‌ರವರನ್ನು ಸನ್ಮಾನಿಸಲಾಯಿತು. ಅಧ್ಯಕ್ಷೆ ಡಾ|| ಎಚ್.ಎಲ್. ಪುಷ್ಪರವರು ಪ್ರಸ್ತಾವಿಕವಾಗಿ ಮಾತನಾಡಿದರು. ಕಾರ್ಯದರ್ಶಿ ಭಾರತಿ ಹೆಗಡೆ ನಿರೂಪಿಸಿದರು.


ಸಮ್ಮೇಳನದಲ್ಲಿ ಪುಸ್ತಕಗಳ ಬಿಡುಗಡೆ ಮಾಡುತ್ತಿರುವುದು

# 9 ತಿಂಗಳ ಗರ್ಭಿಣಿ ಅನುಮಾನಾಸ್ಪದ ಸಾವು

7 ☞ ಶವ ನೇಣುಬಿಗಿದ ಸ್ಥಿತಿಯಲ್ಲಿ ಪತ್ತೆಯಾಗಿದ್ದು, ಮೇಲ್ನೋಟಕ್ಕೆ ಆತ್ಮಹತ್ಯೆ ಎನ್ನಲಾಗಿದೆ. ಆದ್ರೆ, ಜಾತಿ ಹಾಗೂ ವರದಕ್ಷಿಣೆ ಕಿರುಕುಳದಿಂದ ಬೇಸತ್ತು ಅನುಪಮ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಆಕೆ ಪೋಷಕರು ಆರೋಪಿಸಿದ್ದಾರೆ.



ನಾಗರಾಜ್ ಮನೆಯವರು ಜಾತಿ ಬೇರೆ, ವರದಕ್ಷಿಣೆ ತಂದಿಲ್ಲವೆಂದು ಕಿರುಕುಳ ನೀಡುತ್ತಿದ್ದರು. ಗಂಡನ ಮನೆಯವರ ಕಿರುಕುಳ, ಹಿಂಸೆಯಿಂದಲೇ ತಮ್ಮ ಮಗಳು ನೇಣು ಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ ಎಂದು ಮೃತ ಅನುಪಮಾ ತಂದೆ ಆರೋಪಿಸಿದ್ದು, ಅನುಪಮಾ ಪತಿ ನಾಗರಾಜ್ ಸೇರಿ 6 ಜನರ ವಿರುದ್ಧ ಸಿಂಧನೂರು ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಿಸಿದ್ದಾರೆ. ಸದ್ಯ ಪೊಲೀಸರು ಪತಿ ನಾಗರಾಜ್‌ನನ್ನು ಪೊಲೀಸರು ವಶಕ್ಕೆ ಪಡೆದುಕೊಂಡು ವಿಚಾರಣೆಗೊಳಪಡಿಸಿದ್ದಾರೆ.

ಒಟ್ಟಿನಲ್ಲಿ ಒಂದು ತುದಿಯ ಜಿಲ್ಲೆಯಿಂದ ಮತ್ತೊಂದು ತುದಿಯ ಜಿಲ್ಲೆಯ ಯುವಕನ ಪ್ರೇಮದ ಬಲೆಗೆ ಬಿದ್ದು ಇದೀಗ ದುರಂತ ಸಾವು ಕಂಡಿದ್ದು ವಿಪರ್ಯಾಸ.

ಸಮಾಜ ಎಷ್ಟೇ ಆಧುನೀಕರಣ ಹೊಂದಿದರೂ ಪ್ರೇಮ ವಿವಾಹದಲ್ಲಿ ಸಮಸ್ಯೆಗಳು ತಪ್ಪಿದ್ದಲ್ಲ, ಒಂದಲ್ಲ ಒಂದು ಅಡ್ಡಿ ಅಡಚಣೆಗಳು ಬರುತ್ತವೆ. ಅವುಗಳನ್ನು ಮೆಟ್ಟಿ ನಿಂತರೆ ಮಾತ್ರ ಸಂಸಾರ ಸುಖಿಯಾಗಿರಲು ಸಾಧ್ಯ. ಒಂದು ವೇಳೆ ಸ್ವಲ್ಪ ಹೆಚ್ಚು ಕಮ್ಮಿಯಾಗಿ ಸಂಸಾರದ ಏರುಪೇರು ಉಂಟಾದರೆ ಈ ರೀತಿಯ ಅನಾಹುತಗಳು ಸಂಭವಿಸುತ್ತವೆ.

ಪ್ರೀತಿಸಿ ಮದುವೆಯಾದ ಮೇಲೆ ಈ ಜಾತಿ ಸಂಬಂಧಗಳು ಅಡ್ಡಿ ಬಂದು ಅದೆಷ್ಟೋ ಸಂಸಾರಗಳು ಹೊಡೆದು ಹೋದ ಉದಾಹರಣೆಗಳು ಇವೆ. ಹಾಗೇ ಕೆಲವೊಂದು ಪ್ರೇಮ ವಿವಾಹ ಹೀಗೆ ಸಾವಿನಲ್ಲೂ ಅಂತ್ಯವಾಗಿವೆ. ಇನ್ನು ಕೆಲ ಪ್ರೇಮ ವಿವಾಹ ಅಮರವಾಗಿ ಉಳಿದಿವೆ.

ಹೇಳುವುದು ಇಷ್ಟೇ ಪ್ರೀತಿಸಿ ಮದುವೆ ಆಗಿ ಸುಖವಾಗಿ ಇರಿ. ಆದ್ರೆ, ಜೋಶ್‌ನಲ್ಲಿ ಮದುವೆಯಾದ ಬಳಿಕ ಜಾತಿ ಬೇರೆ, ನಮ್ಮ ನಿಮ್ಮ ಕಟುಂಬಕ್ಕೆ ಒಗ್ಗುವುದಿಲ್ಲ, ಅದಾಯ್ತು ಇದಾಯ್ತು ಎಂದು ಕಿತ್ತಾಡುವುದು ಬೇಡ. ಹೀಗಾಗಿ ಮದ್ವೆಗೂ ಮುನ್ನ ಯುವಕ-ಯುವತಿ ಒಂದು ಕ್ಷಣ ಯೋಚಿಸಿ ಮುಂದಿನ ಹೆಜ್ಜೆ ಇಡುವುದು ಇಬ್ಬರಿಗೂ ಒಳಿತು. ☯

3 ☞ ರೇಣುಕಾ ತಾಯಿ ಸಿದ್ದಮ್ಮ ಅಡುಗೆ ಮಾಡಬೇಕೆಂದು ಮನೆಗೆ ಬೇಗನೆ ಹೋಗಿದ್ದಾರೆ. ಆಗ ರೇಣುಕಾ ಮತ್ತು ಲಕ್ಕಪ್ಪ ನಡುವೆ ಪ್ರೀತಿ ವಿಚಾರವಾಗಿ ಮಾತಿಗೆ ಮಾತು ಬೆಳೆದಿದೆ. ರೇಣುಕಾ ತಲೆ ಬಗ್ಗಿಸಿ ಗೋಣಿಗೆ ಲಕ್ಕಪ್ಪ ಜೋರಾಗಿ ಗುದ್ದಿದ್ದಾನೆ. ಹೊಲದ ಬದುವಿನಲ್ಲಿ ಇದ್ದ ಬಂಡೆಗೆ ಬೋರಲು ಬಿದ್ದು ರೇಣುಕಾ ಮೂರ್ಛೆ ಹೋಗಿದ್ದಾಳೆ. ಆಗ ಲಕ್ಕಪ್ಪ ಹಗ್ಗದಿಂದ ಉರುಲು ಹಾಕಿ ಸಾಯಿಸಿದ್ದಾನೆ. ಬಳಿಕ ಶವವನ್ನು ಬೈಕ್‌ನಲ್ಲಿ ತೆಗೆದುಕೊಂಡು ಹೋಗಿ ಶೀಲಹಳ್ಳಿ ಬಳಿಯ ಸೇತುವೆ ಮೇಲಿಂದ ಕೃಷ್ಣಾ ನದಿಗೆ ಎಸೆದಿದ್ದಾನೆ. ಅಂದು ರಾತ್ರಿ 12 ಗಂಟೆಗೆ ಮನೆಗೆ ಬಂದ ಲಕ್ಕಪ್ಪ ಹೆಂಡತಿಗೆ ವಿಷಯ ತಿಳಿಸಿ, ಈ ವಿಷಯ ಯಾರಿಗಾದರೂ ಹೇಳಿದರೆ ನಿನಗೂ ಇದೇ ಗತಿ ಎಂದು ಜೀವ ಬೆದರಿಕೆ ಹಾಕಿದ್ದಾನೆ ಎನ್ನಲಾಗಿದೆ.



### ಪ್ರಕರಣ ಬೆಳಕಿಗೆ ಬಂದದ್ದು ಹೇಗೆ?

ಇತ್ತ ಹನುಮಂತನ ಮೇಲೆ ದಾಖಲಾಗಿದ್ದ ಪೋಕ್ಸೋ ಪ್ರಕರಣ ಸಂಬಂಧ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದ್ದ ಸಮಯದಲ್ಲಿ ಯುವತಿಯನ್ನು ಕೋರ್ಟ್‌ಗೆ ಹಾಜರುಪಡಿಸಲು ನ್ಯಾಯಾಧೀಶರು ಸೂಚಿಸಿದ್ದಾರೆ. ಆಗ 2-3 ಸಲ ಸುಳ್ಳು ಹೇಳಿ ಲಕ್ಕಪ್ಪ ಮನೆಯವರು ತಪ್ಪಿಸಿಕೊಂಡಿದ್ದಾರೆ. ನಂತರ ರೇಣುಕಾಳನ್ನು ಹಾಜರುಪಡಿಸಲೇಬೇಕು ಎಂದು ನ್ಯಾಯಾಧೀಶರು ಕಟ್ಟುನಿಟ್ಟಿನ ಸೂಚನೆ ನೀಡಿದಾಗ ಲಕ್ಕಪ್ಪ ತನ್ನ ಮಗಳು ಕಾಣೆಯಾಗಿರುವುದಾಗಿ ತಿಳಿಸಿದ್ದಾರೆ. ಪ್ರಕರಣ ದಾಖಲಿಸುವಂತೆ ಕೋರ್ಟ್ ಆದೇಶಿಸಿದೆ. ಪ್ರಕರಣ ದಾಖಲಿಸಿದ ಪೊಲೀಸರು ಪಾಲಕರನ್ನು ವಿಚಾರಣೆ ನಡೆಸಿದಾಗ ಹತ್ಯೆ ಪ್ರಕರಣ ಬೆಳಕಿಗೆ ಬಂದಿದೆ. ಈಗ ಆರೋಪಿ ತಂದೆ ಲಕ್ಕಪ್ಪನನ್ನು ಬಂಧಿಸಿ ಹೆಚ್ಚಿನ ವಿಚಾರಣೆ ಕೈಗೊಂಡಿದ್ದಾರೆ. ☯

# ರಾಜ್ಯ 'ಡಿಜಿಪಿ'ಯಾದರೆ ಅದೇ ಮಹದಾನಂದ!

2 ☞ ಮೂಡುತ್ತದೆ. ಆಮೇಲೆ ಮತ್ತೊಂದು ವಿಚಾರ. ಶ್ರೀ ದಯಾನಂದರು ಆಡಳಿತದ ವಿಚಾರದಲ್ಲಿ ಯಾವುದೇ ಕಾಂಪ್ರಮೈಸ್‌ಗೆ ಒಪ್ಪುವುದಿಲ್ಲ, ಯಾರದ್ದೇ ಇನ್‌ಫ್ಲುಯೆನ್ಸ್‌ಗೆ ಯಾವುದೇ ಮುಲಾಜಿಗೆ ಬಗ್ಗುವುದಿಲ್ಲ.

ಭ್ರಷ್ಟರನ್ನು ಅಪ್ಪಿತಪ್ಪಿಯೂ ಹತ್ತಿರಕ್ಕೆ ಬಿಟ್ಟುಕೊಳ್ಳುವುದಿಲ್ಲ ನಾವು ಕಂಡ ಮಟ್ಟಿಗೆ ಸಿ ಪಿ ದಯಾನಂದರ ವಿರುದ್ಧ ಒಂದೇ ಒಂದು ಬ್ಲ್ಯಾಕ್ ಮಾರ್ಕ್ ಇಲ್ಲವೇ ಇಲ್ಲ. ಸ್ವಚ್ಛಕೈನವರಾಗಿರುವ ದಯಾನಂದರು ಅಷ್ಟೇ ಸ್ವಚ್ಛವಾಗಿ ಆಡಳಿತ ನಡೆಸುತ್ತಿರುವುದು ನಮ್ಮೆಲ್ಲರ ಪುಣ್ಯವೇ ಸರಿ ಅನ್ನಿಸುತ್ತದೆ.

ಅಂದಹಾಗೆ, ಸಿಪಿ ದಯಾನಂದ ಸಾಹೇಬರು ಇಲಾಖೆಯೊಳಗೆ ಉತ್ತಮ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ಅಧಿಕಾರಿ ಸಿಬ್ಬಂದಿಗಳನ್ನು ಗುರ್ತಿಸಿ ಪ್ರತಿ ವರ್ಷ ಕೊಡ ಮಾಡಲಾಗುವ ಮುಖ್ಯಮಂತ್ರಿಗಳ ಚಿನ್ನದ ಪದಕ, ರಾಷ್ಟ್ರಪತಿಗಳ ಚಿನ್ನದ ಪದಕ, ಗೃಹ ಮಂತ್ರಿಗಳ ಪ್ರಶಸ್ತಿ ಪುನಸ್ಕಾರ... ಕೊಡಿಸಿ ಗೌರವಿಸುವಲ್ಲಿ ಹೆಚ್ಚಿನ ಕಾಳಜಿ ವಹಿಸುತ್ತಾರೆ. ಇಂತಹ ನಿಸ್ಪಹ ವ್ಯಕ್ತಿತ್ವ ಹೊಂದಿರುವ ಶ್ರೀ ದಯಾನಂದರಿಗೆ ಸರ್ಕಾರ ಇನ್ನೂ ಹೆಚ್ಚಿನ ಪ್ರೋತ್ಸಾಹ ನೀಡಿ, ಪ್ರಶಸ್ತಿ ಪುನಸ್ಕಾರಗಳ ನೀಡಿ ಗೌರವಿಸಬೇಕು. ಇದರಿಂದ, ಪ್ರಶಸ್ತಿ ಪಡೆಯುವ ದಯಾನಂದರಿಗಲ್ಲ, ಆ ಪ್ರಶಸ್ತಿಗೇ ಒಂದು ಘನತೆ ಗೌರವ ಸಿಕ್ಕಂತೆ ಆಗುತ್ತದೆ ಎಂದರೆ ಅತಿಶಯೋಕ್ತಿಯಲ್ಲ!

ಶ್ರೀ ದಯಾನಂದರಿಗೆ ಈಗಾಗಲೇ ಮುಖ್ಯಮಂತ್ರಿಗಳ ಪದಕ, ರಾಷ್ಟ್ರಪತಿಗಳ ಪದಕ ದೊರೆತಿದೆ. ಆದರೂ ಅವರಿಗೆ ಮತ್ತೆ ಮತ್ತೆ ಪ್ರಶಸ್ತಿ ಸಿಗಬೇಕು ಎಂಬುದು ಸಾರ್ವಜನಿಕರ ಆಸೆ, ನಮ್ಮ ಆಸೆಯೂ ಹೌದು. ಯಾಕೆಂದರೆ, ಒಂದು ಪ್ರಶಸ್ತಿ ಪುನಸ್ಕಾರ, ಒಂದು ಪ್ರಸಂಶೆ ಬೆಲೆ ಕಟ್ಟಲಾಗದ ಉತ್ತೇಜನ ನೀಡುತ್ತದೆ. ಕೋಟಿ ಕೋಟಿ ರೂಪಾಯಿಗಿಂತ ಶ್ರೇಷ್ಠ!

ನೀವೆಲ್ಲ ಗಮನಿಸುತ್ತಿರಬಹುದು, ಇಂತಹ ಅತ್ಯುತ್ತಮ ಆಡಳಿತ ನೀಡುವ ಅಧಿಕಾರಿ ಪೊಲೀಸ್ ಇಲಾಖೆಯಲ್ಲಿ ಮತ್ತೊಬ್ಬರಿದ್ದಾರ? ನೋ ಚಾನ್ಸ್, ಹಗಲು ರಾತ್ರಿಗಳ ಪರಿವೇ ಇಲ್ಲದೆ, ತನ್ನ ಅಂಡರ್‌ನಲ್ಲಿ ಬರುವ ಪ್ರತಿಯೊಂದು ವಿಭಾಗಗಳನ್ನೂ ಗಮನಿಸುತ್ತ, ಅವರಿಂದ ಉತ್ತಮ ಕರ್ತವ್ಯ ಮಾಡಿಸುತ್ತ... ತಪ್ಪೆಸಗಿದ ಅಧಿಕಾರಿಗಳನ್ನು ಮುಲಾಜಿಲ್ಲದೆ ಸಸ್ಪೆಂಡ್ ಮಾಡಿ ಶಿಕ್ಷಿಸುವ ದಕ್ಷ ಪೊಲೀಸ್ ಕಮಿಷನರ್ ಶ್ರೀ ದಯಾನಂದರು ಅದ್ಯಾವ ಘಳಿಗೆಯಲ್ಲಿ ವಿಶ್ರಾಂತಿ ಪಡೆಯುತ್ತಾರೋ... ಭಗವಂತನೊಬ್ಬನಿಗೆ ಮಾತ್ರ ಗೊತ್ತು! ಇಂತಹ ಅಧಿಕಾರಿ ಕೋಟಿಗೊಬ್ಬರು ಮಾತ್ರವಲ್ಲ, ಬೆಂಗಳೂರಿಗರ ಹಾಗೂ ರಾಜ್ಯದ ಜನತೆಯ ಸುಕೃತ ಫಲ ಎಂದರೆ ತಪ್ಪೇನಿಲ್ಲ!

ಇಂತಹ ಪೊಲೀಸ್ ಅಧಿಕಾರಿಯನ್ನು ಸರ್ಕಾರ ಇನ್ನೊಂದು ಅವಧಿಗೆ ಪೊಲೀಸ್ ಕಮಿಷನರ್ ಆಗಿ ಮುಂದುವರೆಸಲು ಆಲೋಚಿಸುತ್ತಿರುವುದರಲ್ಲಿ ಯಾವುದೇ ಆಶ್ಚರ್ಯವಿಲ್ಲ ಎಂಬುದೇ ನಮ್ಮ ಭಾವನೆ. ಶ್ರೀಯುತರು ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯದ ಪೊಲೀಸ್ ಮಹಾ ನಿರ್ದೇಶಕರಾಗಿ ಇಡೀ ರಾಜ್ಯಕ್ಕೆ ಸೇವೆ ಸಲ್ಲಿಸಬೇಕು ಎಂಬ ಅಭಿಲಾಷೆ 'ಪೊಲೀಸ್ ನ್ಯೂಸ್' ವಾರ ಪತ್ರಿಕೆಯದ್ದು. ಎನಿ ಹೌ, ಹ್ಯಾಟ್ಸ್ ಆಫ್ ಯು ಸರ್... ☯

# ರಕ್ತದೋಕುಳಿ ಹರಿಸಿದ ಕಿರಾತಕರು!

5 ☞ ಪ್ರಯತ್ನಿಸಿದ್ದಾಗ ಅನಿಲ ಮಾಂಗ ಚಾಕುವಿನಿಂದ ಇರಿದು ಆತನ ಸ್ನೇಹಿತನಿಗೆ ಭಾರಿ ಗಾಯಪಡಿಸಿ ಪರಾರಿಯಾಗಿದ್ದು, ನಂತರ ಈ ವಿಷಯ ಊರಿನ ತುಂಬೆಲ್ಲಾ ಹರಡಿದ್ದು ರಕ್ತದ ಮಡುವಿನಲ್ಲಿ ಒದ್ದಾಡುತ್ತಿದ್ದ ಮಂಜುನಾಥ ಹಾಗೂ ಯಲ್ಲಾಲಿಂಗನನ್ನು ಮುಧೋಳದ ಸರ್ಕಾರಿ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆ ಮಂಜುನಾಥ ಮೃತ ಪಟ್ಟಿರುತ್ತಾನೆ. ನಂತರ ಮಂಜುನಾಥನ ಅಣ್ಣನಾದ ಬಸವರಾಜ ಶೀಲವಂತ ಹಾಗೂ ಕುಟುಂಬದವರಿಗೆ ವಿಷಯ ತಿಳಿಸಿದಾಗ ನೇರವಾಗಿ ಆಸ್ಪತ್ರೆಗೆ ಬಂದು ತನ್ನ ಸಹೋದರನ ಶವವನ್ನು ನೋಡಿ ನೇರವಾಗಿ ಮುಧೋಳ ಪೊಲೀಸ್ ಠಾಣೆಗೆ ತೆರಳಿ ಮೇಲೆ ನಡೆದ ಘಟನೆ ಬಗ್ಗೆ ವಿವರಿಸಿದಾಗ ಕರ್ತವ್ಯದಲ್ಲಿದ್ದ ಮುಧೋಳ ಠಾಣಾ ಪಿಎಸ್‌ಐ ಅಜಿತ್‌ಕುಮಾರ್ ಹೊಸಮನಿ ಪ್ರಕರಣ ದಾಖಲಿಸಿಕೊಂಡರು.



ಮೃತ ಮಂಜುನಾಥನ ಕುಟುಂಬಸ್ಥರ ರೋಧನ

ತಮ್ಮ ಕ್ರೈಂ ನಂ.110/2025 ಬಿಎನ್‌ಎಸ್ 2023(ವಿ/5189) (1) 191 (2) 191 (3) 115 (2) 126 (1) 118 (2) 103 (1)109,(1) 352, 351(2)190 ನೆದರಡಿಯಲ್ಲಿ ಪ್ರಕರಣ ದಾಖಲಿಸಿಕೊಂಡು ಘಟನಾ ಸ್ಥಳಕ್ಕೆ ತಮ್ಮ ಸಿಬ್ಬಂದಿಯೊಂದಿಗೆ ಬಂದು ಆಸ್ಪತ್ರೆಯಲ್ಲಿದ್ದ ಮಂಜುನಾಥನ ಶವ ವೀಕ್ಷಿಸಿ ನಂತರ ತಮ್ಮ ಹಿರಿಯ ಅಧಿಕಾರಿಗಳಾದ ಮುಧೋಳ ಠಾಣಾ ಸಿಪಿಐ ಎಂ.ಎನ್. ಶಿರಹಟ್ಟಿ ಜಮಖಂಡಿ ಡಿವೈಎಸ್ಪಿ ಎಸ್. ರೋಶನ್ ಜಮೀರ್, ಬಾಗಲಕೋಟ ಎಸ್ಪಿ ಅಮರನಾಥ ರೆಡ್ಡಿಯವರಿಗೆ ಸುದ್ದಿ ರವಾನಿಸಿದರು. ಸುದ್ದಿ ತಿಳಿದ ಹಿರಿಯ ಅಧಿಕಾರಿಗಳು ಘಟನಾ ಸ್ಥಳಕ್ಕೆ ಬಂದು ಸ್ಥಳ ಮತ್ತು ಆಸ್ಪತ್ರೆಯಲ್ಲಿದ್ದ ಮಂಜುನಾಥನ ಶವ ಪಂಚನಾಮೆ ನಡೆಸಿ ಕುಟುಂಬಸ್ಥರಿಗೆ ಶವವನ್ನು ಹಸ್ತಾಂತರಿಸಿದರು. ಘಟನೆಗೆ ಸಂಬಂಧಿಸಿದ ಆರೋಪಿಗಳನ್ನು ಬಂಧಿಸುವಂತೆ ಮಾರ್ಗದರ್ಶನ ನೀಡಿದರು. ನಂತರ ಘಟನೆ ನಡೆದ ಒಂದೇ ದಿನದಲ್ಲಿ ಸದರಿ ಆರೋಪಿಗಳಾದ ಪ್ರವೀಣ ಶಂಕರ ಮಾಂಗ, ಅನಿಲ ನಾಗಪ್ಪ ಮಾಂಗ, ಆಕಾಶ ಧರೆಪ್ಪ ಮಾಂಗ, ಭೀಮಶಿ ಮಾನಿಂಗ ಮಾಂಗ, ಪ್ರದೀಪ ಉಮೇಶ ಪೂಜಾರಿ, ಪ್ರಜ್ವಲ ಅಶೋಕ ಬಾವಿಮನಿ, ಕಾರ್ತಿಕ ಮಹಾನಂದಾ ಮಾಂಗ, ಈಶ್ವರ ಮಹೇಶ ಯಂಕಂಚಿ, ಮುತ್ತು ಸುಬಾಸ ತಳಗೇರಿ, ವಿಕಾಶ ಮಾಂಗರನ್ನು ವಶಕ್ಕೆ ಪಡೆದು ವಿಚಾರಿಸಿದಾಗ ಆರೋಪಿತರೆಲ್ಲರೂ ಮಾಡಿದ ಕೃತ್ಯವನ್ನು ಒಪ್ಪಿಕೊಂಡಿದ್ದು ನಂತರ ಆರೋಪಿಗಳನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿ ಹೆಚ್ಚಿನ ತನಿಖೆ ಕೈಗೊಂಡಿದ್ದಾರೆ. ☯





ಮಂಜುನಾಥನ ಭಾವಚಿತ್ರಗಳು



ಸುರೇಶ್

## ಬದುಕಿದ್ದ ಹೆಂಡ್ತಿ ಸಾಯಿಸಿದ ಆರೋಪ ಗಂಡನ ತಲೆಗೆ ಕಟ್ಟಿದ ಪೊಲೀಸರು

# ಹೆಂಡ್ತಿ ಕೊಂದ ಆರೋಪದಿಂದ ಮುಕ್ತಿ!

**ಪೊಲೀಸರು ಮಾಡಿದ ಎಡವಟ್ಟಿಗೆ ಎರಡು ವರ್ಷ ಜೈಲ್ ಶಿಕ್ಷೆ ಅನುಭವಿಸಿದ್ದಲ್ಲದೆ, ಹೆಂಡ್ತಿ ಕೊಂದ ಆರೋಪವನ್ನು ತಲೆಗೆ ಕಟ್ಟಿಕೊಂಡು ಸ್ಟೇಷನ್, ಕೋರ್ಟ್ ಎಂದು ಅಲೆಯುತ್ತಿದ್ದ ಕೊಡಗಿನ ಕುಶಾಲನಗರ ಬಸವನಹಳ್ಳಿ ಬಳಿಯ ದಿಡ್ಡಳ್ಳಿ ನಿವಾಸಿ ಸುರೇಶ್ ನನ್ನು ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಗುರುರಾಜ ಸೋಮಕ್ಕಳವರ್ ಪ್ರಕರಣದಿಂದ ಮುಕ್ತಗೊಳಿಸಿ ಗೌರವಯುತವಾಗಿ ಬಿಡುಗಡೆಗೊಳಿಸಿದ್ದಾರೆ. ಆ ಮೂಲಕ ಅಮಾಯಕನ ಮೇಲೆ ಕೇಸ್ ದಾಖಲಿಸಿ ಆತನನ್ನು ಶಿಕ್ಷೆ ಅನುಭವಿಸುವಂತೆ ಮಾಡಿದ ಪೊಲೀಸರಿಗೂ ಕ್ಲಾಸ್ ತೆಗೆದುಕೊಂಡಿದ್ದಾರೆ. ಅಲ್ಲದೆ ಅಸ್ಥಿಪಂಜರ ದೊರೆತ ಪ್ರಕರಣದ ತನಿಖೆ ನಡೆಸಿ ನ್ಯಾಯಾಲಯಕ್ಕೆ ವರದಿ ಸಲ್ಲಿಸುವಂತೆ ಮೈಸೂರು ಎಸ್ಪಿಗೆ ನಿರ್ದೇಶನ ನೀಡಿದ್ದಾರೆ.**



ಸುರೇಶ್ ಹಾಗೂ ಮಲ್ಲಿಗೆ

**ಮೈಸೂರು**

✍ ಬಿ.ಎಂ. ಲವಕುಮಾರ್

ಈಗಾಗಲೇ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಪೊಲೀಸ್ ಠಾಣೆಯಲ್ಲಿ ಸುರೇಶ್‌ನ ಮೇಲೆ ದಾಖಲಾಗಿರುವ ಪ್ರಕರಣವನ್ನು ರದ್ದು ಮಾಡಿ, ಪ್ರಕರಣಕ್ಕೆ ಸಂಬಂಧಿಸಿದ ದಾಖಲಾತಿಗಳಲ್ಲಿ ಉಲ್ಲೇಖವಾಗಿರುವ ಸುರೇಶ್‌ನ ಹೆಸರನ್ನು ತೆಗೆದು ಹಾಕುವಂತೆ ನಿರ್ದೇಶನ ನೀಡಲಾಗಿದೆ. ಪೊಲೀಸರು ನಡೆಸಿದ ತನಿಖೆಯಲ್ಲಿ ದೋಷವಾಗಿರುವ ಕಾರಣ ಅಮಾಯಕ 2 ವರ್ಷ ಜೈಲ್ ಶಿಕ್ಷೆ ಅನುಭವಿಸಿ, ಅಪಾದಿತನಾಗಿ ಬಿಂಬಿತನಾಗಿ ನ್ಯಾಯಾಲಯಕ್ಕೆ ಅಲೆದಾಡಿದ ಹಿನ್ನಲೆಯಲ್ಲಿ ಒಂದು ಲಕ್ಷ ಪರಿಹಾರ ನೀಡುವಂತೆ ರಾಜ್ಯ ಗೃಹ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ನಿರ್ದೇಶನ ನೀಡಿದ್ದಾರೆ. ಈ ಕುತೂಲಹದ ಪ್ರಕರಣ ತೀರ್ಪು ಹೊರ ಬರುವ ದಿನ ಹಲವರು ಕುತೂಹಲದಿಂದ ನ್ಯಾಯಾಲಯದತ್ತ ಮುಖ ಮಾಡಿದ್ದರು. ಸದ್ಯ ತೀರ್ಪು ಬಂದಿದೆ. ಕೊನೆಗೂ ಅಮಾಯಕ ದೋಷ ಮುಕ್ತಗೊಂಡಿದ್ದಾನೆ.

ಇಷ್ಟಕ್ಕೂ ಆಗಿದ್ದೇನು ಎಂಬುದನ್ನು ನೋಡಿದ್ದೇ ಆದರೆ ಇದೊಂದು ಅಪರೂಪದ ಪ್ರಕರಣವಾಗಿತ್ತು. ಕುಶಾಲನಗರದ ಬಸವನಹಳ್ಳಿ ಬಳಿಯ ದಿಡ್ಡಳ್ಳಿ ಸುರೇಶ್ ಸುಮಾರು 23 ವರ್ಷಗಳ ಹಿಂದೆ ಮಲ್ಲಿಗೆ ಎಂಬಾಕೆಯನ್ನು ಮದುವೆಯಾಗಿದ್ದನು. ಈ ದಂಪತಿಗೆ ಇಬ್ಬರು ಮಕ್ಕಳಿದ್ದರು. ಆದರೆ 2020ರಲ್ಲಿ ಗಂಡ ಸುರೇಶ ಮತ್ತು ಮಕ್ಕಳಿಗೆ ಜೂಟ್ ಹೇಳಿ ಪ್ರಿಯಕರ ಗಣೇಶನ ಜೊತೆ ಹೆಂಡತಿ ಮಲ್ಲಿಗೆ ಎಸ್ಕೇಪ್ ಆಗಿಬಿಟ್ಟಳು. ಇದು ಸುರೇಶನಿಗೂ ಗೊತ್ತಾಗಿತ್ತು. ಆದರೆ ಅವರಿಬ್ಬರು ಇವರ ಕಣ್ಣಿಗೆ ಬಿದ್ದಿರಲಿಲ್ಲ. ಆಕೆಯ ಫೋನ್ ಕೂಡ ಅಕ್ಟೀವ್‌ನಲ್ಲಿತ್ತು. ಹೀಗಾಗಿ ಸುರೇಶ ಆ ನಂಬರಿಗೆ ಕಾಲ್ ಮಾಡಿ ಜಗಳವಾಡುತ್ತಿದ್ದನು.

ಮಕ್ಕಳು ಅಜ್ಜಿಮನೆಯಲ್ಲಿ ಬಿಟ್ಟಿದ್ದನು. ಮಲ್ಲಿಗೆ ಗಂಡ ಮತ್ತು ಮಕ್ಕಳನ್ನು ಬಿಟ್ಟು ದಕ್ಷಿಣ ಕೊಡಗಿನ ಕಾಫಿ ತೋಟದಲ್ಲಿ ಪ್ರಿಯಕರನ ಜತೆ ಬದುಕು ಕಟ್ಟಿಕೊಂಡಿದ್ದಳು. ಆಕೆ ದೂರ ಹೋದ ಬಳಿಕ ಸುರೇಶ ಮತ್ತು ಮಲ್ಲಿಗೆಗೆ ಜಗಳವಾಗಿತ್ತು. ಹೀಗಾಗಿ ಅವಳ ವಿರುದ್ಧ 2020 ನವೆಂಬರ್ 13ರಂದು ಕುಶಾಲನಗರ ಪೊಲೀಸ್ ಠಾಣೆಗೆ ತೆರಳಿ ಸುರೇಶ್ ಹೆಂಡತಿ ಮಲ್ಲಿಗೆ ನಾಪತ್ತೆಯಾಗಿರುವ ಕುರಿತಂತೆ ದೂರು ನೀಡಿದ್ದನು. ಈ ನಡುವೆ 2020ರ ನವೆಂಬರ್ 12ರಂದು ಮೈಸೂರು ಜಿಲ್ಲೆಯ ಬೆಟ್ಟದಪುರ ಪೊಲೀಸ್ ಠಾಣಾ ವ್ಯಾಪ್ತಿಯ ಶಾನುಭೋಗನಹಳ್ಳಿಯ ಪೊದೆಯೊಂದರಲ್ಲಿ ಸುಮಾರು 28ರಿಂದ 30 ವರ್ಷ ವಯಸ್ಸಿನ ಮಹಿಳೆಯ ಅಸ್ಥಿಪಂಜರವೊಂದು ಪತ್ತೆಯಾಗಿತ್ತು. ಅದರ ಮಹಜರು ನಡೆಸಿದ ಪೊಲೀಸರು ಮೊದಲಿಗೆ ಅಸ್ವಾಭಾವಿಕ ಸಾವು ಪ್ರಕರಣ ದಾಖಲಿಸಿಕೊಂಡಿದ್ದರು. ಆ ನಂತರ ಮರಣೋತ್ತರ ಪರೀಕ್ಷೆಯ ಪ್ರಾಥಮಿಕ ತನಿಖೆಯ ವರದಿ ಬಂದಾಗ ಆ ಮಹಿಳೆ ತಲೆ ಮೇಲೆ ಬಲವಾಗಿ ಆಯುಧದಿಂದ ಹೊಡೆದು ಕೊಲೆ ಮಾಡಲಾಗಿದೆ ಎಂಬುದು ಬೆಳಕಿಗೆ ಬಂದಿತ್ತು.

ಅಸ್ಥಿ ಪಂಜರ ಪ್ರಕರಣ ತನಿಖೆಯ ತನಿಖಾಧಿಕಾರಿಯನ್ನಾಗಿ ಆಗ ಪಿರಿಯಾಪಟ್ಟಣ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದ ಬಿ.ಜಿ. ಪ್ರಕಾಶ್ ಅವರು ವಹಿಸಿಕೊಂಡಿದ್ದರು. ಇವರೊಂದಿಗೆ ಎಎಸ್‌ಐ ಸೋಮಶೇಖರ, ಸಿಬ್ಬಂದಿಗಳಾದ ಜಿತೇಂದ್ರ ಕುಮಾರ್, ಎಂ.ಪ್ರಕಾಶ್, ಮಹೇಶ್‌ಕುಮಾರ್ ತಂಡದಲ್ಲಿದ್ದು ತನಿಖೆ ಆರಂಭಿಸಿದ್ದರು. ಈ ವೇಳೆ ಪೊಲೀಸ್ ಠಾಣೆಗಳಲ್ಲಿ ಯಾವುದಾದರೂ ಮಹಿಳೆ ನಾಪತ್ತೆಯಾಗಿರುವ ಪ್ರಕರಣ ದಾಖಲಾಗಿದೆಯಾ ಎಂದು ಪರಿಶೀಲನೆ ನಡೆಸಿದಾಗ ಕುಶಾಲನಗರ ಪೊಲೀಸ್ ಠಾಣೆಯಲ್ಲಿ 2020ರ ನವೆಂಬರ್ 12ರಂದು ಸುರೇಶ ಎಂಬಾತ ಪತ್ನಿ ಮಲ್ಲಿಗೆ ನಾಪತ್ತೆಯಾಗಿರುವ ಬಗ್ಗೆ ದೂರು ನೀಡಿರುವುದು ಬೆಳಕಿಗೆ ಬಂದಿತ್ತು.



ಪೊಲೀಸರೊಂದಿಗೆ ಮಲ್ಲಿಗೆ

ಕೂಡಲೇ ತನಿಖಾಧಿಕಾರಿಯಾಗಿದ್ದ ಬಿ.ಜಿ. ಪ್ರಕಾಶ್ ಅವರು ಸಿಬ್ಬಂದಿಯನ್ನು ಕಳುಹಿಸಿ ಕುಶಾಲನಗರ ಬಳಿಯ ದಿಡ್ಡಳ್ಳಿಯ ಸುರೇಶನನ್ನು ಠಾಣೆಗೆ ಕರೆದುಕೊಂಡು ಬಂದಿದ್ದರು. ಆ ನಂತರ ಪೊಲೀಸರು ಅಸ್ಥಿಪಂಜರದ ಸುತ್ತ ಕಥೆಯೊಂದನ್ನು ಸುರೇಶ ಮುಂದಿಟ್ಟುಕೊಂಡು ಹೆಣೆದಿದ್ದರು. ಸುರೇಶ ನಾನು ಕೊಲೆ ಮಾಡಿಲ್ಲ ಎಂದರೂ ನೀನೇ ಕೊಲೆ ಮಾಡಿದ್ದೆಂದು ಒಪ್ಪಿಕೊಳ್ಳುವಂತೆ ಲಾಠಿ ಮೂಲಕವೇ ಹೇಳಿದ್ದಲ್ಲದೆ, ಆತನೇ ಪತ್ನಿಯನ್ನು ಕೊಲೆ ಮಾಡಿ ಪೊದೆಯಲ್ಲಿ ಎಸೆದಿದ್ದಾಗಿ ಪ್ರಕರಣ ದಾಖಲಿಸಿಕೊಂಡರು. ಅದಕ್ಕೆ ಬೇಕಾದ ದೂರನ್ನು ಮಲ್ಲಿಗೆಯ ಮಗ ಅಪ್ರಾಪ್ತ ಬಾಲಕನಿಂದ ಮಲ್ಲಿಗೆ ತಾಯಿ ಗೌರಿಯ ಹೆಸರಿನಲ್ಲಿ ಬರೆಸಿದರಲ್ಲದೆ, ಅದಕ್ಕೆ ಹೆಬ್ಬೆಟ್ಟು ಒತ್ತಿಸಿಕೊಂಡರು. ದೂರಿನಲ್ಲಿ ಸುರೇಶ ಕುಡಿತದ ಚಟ ಹೊಂದಿದ್ದ. ಹೆಂಡತಿ ಮಲ್ಲಿಗೆಗೆ ಆಗಾಗ್ಗೆ ಹೊಡೆದು ದೌರ್ಜನ್ಯ ಎಸಗುತ್ತಿದ್ದುದಲ್ಲದೆ, ವರದಕ್ಷಿಣೆ ತರುವಂತೆ ಒತ್ತಾಯ ಮಾಡುತ್ತಿದ್ದ ಎಂದೆಲ್ಲ ದೂರು ಬರೆಯಿಸಿ ಸಾಕ್ಷಿಗಳ ಸಹಿಯಾಗಿ ಹಲವರಿಂದ ಹೆಬ್ಬೆಟ್ಟು ಒತ್ತಿಸಿಕೊಂಡಿದ್ದರು.

ಸುರೇಶನಿಂದ ಪತ್ನಿಯನ್ನು ಹೇಗೆ ಕೊಂದೆ ಮತ್ತು ಹೆಣವನ್ನು ತಂದು ಪೊದೆಯಲ್ಲಿ ಬಿಸಾಡಿದ್ದರ ಬಗ್ಗೆಯೂ ತಪ್ಪೊಪ್ಪಿಗೆಯನ್ನು ಬರೆಯಿಸಿಕೊಳ್ಳಲಾಗಿತ್ತು. ಜತೆಗೆ ಅಸ್ಥಿಪಂಜರದ ಬಳಿ ಸಿಕ್ಕ ಬಟ್ಟೆಯನ್ನು ಮಲ್ಲಿಗೆಯ ತಾಯಿ ಗೌರಿ ಗುರುತಿಸುವುದರ ಬಗ್ಗೆ ಎಲ್ಲವನ್ನೂ ಸೇರಿಸಿ ಸಮಗ್ರ ಸಾಕ್ಷ್ಯಾಧಾರದ ವರದಿಯನ್ನು ನ್ಯಾಯಾಲಯಕ್ಕೆ ತನಿಖಾಧಿಕಾರಿ ಬಿ.ಜಿ. ಪ್ರಕಾಶ್ ಸಲ್ಲಿಸಿದ್ದರು. ಹೀಗಾಗಿ ಅವತ್ತು ನ್ಯಾಯಾಲಯಕ್ಕೆ ಬೆಟ್ಟದಪುರ ಬಳಿಯಲ್ಲಿ ಸಿಕ್ಕ ಮಹಿಳೆಯ ಅಸ್ಥಿಪಂಜರ ಸುರೇಶನ ಹೆಂಡತಿ ಮಲ್ಲಿಗೆಯದು ಮತ್ತು ಆಕೆಯನ್ನು ಕೊಲೆ ಮಾಡಿದ್ದು ಗಂಡ ಸುರೇಶ ಎಂಬುದು ಪೊಲೀಸರ ತನಿಖಾ ವರದಿ ಹೇಳಿದ್ದರಿಂದ ಸುರೇಶ ಜೈಲ್ ಸೇರುವಂತಾಗಿತ್ತು.



ವಕೀಲ ಪಾಂಡು ಪೂಜಾರಿ

ಇದೆಲ್ಲದರ ನಡುವೆ ಕೊಡಗಿನ ಕೆಲವು ಸಾಮಾಜಿಕ ಹೋರಾಟಗಳಲ್ಲಿ ಭಾಗಿಯಾಗುತ್ತಿದ್ದ ಮೈಸೂರಿನ ವಕೀಲ ಸಾಮಾಜಿಕ ಹೋರಾಟಗಾರ ಪಾಂಡು ಪೂಜಾರಿಯ ಅವರನ್ನು ಸುರೇಶನ ತಂದೆ ಗಾಂಧಿ ಭೇಟಿ ಮಾಡಿ ಸೊಸೆ ಯಾರೊಂದಿಗೋ ಹೋಗಿದ್ದಾಳೆ. ಆದ್ದರಿಂದ ನನ್ನ ಮಗನನ್ನು ರಕ್ಷಿಸಿ ಅಂಗಲಾಚಿಸಿದ್ದರು. ಪ್ರಕರಣದ ಇಂಚಿಂಚೂ ಮಾಹಿತಿ ಪಡೆದ ವಕೀಲ ಪಾಂಡು ಪೂಜಾರಿ ಅವರು ಪ್ರಕರಣ ಮಾಹಿತಿಯನ್ನು ಕಲೆ ಹಾಕಿದ್ದರು. ಇನ್ನು ಸುರೇಶನ ಪೂರ್ವಾಪರದ ಬಗ್ಗೆ ಮಾಹಿತಿ ಕಲೆ ಹಾಕಿದ ವೇಳೆಯೂ ಆತ ಅಮಾಯಕ ಎಂಬುದು ಗೊತ್ತಾಗಿತ್ತು. ಹೀಗಾಗಿ ತಮ್ಮ ಸ್ನೇಹಿತ ಹೈಕೋರ್ಟ್ ವಕೀಲರ ಮೂಲಕ ಎರಡು ವರ್ಷದ ಬಳಿಕ ಸುರೇಶನಿಗೆ ಜಾಮೀನು ಕೊಡಿಸಿದ್ದರು.

ಈ ನಡುವೆ ಏಪ್ರಿಲ್ 1 ಮಂಗಳವಾರ ಸಂಜೆ 4.30ರ ಸಮಯ ಮಡಿಕೇರಿ ನಗರದ ಹಳೇ ಬಸ್ ನಿಲ್ದಾಣ ಬಳಿಯ ಹೋಟೆಲ್ ವೊಂದರಲ್ಲಿ ಮಲ್ಲಿಗೆ ತನ್ನ ಪ್ರಿಯಕರ ಗಣೇಶ್ ಪತ್ತೆಯಾಗಿದ್ದರು. ವಿಷಯ ತಿಳಿದ ವಕೀಲ ಪಾಂಡು ಪೂಜಾರಿ ಅವರು ಮೈಸೂರಿನ ಹಿರಿಯ ವಕೀಲ ಬಿ.ಜಿ.ರಾಘವೇಂದ್ರ, ಅವರನ್ನು ಸಂಪರ್ಕಿಸಿ ಮಾಹಿತಿ ನೀಡಿದ್ದು, ಅವರು ಮೈಸೂರಿನ 5ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿ ಕೊಲೆಯಾಗಿದ್ದಾಳೆ ಎನ್ನಲಾದ ಮಹಿಳೆ ಜೀವಂತವಾಗಿ ಸಿಕ್ಕಿದ್ದಾಳೆ ಎಂದು ತಿಳಿಸಿದ್ದಲ್ಲದೆ ಏನೆಲ್ಲ ನಡೆಯಿತು ಎನ್ನುವ ವಿದ್ಯಮಾನವನ್ನು ವಿವರಿಸಿದ್ದಾರೆ. ಇದನ್ನು ಪರಿಗಣಿಸಿದ ನ್ಯಾಯಾಧೀಶರು ಪತ್ತೆಯಾಗಿರುವ ಮಲ್ಲಿಗೆಯನ್ನು ತಮ್ಮ ಮುಂದೆ ಹಾಜರುಪಡಿಸುವಂತೆ ಬೆಟ್ಟದಪುರ ಪೊಲೀಸರಿಗೆ ಆದೇಶ ಮಾಡಿದ್ದರು. ಅದರಂತೆ ಪೊಲೀಸರು ಮಲ್ಲಿಗೆಯನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದರು. ಈಗ ಮಲ್ಲಿಗೆ ಜೈಲಿನಲ್ಲಿದ್ದಾಳೆ. ಕೊನೆಗೂ ಅಮಾಯಕ ಸುರೇಶನಿಗೆ ಕೊಲೆ ಆರೋಪದಿಂದ ಮುಕ್ತಿ ಸಿಕ್ಕಿದೆ. ಇತ್ತ ಮಲ್ಲಿಗೆ ತಾನು ಮಾಡಿದ ತಪ್ಪಿಗೆ ಗಂಡ, ಮಕ್ಕಳು, ಪ್ರಿಯಕರ ಯಾರೂ ಇಲ್ಲದೆ ಜೈಲಿನಲ್ಲಿ ಮುದ್ದೆ ಮುರಿಯುವಂತಾಗಿದೆ. ☯

## ಇಷ್ಟಕ್ಕೂ ಆ ಅಸ್ಥಿಪಂಜರ ಯಾರದ್ದು?

ಇಡೀ ಪ್ರಕರಣವನ್ನು ನೋಡಿದರೆ ಪೊಲೀಸರು ಬೆಟ್ಟದಪುರ ಬಳಿ ಸಿಕ್ಕ ಮಹಿಳಾ ಅಸ್ಥಿಪಂಜರ ಯಾರದ್ದು? ಅದು ಕೊಲೆಯೇ ಆಗಿದ್ದರೆ ಯಾರು ಮಾಡಿದ್ದಾರೆ? ಹೀಗೆ ಹತ್ತಾರು ದೃಷ್ಟಿಕೋನಗಳಿಂದ ತನಿಖೆ ಮಾಡಿ ಅಸ್ಥಿಪಂಜರದ ಹಿಂದಿನ ರಹಸ್ಯವನ್ನು ಬಯಲಿಗೆಳೆಯಬೇಕಾಗಿತ್ತು. ಆದರೆ ಸುರೇಶ್ ಪತ್ನಿ ನಾಪತ್ತೆ ಕೇಸ್ ಮುಂದಿಟ್ಟುಕೊಂಡು ಆಕೆಯದ್ದೇ ಅಸ್ಥಿಪಂಜರವೆಂದು ಅಮಾಯಕನಿಗೆ ಕೊಲೆ ಪಟ್ಟ ಕಟ್ಟಿ, ನಾಪತ್ತೆಯಾದ ಸುರೇಶ್‌ನ ಹೆಂಡತಿಯನ್ನು ಹುಡುಕದೆ, ಇತ್ತ ಪತ್ತೆಯಾದ ಅಸ್ಥಿಪಂಜರದ ತನಿಖೆಯನ್ನೂ ನಡೆಸದೆ ಒಂದೇ ಕಲ್ಲಿಗೆ ಎರಡು ಹಕ್ಕಿ ಹೊಡೆದು ಅಮಾಯಕನ ಬದುಕನ್ನು ಪೊಲೀಸರು ಮುಗಿಸಿದ್ದರು.

ಹಾಗಾಗಿ ಅಂದಿನ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ. ಪ್ರಕಾಶ್, ಅಂದಿನ ಪ್ರೊಬೆಷನರಿ ಐಪಿಎಸ್ ಅಧಿಕಾರಿ ಜಿತೇಂದ್ರಕುಮಾರ್, ಎಸ್‌ಐ ಮಹೇಶ್ ಕುಮಾರ್, ಸಿಬ್ಬಂದಿ ಪ್ರಕಾಶ್ ಎಂ ಎತ್ತಿನಮನಿ ವಿರುದ್ಧ ಇಲಾಖಾ ತನಿಖೆ ನಡೆಸಿ ಸೂಕ್ತ ಕ್ರಮಕೈಗೊಳ್ಳಬೇಕೆಂದು ದಕ್ಷಿಣ ವಲಯ ಐಜಿಪಿಗೆ ನ್ಯಾಯಾಧೀಶರು ನಿರ್ದೇಶನ ನೀಡಿದ್ದಾರೆ. ಇದೀಗ ನ್ಯಾಯಾಧೀಶರ ನಿರ್ದೇಶನ ಪಾಲಿಸುವುದು ಅನಿವಾರ್ಯವಾಗಿರುವುದರಿಂದ ಐಜಿಪಿಯವರು ಈ ವಿಚಾರದಲ್ಲಿ ಯಾವ ರೀತಿಯ ಕ್ರಮ ಕೈಗೊಳ್ಳುತ್ತಾರೆ ಎಂಬುದು ಕುತೂಹಲ ಕೆರಳಿಸಿದೆ. ಅಷ್ಟೇ ಅಲ್ಲದೆ ಅಸ್ಥಿಪಂಜರ ಹಿಂದಿನ ರಹಸ್ಯ ಬಯಲಾಗುತ್ತಾ ಎಂಬುದು ಕೂಡ ಈ ಪ್ರಕರಣದಲ್ಲಿ ಕುತೂಹಲಕ್ಕೆ ಕಾರಣವಾಗಿದೆ. ಇದರ ಜತೆಗೆ ನ್ಯಾಯಾಲಯಕ್ಕೆ ಸುಳ್ಳು ದಾಖಲೆಗಳನ್ನು ಸಲ್ಲಿಸಿದ್ದ ಆರೋಪದ ಮೇರೆಗೆ ಸರ್ಕಲ್ ಇನ್ಸ್‌ಪೆಕ್ಟರ್ ಬಿ.ಜಿ.ಪ್ರಕಾಶ್ ವಿರುದ್ಧ ಭಾರತೀಯ ದಂಡಸಂಹಿತೆ 193 ಮತ್ತು 195ರಡಿ ಜಿಲ್ಲಾ ಪ್ರಧಾನ ಸತ್ರ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸುವಂತೆ ಜಿಲ್ಲಾ ಸೆಷನ್ಸ್ ನ್ಯಾಯಾಲಯದ ಮುಖ್ಯಆಡಳಿತಾಧಿಕಾರಿಗಳಿಗೆ ನಿರ್ದೇಶನ ನೀಡಿದ್ದಾರೆ. ☯

## ಕಚಗುಳಿ

# ಎಲ್ಲಾ ಅವಳಿಗಾಗಿ

ಗಂಡ ಸತ್ತಿದ್ದಾನೆ. ವಿಪರೀತ ಕುಡಿದು ಅಮಲೇರಿಸಿಕೊಂಡು ರಸ್ತೆಯಲ್ಲಿ ನಡೆಯುತ್ತಿದ್ದಾಗ ಲಾರಿಯೊಂದು ನುಗ್ಗಿತು. ಅಮಲಿನಲ್ಲಿದ್ದ ಇವನು ಅಡ್ಡ ಬಂದಿದ್ದನು. ಲಾರಿ ಇವನ ಮೈಮೇಲೆ ಪ್ರಹಾರ ಮಾಡುವ ರೀತಿ ನುಗ್ಗಿತ್ತು.

ನಿರ್ಜನ ಪ್ರದೇಶ! ಸಿ.ಸಿ. ಕ್ಯಾಮರಗಳಿರಲಿಲ್ಲ. ಲಾರಿ ಬಗ್ಗೆಮಾಹಿತಿ ಇರಲಿಲ್ಲ.

ಸತ್ತವನು ಚಂದ್ರಭಾಗ. ಪ್ರೈವೇಟ್ ಕಂಪನಿಯೊಂದರಲ್ಲಿಇಂಜಿನಿಯರ್ ಆಗಿಕೆಲಸಮಾಡುತ್ತಿದ್ದ. ಬಾಹ್ಯರೂಪದ ಆಕರ್ಷಣೆ ಸೊಗಸಾಗಿತ್ತು . ಹಾಗಾಗಿ ನಿರ್ಮಲ ಎಂಬ ಯುವತಿ ಮದುವೆ ಆಗಿದ್ದಳು.

ಮದುವೆಯಾದ ಮೇಲೆ ಗಂಡನ ಹುಳುಕು ಗೊತ್ತಾಯಿತು. ಕುಡಿತದ ದಾಸ. ವಿಪರೀತ ಜೂಜಾಡುತ್ತಿದ್ದ.

ಕಂಪನಿಗೆ ಶನಿವಾರ-ಭಾನುವಾರ ರಜಾ. ಆ ಎರಡು ದಿನಗಳು ಮನೇಲಿ ಇರುತ್ತಿರಲಿಲ್ಲ.

ಎಂಭತ್ತು ಸಾವಿರ ಸಂಬಳ. ಆದರೆ ಮೂರೆಲೆ ಇಸ್ಪೀಟ್ ಆಟ ಮತ್ತು ಇನ್ನಿತರ ಚಟಗಳಿಂದ ಹದಿನೆಂಟು ಲಕ್ಷ ಸಾಲ ಮಾಡಿದ್ದನು.

ಹೆಂಡತಿ ರೂಪವತಿ. ಇಪ್ಪತ್ತೆರಡರ ಪ್ರಾಯದವಳು. ಅವಳಿಗೆ ಗಂಡನಾಗಿ ಇವನು ಕೊಟ್ಟಿದ್ದೇನು ಗೊತ್ತೆ? ಒಂದು ಮಗ. ಹದಿನೆಂದು ಲಕ್ಷಸಾಲ.

ಮನೆ ಮಾಲೀಕರು ಗಲಾಟೆ ಮಾಡಿದ್ದರು. ಒಂದು ವರ್ಷದಿಂದ ಬಾಡಿಗೆ ಕೊಟ್ಟಿರಲಿಲ್ಲ. ಸಾಲಗಾರರು ವಿಪರೀತ ಕಾಟ ಕೊಡುತ್ತಿದ್ದರು.

ಇವಳಿಗೆ ಬದುಕು ಬರ್ಬರವಾಗಿತ್ತು. ಎರಡು ವರ್ಷದ ಮಗು ಇದೆ. ಆ ಮಗುವಿಗೆ ಯಾವ ರೀತಿಯಿಂದಲೂ ಪೋಷಣೆ ಇರಲಿಲ್ಲ. ಒಂದು ರೀತಿ ಕಷ್ಟದಲ್ಲಿ ಬದುಕುತ್ತಿದ್ದರು.

ನಿರ್ಮಲ ಎಸ್ ಎಸ್ ಎಲ್ ಸಿ ಅವಳ ತುಂಬಾ ಆಕರ್ಷಕ ರೂಪವತಿ. ಆದರೆ ಬುದ್ಧಿವಂತಿಕೆ ಅಲ್ಲ. ವಿದ್ಯಾವಂತೆ ಅಲ್ಲ.

ಅವಳು ತೀರ್ಮಾನ ಮಾಡಿದ್ದಳು. ಮಗು ಮತ್ತು ನನ್ನನ್ನು ಒಪ್ಪಿಕೊಂಡರೆ ಬೇರೊಬ್ಬ ಶ್ರೀಮಂತನನ್ನು ಮದುವೆ ಆಗಬೇಕು ಎಂದು ಪ್ರಯತ್ನ ಮಾಡಿದ್ದಳು.

ಅವಳ ಜೊತೆ ಇದ್ದವರು ಯಾರು?

ಅವಳ ತಾಯಿ ದೇವಮ್ಮ.

ಗಂಡನ ತಮ್ಮ (ಮೈದುನ) ಶಂಕರ ಅಂತ. ಇವಳ ಮದುವೆ ವಿಚಾರವಾಗಿ ಆ ತಾಯಿ ಹೇಳಿದ್ದರು.

ಆ ಹೇಳಿಕೆ ಏನು?

"ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾನೆ. ಎಂಭತ್ತು ಸಾವಿರ ಸಂಬಳ ಬರುತ್ತೆ ಅಂತ ಅವನನ್ನು ಮದುವೆ ಮಾಡಿಕೊಂಡೆ. ಸರಿಯಾಗಿ ವಿಚಾರಿಸಲಿಲ್ಲ. ಈಗ ನಿನ್ನ ಬದುಕು ಬೀದಿಗೆ ಬಂದಿದೆ. ಮತ್ತೊಬ್ಬ ಶ್ರೀಮಂತ ಮದುವೆ ಆಗಬಹುದು. ಆದರೆ ಅವನ ಹಣಕಾಸಿನ ಹಿನ್ನಲೆ, ಅವನ ಚಪಲ, ಹವ್ಯಾಸಗಳ ಬಗ್ಗೆ ಯಾರು ತಿಳಿಯುತ್ತಾರೆ? ಪುನಹ ಅದೇ ರೀತಿಯ ಗಂಡನ್ನು ಮದುವೆ ಮಾಡಿಕೊಂಡರೆ ಏನು ಗತಿ? ಆ ಕಾರಣದಿಂದ ನೀನು... ನೀನು ಮದುವೆ ಆಗುವ ಮೊದಲು ಚೆನ್ನಾಗಿ ಆಲೋಚನೆ ಮಾಡು ನಿರ್ಮಲ."

ಮೈದುನ ಶಂಕರ ಇಪ್ಪತ್ತೆರಡರ ಪ್ರಾಯದವನು. ಅವನು ಉಂಡಾಡಿಗುಂಡನ ರೀತಿ ತಿರುಗುತ್ತಾ ಬೀದಿ ಬಸವನಂತೆ ತಿರುಗಿದ್ದನು.

ಅವನು ರೌಡಿಯ ರೀತಿ ರೋಲ್‌ಕಾಲ್ ಮಾಡುತ್ತಾನೆ. ಕೆಲವರನ್ನು ಬ್ಲಾಕ್‌ಮೇಲ್ ಮಾಡಿ ಹಣ ಸಂಪಾದಿಸುತ್ತಾನೆ ಎಂಬ ವದಂತಿ ಅವಳ ಕಿವಿಗೂ ಬಿದ್ದಿತ್ತು. ಆದರೆ ಚಟ-ಚಪಲಗಳ ದಾಸ ಆಗಿರಲಿಲ್ಲ. ಬಲಿಷ್ಠ ಶರೀರದ ಯುವಕ. ಕೆರಳಿದರೆ ಸಿಂಹ ಆಗುತ್ತಿದ್ದನು.

ಅವನು ಇವಳ ಜೊತೆ, ಈ ಸಂಸಾರದಲ್ಲಿ ಎರಡು ವರ್ಷಗಳಿಂದ ಇದ್ದನು. ಆದರೆ... ಅವನು ಇವಳನ್ನು ನೋಡುತ್ತಿದ್ದ ರೀತಿ ಸರಿ ಇರಲಿಲ್ಲ. ಆದರೆ ಇದನ್ನು ಗಂಡನಿಗೆ ಹೇಳಿರಲಿಲ್ಲ. ಯಾಕೆ ಅಂದರೆ ಕುಡುಕ ಗಂಡ ಹೆಂಡತಿಯ ಮಾತುಗಳನ್ನು ಕೇಳುವಂತಹ ಸ್ಥಿತಿಯಲ್ಲಿ ಇರಲಿಲ್ಲ.

ಅಣ್ಣಸತ್ತಿದ್ದಾನೆ! ಇವನು ಅಧಿಕಾರ ಚಲಾಯಿಸುತ್ತಿದ್ದಾನೆ. ಅವನು ಹೇಳಿದ್ದೇನು?

"ನಿರ್ಮಲ... ನೀವು ಮತ್ತೊಬ್ಬನನ್ನು ಮದುವೆ ಆಗಲು ತೀರ್ಮಾನ ಮಾಡಿದ್ದೀರ ಅಂತ ನನಗೆ ತಿಳಿದಿದೆ. ನಿಜ ತಾನೆ?"

ಅವಳು ಗಂಭೀರವಾಗಿ "ಹೌದು ನಿಜ. ಇದು ನನ್ನ ಸ್ವಂತ ವಿಷಯ. ಇದರ ಬಗ್ಗೆ ಪ್ರಶ್ನೆ ಮಾಡುವ ಅಧಿಕಾರ ನಿನಗಾಗಲಿ ಬೇರೆ ಯಾರಿಗೇ ಆಗಲಿ ಇಲ್ಲ."

ಅವನು ರೇಗಿದನು.

"ಅಧಿಕಾರದ ಬಗ್ಗೆ ಆಮೇಲೆ ಹೇಳ್ತೀನಿ. ನೀವು ಮದುವೆ ಆಗಬಾರದು. ಅಷ್ಟೇ ... ಬೇರೆ ಮಾತು ಬೇಕಾಗಿಲ್ಲ."

ಅವಳಿಗೆ ಕೋಪ ಬಂದಿತು.

"ನಾನು ನನ್ನ ಭವಿಷ್ಯದ ದೃಷ್ಟಿಯಿಂದ ಏನು ಬೇಕಾದರೂ ಮಾಡ್ತೀನಿ. ಆದರೆ ಪ್ರಶ್ನೆ ಮಾಡಲು, ಕೇಳಲು ನೀವ್ಯಾರು?"

"ನಾನು ಗಂಡ... ನಿಮ್ಮ ಗಂಡನ ತಮ್ಮ. ನೀವು ಮದುವೆ ಆಗಬಾರದು. ಒಂದು ವೇಳೆ ಪ್ರಯತ್ನ ಮಾಡಿದರೆ ಅದನ್ನು ಯಾವ ರೀತಿ ತಪ್ಪಿಸಬೇಕು ಅಂತ ನನಗೆ ಗೊತ್ತಿದೆ. ನಾನು ಯಾರು ಅಂತ ನಿಮಗೆ ಗೊತ್ತಿದೆ" ಎಂದು ಬೆದರಿಕೆ ಹಾಕಿದ್ದನು.

ಅವಳು ಹೆದರಿದಳು. ತಾಯಿ ಅವನ ರೌಡಿಸಂ ಮತ್ತು ಕ್ರೂರತನದ ಬಗ್ಗೆ ಹೇಳಿದ್ದರು. ನಿರ್ಮಲ ಗೋಳಾಡುತ್ತಿದ್ದಾಳೆ. ಬಡತನ ಕಾಡುತ್ತಿದೆ.

ಶಂಕರ ರಾತ್ರಿ, ಒಂಭತ್ತು ಗಂಟೆ ನಂತರ ಮನೆಗೆ ಬರುತ್ತಾನೆ. ಸಂಸಾರದ ಬಗ್ಗೆ, ಆರ್ಥಿಕ ಸಮಸ್ಯೆ ಬಗ್ಗೆ ತಲೆಕೆಡಿಸಿಕೊಂಡಿಲ್ಲ.

ಅವಳು ಗೋಳಾಡುತ್ತಿದ್ದಾಳೆ.

ಮಗುವಿಗೆ ಉತ್ತಮ ಆಹಾರ, ಒಳ್ಳೆಯ ಬಟ್ಟೆಗಳನ್ನು ಕೊಡಿಸಲು ಆಗುತ್ತಿಲ್ಲ. ಈ ಸಾಲಗಾರರು ಸಹ ಬಂದು ಕಾಡಿಸುತ್ತಿರುತ್ತಾರೆ. ಅವಳಿಗೆ ತಲೆಕೆಡುವ ರೀತಿ ಆಗಿದೆ.

ಮೈದುನ ರೌಡಿಯ ರೀತಿ ಆಡುತ್ತಾ ಇವಳನ್ನು ಹೆದರಿಸುತ್ತಾನೆ. ಆದರೆ ಹಣ ಸಹಾಯ ಮಾಡಲ್ಲ. ಎಷ್ಟು ದಿವಸ ಅಂತ ಬಡತನ, ಈ ತಾಪತ್ರೆ ಅನುಭವಿಸಲು ಸಾಧ್ಯ? ಬದುಕು ಬದಲಾಯಿತು!

ಆಕಸ್ಮಿಕ ಸನ್ನಿವೇಶದಲ್ಲಿ ಆತ್ಮೀಯ ಗೆಳತಿ ಗೀತಾ ಸಿಕ್ಕಿದಳು. ಅವಳ ಶ್ರೀಮಂತಿಕೆಯ ವೈಭವ ಕಂಡು ಬೆರಗಾಗಿದ್ದಳು.

ಅಸಲು ಸಂಗತಿ ಏನು? ಗೆಳತಿ ಗೀತಾಳ ಗಂಡ ಕಡಿಮೆ ಸಂಬಳದ ಕೆಲಸಗಾರ. ಆಸ್ತಿ ಇರಲಿಲ್ಲ. ಇವಳು ಸಹ ಕೆಲಸಕ್ಕೆ ಹೋಗುತ್ತಿರಲಿಲ್ಲ. ಆದರೆ ಈ ಶ್ರೀಮಂತಿಕೆ ಹೇಗೆ ಬಂತು ಎಂಬುದರ ಬಗ್ಗೆ ಕೇಳಿದ್ದಳು.

ಗೆಳತಿ ಗೀತಾ ರಹಸ್ಯ ಹೇಳಿದ್ದಳು.

ಅವಳ ಉಪದೇಶ ಏನು?

"ನೀನು ಮತ್ತೊಬ್ಬರನ್ನು ಮದುವೆಯಾದ ಮಾತ್ರಕ್ಕೆ ನಿನ್ನ ಸಂಸಾರ ಜೀವನ ನೀನು ಬಯಸಿದಂತೆ ಸುಖವಾಗಿರುವುದಿಲ್ಲ. ನೀನು ಸುಖವಾಗಿ ನನ್ನಂತೆ ಶ್ರೀಮಂತಿಕೆಯ ವೈಭವದಿಂದ ಬಾಳಬೇಕು ಅಂತ ಆಸೆ ಇದ್ಯಾ?'

"ಇದೆ... ಅದೊಂದೇ ಆಸೆ ನನಗಿರೋದು. ನನ್ನ ಮಗು ಸಹ ಶ್ರೀಮಂತಿಕೆಯ ವೈಭವದಲ್ಲಿ ಬೆಳೆಯಬೇಕು."

"ಹಾಗಾದರೆ ನಾನು ಹೇಳಿದಂತೆ ಕೇಳುತ್ತೀಯ ನಿರ್ಮಲ."

"ಕೇಳ್ತೀನಿ ಹೇಳು ಗೀತಾ."

ಅವಳು ಇಪ್ಪತ್ತು ನಿಮಿಷಗಳ ಕಾಲ ಮಾತಾಡಿದಳು. ನಂತರ ನಿರ್ಮಲ ಏನೇನು ಮಾಡಬೇಕು ಮತ್ತು ಯಾವ ರೀತಿ ಇರಬೇಕು ಎಂಬುದನ್ನು ಅವಳಿಗೆ ಅರ್ಥ ಆಗುವ ರೀತಿ ಹೇಳಿದಳು.

ಎಲ್ಲಾ ಅರ್ಥವಾಗಿದೆ. ಆದರೆ ಕೂಡಲೇ ತನ್ನ ನಿರ್ಧಾರ ತಿಳಿಸಲಿಲ್ಲ. ಆ ರಾತ್ರಿ ತುಂಬಾ ಹೊತ್ತು ಗೆಳತಿಯ ವಿಚಾರ ಆಲೋಚನೆ ಮಾಡಿದ ನಂತರ ತೀರ್ಮಾನ ಮಾಡಿದಳು.

ಬೆಳಗಿನ ಒಂಭತ್ತು ಗಂಟೆ.

ಗೀತಾಳಿಗೆ ಫೋನ್ ಮಾಡಿದಳು.

"ನನಗೆ ಒಪ್ಪಿಗೆ ಇದೆ."

"ನೀನು ತುಂಬಾ ಆಕರ್ಷಕವಾಗಿ ಕಾಣುವ ರೀತಿ ಡ್ರೆಸ್ ಮತ್ತು ಮೇಕಪ್ ಮಾಡಿಕೊಂಡು ಫೋಟೋಗಳನ್ನು ತೆಗೆಸಿಕೊಂಡು ಕಳಿಸು."

"ಆಗಲಿ ಗೀತಾ."

ಸುಮಾರು ಹತ್ತು ಬೇರೆ ಬೇರೆ ಭಂಗಿಗಳಲ್ಲಿ ತನ್ನ ಸೌಂದರ್ಯಕ್ಕೆ ಮೆರಗು ಬರುವ ರೀತಿಯಲ್ಲಿ, ತುಂಬಾ ಸೆಕ್ಸಿಯಾಗಿ ಕಾಣುವಂತೆ ಡ್ರೆಸ್ ಮತ್ತು ಮೇಕಪ್ ಮಾಡಿಕೊಂಡು ಫೋಟೋ ತೆಗೆಸಿಕೊಂಡಳು.

ಗೀತಾ ಆ ಫೋಟೋಗಳನ್ನು ನೋಡಿದ ನಂತರ "ಏ ನಿರ್ಮಲ ನೀನು ಸೆಕ್ಸ್ ಕ್ವೀನ್ ಕಣೆ. ನಿನ್ನಂತಹ ಚೆಲುವೆಯರಿಗಾಗಿ ರಸಿಕರು ಎಷ್ಟು ಬೇಕಾದರೂ ಹಣ ಕೊಡುತ್ತಾರೆ."

ಅವಳು ಪುಳುಕಗೊಂಡಳು.

"ಫಾರಿನ್ ವಿಸ್ಕಿ, ಸ್ಪೆಷಲ್ ಮಟನ್ ಮತ್ತು ಚಿಕನ್ ಊಟ, ಸೆಕ್ಸ ಸುಖ ಮತ್ತು ಬೇಕಾದಷ್ಟು ಹಣ ಸಿಗುತ್ತೆ."

"ಯಾವತ್ತಿನಿಂದ ಅದೃಷ್ಟ ಬರುತ್ತೆ?"

"ನಾನು ಎಲ್ಲಾ ವ್ಯವಸ್ಥೆ ಮಾಡಿ ಫೋನ್ ಮಾಡ್ತೀನಿ. ನಿನ್ನ ತಾಯಿ ಹತ್ತಿರ ಮಗು ಇರಲಿ. ನೀನು ಕೆಲಸಕ್ಕೆ ಹೋಗುತ್ತಿದ್ದೀನಿ ಅಂತ ಸುಳ್ಳು ಹೇಳಿ ರೆಡಿಯಾಗಿರು."

ಆ ರಾತ್ರಿ ಕಳೆಯಿತು.

ಬೆಳಗಿನ ಒಂಭತ್ತು ಗಂಟೆ.

"ನಿರ್ಮಲ... ನಿನ್ನ ಮೊದಲ ಅನುಭವ ಹಗಲಿನ ವೇಳೆ ಅಲ್ಲ. ಆ ಶ್ರೀಮಂತ ರಾತ್ರಿ ಎಂಟು ಗಂಟೆಗೆ ಹೋಟೆಲ್ ಗ್ರೀನ್ ಲ್ಯಾಂಡ್‌ಗೆ ಬರ್ತಾನೆ. ನೈಟ್ ಪೂರ್ತಿ ಇರಬೇಕು. ನಿನ್ನ ರೇಟ್ ಒಂದು ರಾತ್ರಿಗೆ ಮುವತ್ತು ಸಾವಿರ. ಆ ಕಸ್ಟಮರ್‌ನ ಚೆನ್ನಾಗಿ ಮೆರುಗು ಮಾಡಿ ಹತ್ತು ಸಾವಿರ ಟಿಪ್ಸ್ ಅಂತ ವಸೂಲಿ ಮಾಡು. ನೀನು ಕಿಲಾಡಿ ಕಾಲ್ ಗರ್ಲ್ ಆಗಬೇಕು."

ಒಂದು ರಾತ್ರಿಗೆ ನಲವತ್ತು ಸಾವಿರ!

ಅವಳು ರೋಮಾಂಚನಗೊಂಡಳು.

ರಾತ್ರಿ ಏಳು ಗಂಟೆ ಹೊತ್ತಿಗೆ ತುಂಬಾ ಗ್ಲಾಮರಸ್ ಆಗಿ ಕಾಣುವಂತೆ ಡ್ರೆಸ್ ಮತ್ತು ಮೇಕಪ್ ಮಾಡಿಕೊಂಡು ರೆಡಿಯಾದಳು. ಗೀತಾ ಫೋನ್ ಮಾಡಿದಳು.

"ಸರ್ಕಲ್‌ಗೆ ಬಾ. ಅಲ್ಲಿ ಕಾರು ಇರುತ್ತದೆ. ಡ್ರೈವರ್ ನಮ್ಮವನು. ಅವನು ನಿನ್ನ ಆ ಹೋಟೆಲ್‌ಗೆ ಕರ್ಕೊಂಡು ಹೋಗ್ತಾನೆ. ನೀನು ಆ ಕಸ್ಟಮರ್ ರೂಮಿಗೆ ಹೋಗುವ ತನಕ ಜೊತೆಯಲ್ಲಿರುತ್ತಾನೆ. ನಂತರ ಅವನು ಕಾರಲ್ಲಿ ಮಲಗಿರುತ್ತಾನೆ. ಬೆಳಗಿನ ಐದೂವರೆಗೆ ನೀನು ರೆಡಿಯಾಗಿ ರೂಮಿನಿಂದ ಹೊರಗೆ ಬಾ. ಅವನು ನಿನ್ನನ್ನು ಮನೆಗೆ ಕರ್ಕೊಂಡು ಬಂದು ಬಿಡುತ್ತಾನೆ."

ಅವನಿಗೆ ಎಷ್ಟು ಹಣ ಕೊಡಲಿ?"

"ಒಂದು ಸಾವಿರ ಕೊಡು."

●●●

ನಿರ್ಮಲಳಿಗೆ ಒಂದು ರೀತಿ ಉದ್ವೇಗ, ಆತಂಕ, ಟೆನ್ಷನ್ ಜಾಸ್ತಿಯಾಗಿದೆ. ಇದು ಮೊದಲ ಅನುಭವ.

ಗಂಡ ಕುಡಿತದ ಅಮಲಿನಲ್ಲಿ ಇವಳನ್ನು ಬೆತ್ತಲೆಗೊಳಿಸಿ ಸ್ವಲ್ಪ ಹೊತ್ತು ಹೊರಳಾಡಿ ಸುಸ್ತಾಗಿ ಸೋತು ಮಲಗಿ ಬಿಡುತ್ತಿದ್ದನು. ಸೆಕ್ಸ್ ಸುಖದ ತೃಪ್ತಿ ಇರಲಿಲ್ಲ. ಆ ರಾತ್ರಿ ಅನುಭವ ಆಗಲಿದೆ. ಆದರೆ ನಲವತ್ತು ಸಾವಿರ ಹಣ ಕೊಡುವ ಕಸ್ಟಮರ್ ಯಾರು? ಅವನು ಪ್ರಾಯದ ಯುವಕನಾ? ಅಥವಾ ಮುದುಕನಾ? ಎಂಬ ಆಲೋಚನೆಗಳೊಂದಿಗೆ ರೂಮಿಗೆ ಬಂದಳು. ಅವಳಿಗೆ ಪುಳುಕವಾಯಿತು.

ಮುವತ್ತರ ಪ್ರಾಯದ ಬಲಿಷ್ಠ ಶರೀರದ ವ್ಯಕ್ತಿ . ಸೋಫಾದಲ್ಲಿ ಆರಾಮವಾಗಿ ಕುಳಿತು ವಿಸ್ಕಿ ಕುಡಿಯುತ್ತಾ, ಸಿಗರೇಟ್ ಸೇದುತ್ತಾ , ಆಗಾಗ ಚಿಕನ್ ಮಂಚೂರಿ ತಿನ್ನುತ್ತಿದ್ದನು.

ಗೀತಾ ಮೊದಲೇ ಹೇಳಿದ್ದಳು. ಕಾಲ್‌ಗರ್ಲ್ ಜೊತೆ ಎಂಜಾಯ್ ಮಾಡುವ ಬರುವ ಗಂಡಸರಲ್ಲಿ ತುಂಬಾ ಮಂದಿ ಕುಡಿದು, ಸಿಗರೇಟ್ ಸೇದುತ್ತಾರೆ. ನೀನು ಅವರಿಗೆ ಕಂಪನಿ ಕೊಡಬೇಕು. ಆದರೆ ಜಾಸ್ತಿ ಕುಡಿಯಬಾರದು. ಕುಡಿದಂತೆ ನಾಟಕ ಆಡಿ ಅವನಲ್ಲಿರುವ ಹಣದಲ್ಲಿ ಸ್ವಲ್ಪ ಭಾಗ ಎಗರಿಸಬೇಕು. ಈ ರೀತಿ ಮಾಡಿದರೆ ಗಂಟು ಮಾಡಬಹುದು. ನೀನು ಇದನ್ನೆಲ್ಲಾ ಸರಿಯಾಗಿ ಫಾಲೋ ಮಾಡ್ಬೇಕು."

ಡ್ರೈವರ್ ಈ ಕಸ್ಟಮರ್‌ನಿಂದ ಕಮೀಷನ್ ಪಡೆದು ಹೋಗಿದ್ದಾನೆ. ಕಸ್ಟಮರ್ ಇವಳ ಸೌಂದರ್ಯ ನೋಡಿ ಬೆರಗಾಗಿದ್ದಾನೆ. ಕೈ ಹಿಡಿದು ಎಳೆದು ತಬ್ಬಿಕೊಂಡು ಮುಖ ಮುದ್ದಾಡಿದನು. ಅವಳು ತನ್ನ ಕೋಮಲವಾದ ಕೈಗಳಿಂದ ಅವನ ಮುಖ, ಕತ್ತು ಎದೆ ಸವರಿದಳು. ರಸಿಕ ಅವಳ ಎದೆ ಸೌಂದರ್ಯದ ಸ್ಪರ್ಶ ಮಾಡಿದಾಗ, ಸುಖದಿಂದ ಕಂಪಿಸುವಂತೆ ನಾಟಕ ಆಡಿದಳು. ಉಪಾಯವಾಗಿ ಮಾತಾಡುತ್ತಾ , ಆಟ ಆಡುತ್ತಾ ತನ್ನ ಪಾಲಿನ ಪೇಮೆಂಟ್ ಅನ್ನು ವಸೂಲಿ ಮಾಡಿ ವ್ಯಾನಿಟಿ ಬ್ಯಾಗಿನಗೆ ಹಾಕಿಕೊಂಡಳು. ಈ ರೀತಿ ಆಗಬಾರದಿತ್ತು. ಸುಳಿವೇ ಕೊಡದ ರೀತಿಯಲ್ಲಿ ಪೊಲೀಸರು ರೈಡ್ ಮಾಡಿದ್ದಾರೆ. ಆ ಹೋಟೆಲ್‌ನಲ್ಲಿ ದಂಧೆ ನಡೆಯುತ್ತಿದೆ ಎಂದು ದೂರು ಬಂದಿದ್ದರಿಂದ ರೈಡ್ ಮಾಡಿದ್ದಾರೆ.

ಕಾಲೇಜಿನ ಯುವತಿಯರು, ಸೀರಿಯಲ್ ನಟಿಯರಲ್ಲಿ ಕೆಲವರು ಮತ್ತು ಪ್ರೊಫೆಷನಲ್ ಕಾಲ್‌ಗರ್ಲ್‌ಗಳು ದಂಧೆ ಮಾಡಲು ಬಂದಿದ್ದರು. ಪೊಲೀಸರ ದಾಳಿಗೆ ಹೆದರಿ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುತ್ತಿದ್ದಾರೆ.

ನಿರ್ಮಲ ಸಹ ತಪ್ಪಿಸಿಕೊಂಡು ಕಂಬದ ಮರೆಯಲ್ಲಿ ನಿಂತಿದ್ದಳು. ಭಯದಿಂದ ನಡುಗುತ್ತಿದ್ದಾಳೆ. ಆಗ ಅವಳ ಭುಜದ ಮೇಲೆ ಕೈ ಬಿದ್ದಿತು. ಗಾಬರಿಯಿಂದ ತಿರುಗಿದಳು.

ಗಂಡನ ತಮ್ಮ ಶಂಕರ. ರೌಡಿ ಶಂಕರ...! ಪೊಲೀಸರ ದೃಷ್ಟಿಗೆ ಬೀಳದಂತೆ ಅವಳನ್ನು ಕಾಪಾಡಿ ಮನೆಗೆ ಕರೆದುಕೊಂಡು ಬಂದಿದ್ದನು.

●●●

ಮಗು ಮತ್ತು ಅವಳ ತಾಯಿ ಬೇರೆ ರೂಮಲ್ಲಿ ಮಲಗಿದ್ದಾಳೆ. ನಿರ್ಮಲ ತಲೆ ತಗ್ಗಿಸಿದ್ದಾಳೆ.

"ಹಣಕ್ಕಾಗಿ ಸೂಳೆ ದಂಧೆ ಮಾಡಲು ಹೋಗಿದ್ಯಾ? ಇನ್ನು ಮುಂದೆ ಅವೆಲ್ಲಾ ಏನೂ ಬೇಡ. ತೆಪ್ಪಗೆ ಮನೇಲಿ ಬಿದ್ದಿರು."

ಅವಳಿಗೆ ಕೋಪ ಬಂದಿತು. ಅತ್ತು ಜಗಳ ಆಡಿದಳು.

"ನೀನು ಹೇಳಿದಂತೆ ಮನೇಲಿ ಬಿದ್ದಿರುತ್ತೀನಿ. ನನಗೆ ನಾನು ಕೇಳಿದಷ್ಟು ಹಣ ತಂದುಕೊಡ್ತೀಯ?"

"ಎಷ್ಟು ಬೇಕು?"

"ನಾಳೆ ಎರಡು ಲಕ್ಷ ಬೇಕು."

"ಆಗಲಿ ತಂದುಕೊಡ್ತೀನಿ."

ಅವಳು ನಂಬಿರಲಿಲ್ಲ. ಆಶ್ಚರ್ಯಕರ ರೀತಿಯಲ್ಲಿ ಹಣ ತಂದುಕೊಟ್ಟರು.

ಎರಡಲ್ಲ... ಮೂರು ಲಕ್ಷ!

ಅವಳು ರೋಮಾಂಚನಗೊಂಡಿದ್ದಾಳೆ.

ಅವನು "ನೀನು ಕೇಳಿದಾಗಲೆಲ್ಲಾ ಹಣ ಕೊಡ್ತೀನಿ. ನಾನು ಹೇಳಿದಂತೆ ಕೇಳಬೇಕು."

ಅವಳು ಅವನ ಕಡೆ ನೋಡಿದಳು.

ಕಣ್ಣುಗಳಲ್ಲಿ ಕಾಮದಾಹ ಇದೆ.

ಅವಳು "ಆಗಲಿ... ಇನ್ನು ಮುಂದೆ ನಾವಿಬ್ಬರು ಗಂಡ-ಹೆಂಡತಿ ರೀತಿ ಬದುಕೋಣ. ನಾಳೆ ಹೂವಿನ ಅಲಂಕಾರ ಮಾಡ್ತೀನಿ. ನಮ್ಮಿಬ್ಬರಿಗೆ ಮೊದಲ ರಾತ್ರಿ. ನಾಳೆ ನನ್ನ ಬರ್ತ್‌ಡೇ. ರೂಮಲ್ಲಿ ಬರ್ತ್‌ಡೇ ಆಚರಿಸೋಣ. ನನಗೆ ಐದು ಲಕ್ಷ ಗಿಫ್ಟ್ ಕೊಡಬೇಕು."

ಆ ರಾತ್ರಿ ಐದು ಲಕ್ಷ ಅವಳಿಗೆ ತಂದುಕೊಟ್ಟನು. ಅವಳು ಸಂಬಂಧ ಮರೆತಳು. ಇವನು ಕಸ್ಟಮರ್ ಎಂಬ ಭಾವನೆಯಿಂದ ರತಿಯಾಗಿ ಸುಖ ನೀಡಿದಳು. ಇವಳ ಹಣದ ದಾಹ ಹೆಚ್ಚಾಯಿತು. ಅವನು ತಂದುಕೊಡುತ್ತಲೇ ಇದ್ದನು. ಆದರೆ ಕಳ್ಳತನ, ರಾಬರಿ ಮಾಡುವಾಗ ರೆಡ್ ಹ್ಯಾಂಡ್ ಆಗಿ ಪೊಲೀಸರಿಗೆ ಸಿಕ್ಕಿಬಿದ್ದನು. ಈಗ ಜೈಲು ಶಿಕ್ಷೆ ಆಗಿದೆ.

ನಿರ್ಮಲಳ ಹತ್ತಿರ ಬೇಕಾದಷ್ಟು ಹಣ ಇದೆ ನಿಜ. ಆದರೆ ಅವಳು ಮತ್ತಷ್ಟು ಸಂಪಾದಿಸಲು ಸೀಕ್ರೇಟ್ ಕಾಲ್ ಗರ್ಲ್ ಆಗಿ ಬದಲಾದಳು. ಕಮರ್ಷಿಯಲ್ ಕಾಲ್‌ಗರ್ಲ್ ಆಗಿದ್ದಾಳೆ.

# ಮನೆಯಿಂದ ಓಡಿ ಹೋಗಿ ಮದುವೆಯಾದ ಪೃಥ್ವಿ ಭಟ್: ಮಗಳಿಗೆ ವಶೀಕರಣ ಮಾಡಿದ್ದಾರೆ- ಗಾಯಕಿ ತಂದೆ ಆರೋಪ




**ಕ**ನ್ನಡ ವಾಹಿನಿಯ ಸರಿಗಮಪ ರಿಯಾಲಿಟಿ ಶೋನಲ್ಲಿ ಗಾಯಕಿಯಾಗಿ ಮಿಂಚಿದ್ದ ಯುವ ಗಾಯಕಿ ಪೃಥ್ವಿ ಭಟ್ ಮನೆಯವರ ವಿರೋಧದ ನಡುವೆ ಪ್ರೇಮವಿವಾಹ ಆಗಿದ್ದಾರೆ.

ಜೀ ವಾಹಿನಿಯಲ್ಲೇ ಪ್ರೊಡಕ್ಷನ್ ವಿಭಾಗದಲ್ಲಿ ಕೆಲಸ ಮಾಡುತ್ತಿರುವ ಅಭಿಷೇಕ್ ಎನ್ನುವವರ ಜೊತೆ ಮಾರ್ಚ್ 27ರಂದು ವಿವಾಹವಾಗಿದ್ದು, ಇಪ್ಪತ್ತು ದಿನಗಳ ನಂತರ ಗಾಯಕಿಯ ತಂದೆ ಆಕ್ರೋಶ ಹೊರ ಹಾಕಿದ್ದಾರೆ.

ನನ್ನ ಮಗಳಿಗೆ ಹವ್ಯಕ ಹುಡುಗ ನನ್ನೇ ಹುಡುಕಿ ಮದುವೆ ಮಾಡುವ ಕನಸು ಹೊತ್ತಿದ್ದೆ. ಈ ವಿಷಯವನ್ನು ಜೀ ಕನ್ನಡವಾಹಿನಿಯ ಸರಿಗಮಪ ಶೋನಲ್ಲಿ ಜ್ಯೂರಿಯಾಗಿರೋ ಸಂಗೀತ ಶಿಕ್ಷಕ ನರಹರಿ ದೀಕ್ಷಿತ್ ಎನ್ನುವವರಿಗೆ ತಿಳಿಸಿದ್ದೆ. ಅವರು ಪೃಥ್ವಿ ಭಟ್ ಪ್ರೇಮಿಸುತ್ತಿರುವ ಹುಡುಗನ ಬಗ್ಗೆ ತಿಳಿಸಿದ್ದರು. ನಾನು ನನ್ನ ಮಗಳನ್ನು ಕೇಳಿದಾಗ, ನೀವು ತೋರಿಸಿದ ಹುಡುಗನ ಜೊತೆಯೇ ಮದುವೆ ಆಗುತ್ತೇನೆ ಅಂತ ದೇವರ ಮೇಲೆ ಪ್ರಮಾಣ ಮಾಡಿದ್ದಳು.

ನಾನು ಶಿವಪ್ರಸಾದ್, ಗಾಯಕಿ ಪ್ರಥ್ವಿ ಭಟ್ ಅಪ್ಪ. ನನ್ನ ಮಗಳು ಕಳೆದ ತಿಂಗಳು ಇಪ್ಪತ್ತೇಳನೇ ತಾರೀಖಿನಂದು ದೇವಸ್ಥಾನದಲ್ಲಿ ಯಾರನ್ನೋ ಮದುವೆಯಾಗಿ ನಮ್ಮನ್ನು ಬಿಟ್ಟು ಹೋಗಿದ್ದಾಳೆ. ನಮ್ಮ ಸಂಪರ್ಕದಲ್ಲಿ ಇಲ್ಲ ಈಗ ಅವಳು. ಮುಖ್ಯವಾದ ವಿಷಯ ಅಂದರೆ ಅವಳನ್ನು ಧಾರೆ ಎರೆದು ಮದುವೆ ಮಾಡಿಕೊಟ್ಟಿದ್ದು, ನಮ್ಮ ಗಿರಿನಗರ ವಲಯದ ನಿವಾಸಿ. ಭಯಂಕರ ಸಂಗೀತ ಶಿಕ್ಷಕ. ಮಹಾ ದುಷ್ಟ, ನರಹರಿ ದೀಕ್ಷಿತ್ ಎಂಬಾತ. ಈ ನರಹರಿ ದೀಕ್ಷಿತ್ ಬಂದು ಹೋದ ಮೇಲೆ ಅವಳ ವರ್ತನೆಯಲ್ಲಿ ತುಂಬಾ ಬದಲಾವಣೆ ಆಗಿದೆ ಮಾತ್ರ. ಒಂದು ರೀತಿ ವಶೀಕರಣ ಆದವರ ರೀತಿ ಇದ್ದಳು ಅವಳು. ಅದು ಸ್ವಲ್ಪ ನಾನು ಈ ವಿಷಯದಲ್ಲಿ ನಾನು ಸ್ವಲ್ಪ ಸೀರಿಯಸ್ ಆಗಿ ಆಲೋಚನೆ ಮಾಡಬೇಕಿತ್ತು. ಅದು ನನ್ನ ಕಡೆಯಿಂದ ತಪ್ಪಾಗಿದೆ. ಶಿವಪ್ರಸಾದ್, ಪೃಥ್ವಿ ಭಟ್ ತಂದೆ.



ಮಗಳನ್ನು ಕೂರಿಸಿಕೊಂಡು ಮಾತಾಡಿದಾಗ, ಹುಡುಗನೊಬ್ಬ ನನ್ನ ಹಿಂದೆ ಬಿದ್ದಿರೋದು ನಿಜ. ಆದರೆ, ನೀವು ಇಷ್ಟಪಟ್ಟರೆ ಮಾತ್ರ ಮುಂದುವರೆಯುವೆ. ಇಲ್ಲದಿದ್ದರೆ, ನೀವು ತೋರಿಸಿದ ಹುಡುಗನ ಜೊತೆಯೇ ಹೊಸ ಜೀವನಕ್ಕೆ ಕಾಲಿಡುತ್ತೇನೆ ಅಂತ ಪೃಥ್ವಿ ಭಟ್ ತಂದೆ ತಾಯಿಯ ಮೇಲೆ ಪ್ರಮಾಣ ಮಾಡಿದ್ದರಂತೆ. ಆ ಪ್ರಮಾಣ ಮುರಿದುಕೊಂಡು ಮದುವೆ ಆಗಿದ್ದಾರೆ. ಹಾಗಾಗಿ ಆಕೆ ನನ್ನ ಮನೆಗೆ ಬರೋದು ಬೇಡ ಅಂತ ತಿಳಿಸಿದ್ದಾಗಿ ಪೃಥ್ವಿ ಅವರ ತಂದೆಯು ಹೇಳಿಕೊಂಡಿದ್ದಾರೆ.

ಹವ್ಯಕ ಸಮಾಜವು ನರಹರಿ ದೀಕ್ಷಿತ್ ಅಂಥವರಿಗೆ ಪ್ರೋತ್ಸಾಹ ಮಾಡಬಾರದು ಅಂತ ಪೃಥ್ವಿ ತಂದೆ ಮನವಿ ಮಾಡಿಕೊಂಡಿದ್ದಾರೆ. ಇದ್ದೊಬ್ಬ ಮಗಳ ಧಾರೆಯರೆಯದಂತೆ ನರಹರಿ ಮಾಡಿದ್ದಾರೆ. ನಾನು ನೋವಿನಿಂದಲೇ ಈ ಸಂಗತಿಯನ್ನು ಹಂಚಿಕೊಳ್ಳುತ್ತಿರುವೆ ಅಂತ ಆಡಿಯೋವೊಂದನ್ನು ಮಾಡಿ, ಹವ್ಯಕ ಗ್ರೂಪ್‌ನಲ್ಲಿ ಪೋಸ್ಟ್ ಮಾಡಿದ್ದಾರೆ ಪೃಥ್ವಿ ತಂದೆ. ಆ ಆಡಿಯೋ ಈಗ ವೈರಲ್ ಆಗಿದೆ.

ಆದರೆ ಈ ಬಗ್ಗೆ ಪೃಥ್ವಿ ಭಟ್ ಸ್ಪಷ್ಟನೆ ನೀಡಿದ್ದಾರೆ. ಹಾಯ್ ಅಪ್ಪಾ, ಸಾರಿ ನೀವು ಆಲ್‌ರೆಡಿ ಎರಡು ದಿನದಿಂದ ಹವ್ಯಕ ಗ್ರುಪ್‌ನಲ್ಲಿ ಮತ್ತೆ ಬೇರೆ ಬೇರೆ ಗ್ರೂಪ್‌ನಲ್ಲಿ ನರಹರಿ ದೀಕ್ಷಿತ್ ಸರ್ ಬಗ್ಗೆ ಮತ್ತೆ ನನ್ನ ಬಗ್ಗೆ ಆಡಿಯೋ ಮೆಸೇಜ್ ಎಲ್ಲಾ ಕಳಿಸುತ್ತಿದ್ದಿ. ಈ ವಿಷಯದಲ್ಲಿ ನರಹರಿ ದೀಕ್ಷಿತ್‌ರದ್ದು ಏನೂ ತಪ್ಪಿಲ್ಲ, ನಾನು ಮೊದಲು ಹೇಳ್ದಂಗೆ, ಈಗಲೂ ಹೇಳ್ತಿದ್ದೀನಿ, ದೀಕ್ಷಿತ್ ಸರ್‌ದು ಎಂಥದ್ದು ತಪ್ಪಿಲ್ಲ, ಮಾರ್ಚ್ 7ಕ್ಕೆ ದೀಕ್ಷಿತ್ ಸರ್ ಮನೆಗೆ ಬಂದಿದ್ದು, ಈ ವಿಷಯ ಬಗ್ಗೆ ಮಾತ್ನಾಡಿದ್ರು.

ಆಗ ನಾನು ಅವರ ಎದುರೇ ಮತ್ತೆ ನಿಮ್ಮಗಳ ಎದುರೇ ನನಗೆ ಅಭಿ ಇಷ್ಟ ಅಂತನೇ ಹೇಳಿದ್ದು, ಅವತ್ತು ನಿಮ್ಮ ಮೇಲಿನ ಭಯಕ್ಕೆ ನಾನು ಸುಮ್ಮನಾದೆ, ಆದರೆ ನನ್ನ ಮನಸಿನಲ್ಲಿ ಅಭಿ ಇದ್ದರು- ಪೃಥ್ವಿ ಭಟ್, ಯುವ ಗಾಯಕಿ. ಶಿವಪ್ರಸಾದ್‌ರ ಆಡಿಯೋ ವೈರಲ್ ಆಗ್ತಿದ್ದಂತೆ ಪೃಥ್ವಿ ಭಟ್‌ರದ್ದು ಎನ್ನಲಾದ ಆಡಿಯೋ ಹರಿದಾಡ್ತಿದೆ... ತಂದೆಯ ಆರೋಪಕ್ಕೆ ಮಗಳು ಕೂಡ ಸ್ಪಷ್ಟೀಕರಣ ಕೊಟ್ಟಿದ್ದಾರೆ.



ನಟಿ ಅರ್ಚನಾ ಕೊಟ್ಟಿಗೆಯವರು ಕ್ರಿಕೆಟಿಗ ಬಿ.ಆರ್. ಶರತ್ ಅವರನ್ನು ವಿವಾಹವಾದರು.

# ಕೆಡಿ ಮಚ್ಚಲಕ್ಷ್ಮಿಯ ಹೊಸ ಅವತಾರ

**ಏ**ಕ್ ಲವ್ ಯಾ ಖ್ಯಾತಿಯ ಕೊಡಗಿನ ಬೆಡಗಿ ರೀಷ್ಮಾ ನಾಣಯ್ಯ ಅವರೀಗ ತಮ್ಮ ಹುಟ್ಟುಹಬ್ಬದ ಖುಷಿಯಲ್ಲಿದ್ದಾರೆ, ರೀಷ್ಮಾ ನಾಣಯ್ಯ ಅವರಿಗೆ ಸೋಮವಾರ ತಮ್ಮ 23ನೇ ವರ್ಷದ ಜನ್ಮದಿನದ ಸಂಭ್ರಮ. ಈ ಹಿನ್ನೆಲೆಯಲ್ಲಿ ಕೆಡಿ ಚಿತ್ರದ ವಿಶೇಷ ವಿಡಿಯೋವೊಂದನ್ನು ಶೇರ್ ಮಾಡಿ ತಮ್ಮ ಚಿತ್ರದ ನಾಯಕಿ ರೀಷ್ಮಾಗೆ ನಿರ್ದೇಶಕ ಪ್ರೇಮ್ ಅವರು ಶುಭ ಕೋರಿದ್ದಾರೆ.



ಧ್ರುವ ಸರ್ಜಾ ನಾಯಕನಾಗಿ ನಟಿಸುತ್ತಿರುವ ಕೆಡಿ ಚಿತ್ರದಲ್ಲಿ ರೀಷ್ಮಾ ನಾಣಯ್ಯ ಅವರು ನಾಯಕಿಯಾಗಿ ಮಚ್ ಲಕ್ಷ್ಮಿ ಅವತಾರದಲ್ಲಿ ಕಾಣಿಸಿಕೊಂಡಿದ್ದಾರೆ. ಈ ಚಿತ್ರದ ಶೂಟಿಂಗ್ ಸಮಯದಲ್ಲಿ ತೆಗೆದಿರುವ ವಿಡಿಯೋ ಕ್ಲಿಪ್‌ಗಳನ್ನು ನಿರ್ದೇಶಕ ಪ್ರೇಮ್ ಅವರು ಶೇರ್ ಮಾಡಿ, ತಮ್ಮ ಚಿತ್ರದ ನಾಯಕಿಗೆ ನಿರ್ದೇಶಕ ಪ್ರೇಮ್ ಅವರು ಬರ್ತ್ ಡೇ ಶುಭಾಶಯ ಕೋರಿದ್ದಾರೆ. ಹ್ಯಾಪಿ ಬರ್ತ್‌ಡೇ ಮಗನೇ ಎಂದು ರೀಷ್ಮಾ ನಾಣಯ್ಯ ಅವರಿಗೆ ಶುಭ ಹಾರೈಸಿದ್ದಾರೆ.

ಕೆಡಿ ಚಿತ್ರದಲ್ಲಿ ರೀಷ್ಮಾ ನಾಣಯ್ಯ ಅವರು ಧ್ರುವ ಸರ್ಜಾಗೆ ಜೋಡಿಯಾಗಿ ನಟಿಸಿದ್ದಾರೆ. ಆ ಚಿತ್ರದಲ್ಲಿ ಅವರು ಮಚ್ಚಲಕ್ಷ್ಮಿ ಎಂಬ ರಗಡ್ ಆಗಿರೋ ಯುವತಿಯ ಪಾತ್ರಕ್ಕೆ ಅವರು ಜೀವ ತುಂಬಿದ್ದಾರೆ. ಸದ್ಯ ಸೆಟ್‌ನಲ್ಲಿ ತೆಗೆದಿರುವ ನಟಿಯ ವಿಡಿಯೋ ತುಣುಕುಗಳು ಕ್ಯೂಟ್ ಆಗಿ ಮೂಡಿಬಂದಿದೆ.

ಕೆಡಿ ಕನ್ನಡದ ಬಹ ನಿರೀಕ್ಷಿತ ಚಿತ್ರಗಳಲ್ಲಿ ಒಂದಾಗಿದ್ದು ಭಾರತೀಯ ಚಿತ್ರರಂಗದ ಬೇರೆ ಬೇರೆ ಭಾಷೆಯ ಸ್ಟಾರ್ ಕಲಾವಿದರೆಲ್ಲ ಈ ಚಿತ್ರದಲ್ಲಿ ಅಭಿನಯಿಸಿದ್ದಾರೆ, ಧ್ರುವ ಸರ್ಜಾ, ರೀಷ್ಮಾ ನಾಣಯ್ಯ ಜೊತೆ ಶಿಲ್ಪಾ ಶೆಟ್ಟಿ, ಕ್ರೇಜಿಸ್ಟಾರ್ ರವಿಚಂದ್ರನ್, ಸಂಜಯ್ ದತ್, ರಮೇಶ್ ಅರವಿಂದ್ ಸೇರಿದಂತೆ ಅನೇಕ ಕಲಾವಿದರು ನಟಿಸಿದ್ದಾರೆ. ಜೋಗಿ ಪ್ರೇಮ್ ಅವರು ಈ ಚಿತ್ರಕ್ಕೆ ಕಥೆ, ಚಿತ್ರಕಥೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಸದ್ಯದಲ್ಲೇ ಈ ಸಿನಿಮಾದ ರಿಲೀಸ್ ಬಗ್ಗೆ ಅಪ್ಡೇಟ್ ಸಿಗಲಿದೆ.

# ಪುನೀತ್ ರಾಜ್‌ಕುಮಾರ್ ನಟನೆಯ 'ಜಾಕಿ' ಚಿತ್ರ ನೆನಪಿಸಿದ 'ಎಕ್ಕ'



**ಜೂ**ನ್ 6ರಂದು ಯುವ ರಾಜ್‌ಕುಮಾರ್ ಅಭಿನಯದ ಎಕ್ಕ ಚಿತ್ರ ಬಿಡುಗಡೆಗೆ ಸಜ್ಜಾಗಿದ್ದು, ಏಪ್ರಿಲ್ 23ರಂದು ನಟ ಯುವ ರಾಜ್‌ಕುಮಾರ್ ಅವರು ಜನ್ಮದಿನ ಆಚರಿಸಿಕೊಂಡಿದ್ದು, ಏಪ್ರಿಲ್ 24ರಂದು ಡಾ. ರಾಜ್‌ಕುಮಾರ್ ಅವರ ಹುಟ್ಟುಹಬ್ಬದಂದು ಚಿತ್ರತಂಡ ಟೀಸರ್ ಬಿಡುಗಡೆ ಮಾಡಿದೆ.

ಮುಖಕ್ಕೆ ಬಣ್ಣ ಬಳಿದುಕೊಂಡು, ತಲೆಗೆ ಟೋಪಿ, ಒರಟಾದ ವೇಷಭೂಷಣದೊಂದಿಗೆ ಮಾಸ್ ಡೈಲಾಗ್ ಹೊಡೆಯುತ್ತಾ ಪೊರಕೆಯೊಳಗೆ ಗನ್ ಇಟ್ಟು ಶೂಟ್ ಮಾಡುವ ದೃಶ್ಯದಲ್ಲಿ ಯುವ ಕಾಣಿಸಿಕೊಂಡಿದ್ದಾರೆ. ಇದು ಒಂದು ಕ್ಷಣ ಪುನೀತ್ ರಾಜ್‌ಕುಮಾರ್ ಅವರ ಜಾಕಿ ಚಿತ್ರವನ್ನು ನೆನಪಿಸುತ್ತದೆ. ಈ ಟೀಸರ್ ತನ್ನದೇ ಆದ ಹೊಸ ಪರಿಮಳವನ್ನು ತಂದಿದ್ದು, ಗಾಢವಾದ, ದಿಟ್ಟ ಮತ್ತು ಉದ್ವಿಗ್ನತೆಯಿಂದ ತುಂಬಿದೆ. ಯುವ ಕತ್ತಿಯನ್ನು ಹಿಡಿದು ಮಾಸ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

ಡಾಲಿ ಧನಂಜಯ್ ನಟನೆಯ 'ರತ್ನನ್ ಪ್ರಪಂಚ' ಸಿನಿಮಾ ನಿರ್ದೇಶಿಸಿದ್ದ ರೋಹಿತ್ ಪದಕಿ ಈ ಸಿನಿಮಾಗೆ ಆಕ್ಷನ್ ಕಟ್ ಹೇಳಿದ್ದು, ಚಿತ್ರದಲ್ಲಿ ಸಂಪದ ಮತ್ತು ಸಂಜನಾ ಆನಂದ್ ನಾಯಕಿಯರಾಗಿ ನಟಿಸಿದ್ದಾರೆ. ಜೊತೆಗೆ ಅತುಲ್ ಕುಲಕರ್ಣಿ ಮತ್ತು ಡೆಡ್ಲಿ ಆದಿತ್ಯ ಪ್ರಮುಖ ಪಾತ್ರಗಳಲ್ಲಿದ್ದಾರೆ. ಚಿತ್ರಕ್ಕೆ ಚರಣ್ ರಾಜ್ ಸಂಗೀತ, ಸತ್ಯ ಹೆಗ್ಡೆ ಛಾಯಾಗ್ರಹಣ ಮತ್ತು ದೀಪು ಎಸ್. ಕುಮಾರ್ ಅವರ ಸಂಕಲನವಿದೆ. ಈ ಚಿತ್ರವನ್ನು ಕೆಆರ್‌ಜಿ ಸ್ಟುಡಿಯೋಸ್‌ನ ಕಾರ್ತಿಕ್ ಗೌಡ ಮತ್ತು ಯೋಗಿ ಜಿ. ರಾವ್, ಜಯಣ್ಣ ಫಿಲಮ್ಸ್‌ನ ಜಯಣ್ಣ ಮತ್ತು ಭೋಗೇಂದ್ರ ಮತ್ತು ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರ ಪಿಆರ್‌ಕೆ ಪ್ರೊಡಕ್ಷನ್ಸ್ ಸಹಯೋಗದೊಂದಿಗೆ ನಿರ್ಮಿಸಲಾಗಿದೆ. ಎಕ್ಕ ಈಗ ಚಿತ್ರೀಕರಣದ ಅಂತಿಮ ಹಂತದಲ್ಲಿದೆ.

POLICE NEWS REGISTERED KA/BGW-1618/2024-26 REGD. WITH RNI NO. 36669/82 PAGES : 16 | POSTED AT BANGALORE PSO BG 560026 Every Tuesday | Publishing Date : 27.4.2025

# ‘Yours Sincerely ರಾಮ್’ ಚಿತ್ರಕ್ಕೆ ನಟಿ ಭಾವನಾ ಎಂಟ್ರಿ!



ಇದೇ ಮೊದಲ ಬಾರಿಗೆ ಆ್ಯಕ್ಷನ್ ಕಟ್ ಹೇಳುತ್ತಿರುವ ಎ.ಆರ್. ವಿಖ್ಯಾತ್ ಅವರ ‘Your's Sincerely ರಾಮ್’ ಚಿತ್ರದಲ್ಲಿ ನಟ ರಮೇಶ್ ಅರವಿಂದ್ ಮತ್ತು ಗಣೇಶ್ ಒಟ್ಟಾಗಿ ನಟಿಸಿದ್ದು, ತೀವ್ರ ಕುತೂಹಲ ಹುಟ್ಟುಹಾಕಿದೆ. ಚಿತ್ರವು 1990ರ ದಶಕದ ಭಾವನಾತ್ಮಕ ತಿರುಳನ್ನು ಒಳಗೊಂಡಿದೆ. ರಾಯಲ ಸ್ಟುಡಿಯೋಸ್ ಅಡಿಯಲ್ಲಿ ಸತ್ಯ ರಾಯಲ ನಿರ್ಮಿಸಿರುವ ಈ ಚಿತ್ರವು ದಿನದಿಂದ ದಿನಕ್ಕೆ ನಿರೀಕ್ಷೆಯನ್ನು ಹೆಚ್ಚಿಸುತ್ತಿದೆ.

ಈ ಹಿಂದೆ ಚಿತ್ರತಂಡವು ಮೀರಾ ಜಾಸ್ಮಿನ್ ಅವರ ಪಾತ್ರದ ಬಗ್ಗೆ ಆರಂಭಿಕ ಚರ್ಚೆಗಳನ್ನು ನಡೆಸಿದೆ ಮತ್ತು ಅವರನ್ನು ಕನ್ನಡ ಚಿತ್ರರಂಗಕ್ಕೆ ಮರಳಿ ಕರೆತರುವ ಕೆಲಸ ಮಾಡುತ್ತಿದೆ ಎಂದು ವರದಿಯಾಗಿತ್ತು. ಇದೀಗ ಚಿತ್ರದ ಇಬ್ಬರು ನಾಯಕಿಯರ ಪೈಕಿ ಒಂದು ಪಾತ್ರಕ್ಕೆ ಭಾವನಾ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಮೂಲವೊಂದು ದೃಢಪಡಿಸಿದೆ.

ಬಹು ಭಾಷೆಗಳಲ್ಲಿ ಕೆಲಸ ಮಾಡಿರುವ ಭಾವನಾ, ಕನ್ನಡ ಚಿತ್ರರಂಗದಲ್ಲಿ ಜನಪ್ರಿಯರಾಗಿದ್ದಾರೆ. ಪುನೀತ್ ರಾಜ್‌ಕುಮಾರ್ ಅಭಿನಯದ ಜಾಕಿ (2010) ಚಿತ್ರದ ಮೂಲಕ ಅವರು ಸ್ಯಾಂಡಲ್‌ವುಡ್‌ಗೆ ಪದಾರ್ಪಣೆ ಮಾಡಿದರು. ನಂತರ ಗಣೇಶ್ ಅವರೊಂದಿಗೆ ರೋಮಿಯೋ (2012) ಚಿತ್ರದಲ್ಲಿ ತೆರೆ ಹಂಚಿಕೊಂಡರು. ಇದಲ್ಲದೆ ಉಪೇಂದ್ರ ಅವರೊಂದಿಗೂ ನಟಿಸಿದ್ದಾರೆ. ವಿಖ್ಯಾತ್ ನಿರ್ಮಾಣದ ಇನ್ಸ್‌ಪೆಕ್ಟರ್ ವಿಕ್ರಮ್ (2021) ಚಿತ್ರದಲ್ಲಿ ನಟ ಪ್ರಜ್ವಲ್ ದೇವರಾಜ್ ಜೊತೆಗೆ ನಟಿಸಿದ್ದಾರೆ. ಇದೀಗ ‘Yours Sincerely ರಾಮ್’ ಚಿತ್ರದ ಮೂಲಕ ಮೊದಲ ಬಾರಿಗೆ ರಮೇಶ್ ಅರವಿಂದ್ ಅವರಿಗೆ ಜೋಡಿಯಾಗಿದ್ದಾರೆ.



ಚಿತ್ರತಂಡದೊಂದಿಗೆ ನಡೆದ ಚರ್ಚೆಯ ನಂತರ ಭಾವನಾ ಚಿತ್ರದಲ್ಲಿ ನಟಿಸಲು ಒಪ್ಪಿಗೆ ಸೂಚಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಶೀಘ್ರದಲ್ಲೇ ಈ ಬಗ್ಗೆ ಅಧಿಕೃತ ಘೋಷಣೆ ಹೊರಬೀಳುವ ನಿರೀಕ್ಷೆಯಿದೆ. ಚಿತ್ರದ ತಾರಾಗಣ ಅಂತಿಮವಾದ ಬಳಿಕ ಅವರ ಹೆಸರುಗಳನ್ನು ಘೋಷಿಸಲು ನಿರ್ಮಾಪಕರು ಯೋಜಿಸುತ್ತಿದ್ದಾರೆ. ಚಿತ್ರತಂಡ ಈಗಾಗಲೇ ರಮೇಶ್ ಅರವಿಂದ್ ಮತ್ತು ಗಣೇಶ್ ಅವರನ್ನು ಒಳಗೊಂಡ ಕೆಲವು ಪ್ರಮುಖ ಭಾಗಗಳ ಚಿತ್ರೀಕರಣವನ್ನು ಮುಗಿಸಿದೆ ಮತ್ತು ಮುಂದಿನ ಭಾಗದ ಚಿತ್ರೀಕರಣಕ್ಕೆ ತಂಡವು ಸಜ್ಜಾಗುತ್ತಿದೆ. ಚಿತ್ರಕ್ಕೆ ನವೀನ್ ಕುಮಾರ್ ಅವರ ಛಾಯಾಗ್ರಹಣ, ಜೆ. ಅನೂಪ್ ಸೀಳಿನ್ ಅವರ ಸಂಗೀತ ಸಂಯೋಜನೆ ಇದೆ.

# ರಾಕೇಶ್ ಅಡಿಗ ನಟನೆಯ ‘ನಾನು ಮತ್ತು ಗುಂಡ- 2’

ಎರಡೂವರೆ ವರ್ಷಗಳ ಹಿಂದೆ ಪ್ರೇಕ್ಷಕರನ್ನು ಸೆಳೆದಿದ್ದ ಮನುಷ್ಯ ಮತ್ತು ನಾಯಿ ನಡುವಿನ ಆಳವಾದ ಬಾಂಧವ್ಯದ ಕಥೆಯನ್ನು ಒಳಗೊಂಡಿದ್ದ ‘ನಾನು ಮತ್ತು ಗುಂಡ’ ಚಿತ್ರ ಇದೀಗ ಹೊಸ ರೂಪದಲ್ಲಿ ಪ್ರೇಕ್ಷಕರ



ಎದುರು ಬರಲು ಸಿದ್ಧವಾಗಿದೆ. ಚಿತ್ರದ ಸೀಕ್ವೆಲ್ ‘ನಾನು ಮತ್ತು ಗುಂಡ- 2’ ಚಿತ್ರ ಬಿಡುಗಡೆಗೆ ಸಜ್ಜಾಗಿದೆ. ಈ ಬಾರಿ, ಸಿಂಬು (ನಾಲ್ಕು ದಿನಗಳ ಚಿತ್ರೀಕರಣದ ನಂತರ ನಿಧನ ಹೊಂದಿದ ನಾಯಿ) ಅವರ ಮಗ ಸಿಂಬಾ ಚಿತ್ರದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿದೆ. ಅದರೊಂದಿಗೆ ಮತ್ತೊಬ್ಬ ಸಹನಟ ಬಂಟಿ ಕೂಡ ಸೇರಿಕೊಂಡಿದ್ದು, ಈ ಭಾವಪೂರ್ಣ ಕಥೆಗೆ ಇನ್ನಷ್ಟು ಮೋಡಿ ಮಾಡಿದೆ.

ರಘು ಹಾಸನ್ ನಿರ್ದೇಶನ ಮತ್ತು ನಿರ್ಮಾಣದ ಈ ಸೀಕ್ವೆಲ್‌ನಲ್ಲಿ ರಾಕೇಶ್ ಅಡಿಗ ನಾಯಕನಾಗಿ ನಟಿಸಿದ್ದಾರೆ. ಮೂಲ ಚಿತ್ರದಲ್ಲಿ ಶಿವರಾಜ್ ಕೆ.ಆರ್. ಪೇಟೆ ನಟಿಸಿದ್ದರು. ಆ ಪಾತ್ರದ ಮಗನಾಗಿ ರಾಕೇಶ್ ನಟಿಸಿದ್ದಾರೆ. ರಚನಾ ಇಂದರ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ. ‘ಮೊದಲ ಭಾಗದ ಚಿತ್ರದ ಸಮಯದಲ್ಲೇ ನಾವು ಸೀಕ್ವೆಲ್ ಕಥೆಯನ್ನು ಸಿದ್ಧಪಡಿಸಿದ್ದೆವು. ಚಿತ್ರವು ಭಾವನೆ, ದೈವಿಕ ವಿಚಾರಗಳು ಮತ್ತು ಸಂದೇಶವನ್ನು ಮಿಶ್ರಣ ಮಾಡುತ್ತದೆ’ ಎಂದು ರಘು ಬಹಿರಂಗಪಡಿಸಿದರು. ಊಟಿ, ತೀರ್ಥಹಳ್ಳಿ ಮತ್ತು ಶಿವಮೊಗ್ಗದಂತಹ ಸುಂದರವಾದ ಸ್ಥಳಗಳಲ್ಲಿ ಚಿತ್ರೀಕರಣ ಮಾಡಲಾಗಿದ್ದು, ಚಿತ್ರವು ಮೇ ತಿಂಗಳಲ್ಲಿ ಕನ್ನಡ, ತೆಲುಗು ಮತ್ತು ಹಿಂದಿ ಸೇರಿದಂತೆ ಐದು ಭಾಷೆಗಳಲ್ಲಿ ಬಿಡುಗಡೆಯಾಗುವ ನಿರೀಕ್ಷೆಯಿದೆ.

ಚಿತ್ರಕ್ಕೆ ಆರ್.ಪಿ. ಪಟ್ನಾಯಕ್ ಸಂಗೀತ ಸಂಯೋಜಿಸಿದ್ದು, ಚಿತ್ರದಲ್ಲಿ ಆರು ಹಾಡುಗಳಿವೆ. ರೋಹಿತ್ ರಾಮನ್ ಮತ್ತು ವಿ. ನಾಗೇಂದ್ರ ಪ್ರಸಾದ್ ಅವರು ಸಾಹಿತ್ಯ ಬರೆದಿದ್ದಾರೆ. ಜೊತೆಗೆ ರಿತ್ವಿಕ್ ಮುರಳೀಧರ್ ಅವರ ಹಿನ್ನೆಲೆ ಸಂಗೀತವನ್ನು ಹೊಂದಿದೆ.




# ಸಂಬಂಧಗಳಲ್ಲಿ ಬೆಳಕಿನ ಹುಡುಕಾಟ; ಮಾನಸಿಕ ಖಿನ್ನತೆಯಿಂದ ಬಿಡಿಸಿಕೊಳ್ಳುವ ತೊಳಲಾಟ!

ಚೊಚ್ಚಲ ಬಾರಿಗೆ ನಿರ್ದೇಶಕನಾಗಿರುವ ವಂಶಿಕೃಷ್ಣ ನಾಯಕನಾಗಿಯೂ ನಟಿಸಿದ್ದಾರೆ. ವಂಶಿಕೃಷ್ಣ ನಿರ್ದೇಶನದ ಫೈರ್ ಫ್ಲೈ ಸಿನಿಮಾ ತೆರೆಕಂಡಿದೆ, ಚಿತ್ರವನ್ನು ಶಿವರಾಜ್‌ಕುಮಾರ್ ಪುತ್ರಿ ನಿವೇದಿತಾ ನಿರ್ಮಾಣ ಮಾಡಿದ್ದಾರೆ, ಫೈರ್ ಫ್ಲೈ ಮೂಲಕ ಬೆಳ್ಳಿತೆರೆಗೆ ನಿರ್ಮಾಪಕಿಯಾಗಿ ಕಾಲಿರಿಸಿದ್ದಾರೆ.

ಈ ‘ಫೈರ್ ಫ್ಲೈ’ ಅಂದರೆ ಮಿಂಚುಹುಳ, ಆದರೆ ಚಿತ್ರತಂಡ ಬೆಳಕಿನಾಚೆಗೆ ಮೂಡುವ ಬೆಳಕೊಂದಕ್ಕೆ ‘ಫೈರ್ ಫ್ಲೈ’ ಅಂತ ಇಲ್ಲಿ ಕರೆಯಲಾಗಿದೆ. ಜೀವನದಲ್ಲಿ ಎಲ್ಲವೂ ಸುಗಮವಾಗಿ ಸಾಗಿದ್ದರೆ ಬದುಕೇ ಸೊಗಸು. ಒಮ್ಮೆ ಬಾಳಲ್ಲಿ ಏರುಪೇರಾದರೆ ಮುಂದೆ ಎದುರಾಗುವ ಸುಖ ದುಃಖದ ಸಂಕಷ್ಟಗಳೇ ದೊಡ್ಡ ಸರಮಾಲೆಯಂತೆ ಕಾಣುತ್ತದೆ. ಅಂತದ್ದೇ ಒಬ್ಬ ಹುಡುಗನ ಸುಂದರವಾಗಿದ್ದ ಬದುಕಲ್ಲಿ ಎದುರಾಗುವ ದುರಂತ ಘಟನೆ ಏನೆಲ್ಲಾ ಎಡವಟ್ಟು ಮಾಡುತ್ತದೆ ಎಂಬುದೇ ಸಿನಿಮಾ ತಿರುಳು, ಆತ ತನ್ನ ಜೀವನದ ಸುಖ-ದುಃಖಗಳ ಜಂಜಾಟದಲ್ಲಿ ಹೇಗೆ ಬೆಳಕು ಕಂಡುಕೊಳ್ಳುತ್ತಾನೆ ಎಂಬುದನ್ನು ತಿಳಿದುಕೊಳ್ಳಲು ಸಿನಿಮಾ ನೋಡಬೇಕು.

ವಿವೇಕಾನಂದ ಅಪ್ಪ-ಅಮ್ಮನ ಪ್ರೀತಿಯ ವಿಕ್ಕಿ (ವಂಶಿ). ವಿದೇಶದಲ್ಲಿ ಓದುತ್ತಿದ್ದ ಆತ ನಾಲ್ಕು ವರ್ಷಗಳ ಬಳಿಕ ತನ್ನೂರಾದ ಮೈಸೂರಿಗೆ ಮರಳುತ್ತಾನೆ. ತನ್ನ ದೊಡ್ಡಪ್ಪನ ಮಗನ ಮದುವೆಗಾಗಿ ಆತ ಮೈಸೂರಿಗೆ ಬರುತ್ತಾನೆ. ಆತನನ್ನು ಸ್ವಾಗತಿಸಲು ಅಪ್ಪ-ಅಮ್ಮ (ಅಚ್ಯುತ್ ಕುಮಾರ್-ಸುಧಾರಾಣಿ) ವಿಮಾನ ನಿಲ್ದಾಣಕ್ಕೆ ಬರುತ್ತಾರೆ. ಅಲ್ಲಿಂದ ಮರಳುವ ವೇಳೆ ಅಪಘಾತವಾಗಿ ವಿಕ್ಕಿ ಅಪ್ಪ-ಅಮ್ಮನನ್ನು ಕಳೆದುಕೊಳ್ಳುತ್ತಾನೆ.

ಕೋಮಾಗೆ ಮರಳಿದ ಮೂರು ತಿಂಗಳ ನಂತರ ಪ್ರಜ್ಞೆ ಮರಳುತ್ತದಾದರೂ ಅವನು ಮೊದಲಿನಂತೆ ಇರುವುದಿಲ್ಲ, ದೊಡ್ಡ ಕುಟುಂಬವಿದ್ದರೂ ಒಬ್ಬಂಟಿಯಾಗಿರುವ ಆತ ಖಿನ್ನತೆ, ನಿದ್ರಾಹೀನತೆ, ಒಂಟಿತನ ಮತ್ತು ತನ್ನನ್ನು ಪ್ರೀತಿಸುವವರಿಲ್ಲದೆ ನರಳುತ್ತಾನೆ. ಜೀವನದಲ್ಲಿ ಉದ್ದೇಶವಿಲ್ಲದೆ, ಏನು ಮಾಡಬೇಕೆಂದು ಗೊತ್ತಿಲ್ಲದೆ ಕಷ್ಟಪಡುತ್ತಾನೆ. ಇದೆಲ್ಲವನ್ನೂ ಆತ ಹೇಗೆ ಎದುರಿಸುತ್ತಾನೆ ಎಂಬುದೇ ಚಿತ್ರದ ಕಥೆ. ಅಲ್ಲಿಂದ ವಿಕ್ಕಿ ಖಿನ್ನತೆಗೆ ಜಾರುತ್ತಾನೆ, ನಿದ್ರಾಹೀನನಾಗುತ್ತಾನೆ. ಇದರಿಂದ ಆತ ಹೇಗೆ ಹೊರಬರುತ್ತಾನೆ ಎನ್ನುವುದೇ ಚಿತ್ರದ ಕಥೆ.

ಕಥೆಯ ಎಳೆ ಸರಳವಾಗಿದೆ. ಆದರೆ ಇದನ್ನು ಒಂದು ಭಿನ್ನವಾದ ರೀತಿಯ ಚಿತ್ರಕಥೆಯಲ್ಲಿ ವಂಶಿ ಪ್ರಸ್ತುತಪಡಿಸಿದ್ದಾರೆ. ಚಿತ್ರಕಥೆಯ ಆಲೋಚನೆಯೇ ವಿಭಿನ್ನವಾಗಿದೆ. ಕೌನ್ಸಿಲಿಂಗ್ ಸಂದರ್ಭದಲ್ಲಿ ವಂಶಿ ತನ್ನ ಜೀವನದ ಕಥೆಯನ್ನು ಇತರರೊಂದಿಗೆ ಹಂಚಿಕೊಳ್ಳುವ ರೀತಿಯಲ್ಲಿ ಸಿನಿಮಾ ಕಥೆಯ ನಿರೂಪಣೆಯಿದೆ. ಸಾಮಾನ್ಯವಾಗಿ ಈಗಿನ ಜನರೇಷನ್ ಫೇಸ್ ಮಾಡುವ ಒಂಟಿತನ, ನಿದ್ರಾಹೀನತೆ, ಖಿನ್ನತೆಯಂತಹ ವಿಚಾರಗಳನ್ನ ಹೈಲೈಟ್ ಮಾಡಿಕೊಂಡು, ಸ್ಕ್ರೀನ್ ಪ್ಲೇ ಮಾಡಿಕೊಂಡಿದ್ದಾರೆ ವಂಶಿ. ಮಾನಸಿಕ ತೊಳಲಾಟದಲ್ಲಿ ಇರುವವರು ಎದುರಿಸುವ ಸವಾಲುಗಳನ್ನು ಅತ್ತ ಹಾಸ್ಯಮಯವಾಗಿಯೂ, ಇತ್ತ ಭಾವನಾತ್ಮಕವಾಗಿಯೂ ಪರದೆ ಮೇಲೆ ತರುವ ಪ್ರಯತ್ನ ಮಾಡಲಾಗಿದೆ. ಮೊದಲಾರ್ಧ ಚಿತ್ರ ಸ್ವಲ್ಪ ನಿಧಾನವೆನಿಸಿದರೂ ನೋಡಿಸಿಕೊಂಡು ಹೋಗುತ್ತದೆ. ದ್ವಿತೀಯಾರ್ಧದಲ್ಲಿ ಕೆಲವು ದೃಶ್ಯಗಳು ವಿಪರೀತ ಎಳೆದಂತಾಗಿದೆ. ಕೆಲ ದೃಶ್ಯಗಳು ಸಿನಿಮಾದ ಅವಧಿಯನ್ನು ಹೆಚ್ಚು ಮಾಡಿದೆ ಎಂಬಂತೆ ಭಾಸವಾಗುತ್ತದೆ. ಕಲಾತ್ಮಕವಾಗಿ ಒಂದು ವಿಭಿನ್ನ ಪ್ರಯತ್ನಕ್ಕೆ ಕೈಹಾಕಿರುವ ವಂಶಿ, ಚಿತ್ರಕಥೆ ವಿಷಯದಲ್ಲಿ ಇನ್ನಷ್ಟು ಗಮನಹರಿಸಬೇಕಿತ್ತು. ಕೆಲವು ವಿಷಯಗಳು ಮತ್ತು ದೃಶ್ಯಗಳು ಚಿತ್ರವನ್ನು ಸಾಕಷ್ಟು ಸುದೀರ್ಘವಾಗಿಸಿವೆ.

ವಂಶಿ ಇಡೀ ಸಿನಿಮಾವನ್ನು ಆವರಿಸಿಕೊಂಡಿದ್ದಾರೆ. ನಟನೆಯಲ್ಲಿ ಅವರು ಪಳಗಿದ್ದಾರೆ. ಸುಧಾರಾಣಿ ಮತ್ತು ಅಚ್ಯುತ್ ಕುಮಾರ್ ಅವರು ಇದ್ದಷ್ಟು ಹೊತ್ತು ಪ್ರೇಕ್ಷಕರನ್ನು ಸೆಳೆದುಕೊಳ್ಳುತ್ತಾರೆ. ನಟಿ ರಚನಾ ಇಂದರ್‌ಅವರಿಗೆ ಹೆಚ್ಚು ಸ್ಕ್ರೀನ್ ಸ್ಪೇಸ್ ಸಿಕ್ಕಿಲ್ಲ ಒಂದು ಹಾಡು ಮತ್ತು ಎರಡು ಸೀನ್‌ಗೆ ಮಾತ್ರ ಸೀಮಿತ. ಶಿವರಾಜ್‌ಕುಮಾರ್ ಅವರು ಒಂದು ವಿಶೇಷ ಪಾತ್ರದಲ್ಲಿ ಬಂದುಹೋಗುತ್ತಾರೆ. ಚರಣ್‌ರಾಜ್ ಅವರ ಸಂಯೋಜನೆಯ ಹಾಡುಗಳು ನೆನಪಿನಲ್ಲಿ ಉಳಿಯುವುದಿಲ್ಲ, ಅಭಿಲಾಷ್ ಕಳತ್ತಿ ಛಾಯಾಗ್ರಹಣ ಚಿತ್ರಕ್ಕೆ ಹೊಸ ರೂಪ ನೀಡಿದೆ.

Vol. 40 No. 47 Edited, Printed, Published & Owned by M. RAHUL, Printed by him at Shri Omkar Printers, # 4/1, Mahimappa Industrial Estate, Near PIA Bhavan, 100ft Road, Jalahalli Cross, Chokkasandra, T. Dasarahalli Post, BANGALORE-560 057. ☎ 080-23588510, 9513892666
Email: policenewsreporter@gmail.com